UNIVERSAL
LIBRARY
OU_202272
UNIVERSAL
LIBRARY

ಜಯಕರ್ನಾಟಕ ಗ್ರಂಥಮಾಲೆಯ ೨೦ನೆಯ ಪುಷ್ಪ

ಮಲ್ಲಿಗೆದಂಡೆ

(ಮಧುರಚೆನ್ನರ ಮುನ್ನುಡಿಯೊಡನೆ)

ಸಂಗ್ರಾಹಕರು:

ಶ್ರೀಮಾನ್ ಕಾಪಸೆ ರೇವಪ್ಪನವರು

ಹಲಸಂಗಿ

ಮೊದಲ ಮುದ್ರಣ] [ಬೆಲೆ ೧೨ ಆಣೆಗಳು

೧೯೩೫

ಪ್ರಕಾಶಕರು:
ಬೆಳಗಾವಿ ರಾಮಚಂದ್ರರಾಯರು
ಜಯಕರ್ನಾಟಕ ಕಾರ್ಯಾಲಯ
ರೈಟರ ಓಣಿ, ಧಾರವಾಡ

ಮುದ್ರಕರು
ಮೇವುಂಡಿ ಮಲ್ಲಾರಿಯವರು
ಕಲಾಸಿಂಧು ಮುದ್ರಣಾಲಯ
ಧಾರವಾಡ

ಮೊದಲ ಮಾತು

ಕನ್ನಡಿಗರಿಗೆ ಜನಪದ ಸಾಹಿತ್ಯದ ರುಚಿಯನ್ನು ಹತ್ತಿಸಿದ ಶ್ರೇಯಸ್ಸು ಬಹ್ವಂಶದಿಂದ ಹಲಸಂಗಿಯ ಗೆಳೆಯರಿಗೆ ಸಲ್ಲಬೇಕು. ಅವರು ಮೊದಲು ಬಯಲುಕರ್ನಾಟಕದಲ್ಲಿ ಕೇಳಿ ಪದಗಳನ್ನು ಕೊಡತೊಡಗಿದರು. ಗ್ರಾಮಜೀವನವನ್ನು ಕುರಿತು ತಿಳಿಸುತ್ತಿರುವ ಕೆಲವು ಗೀಗೀಯ ಜನರನ್ನು, ಹಲಸಂಗಿಯ ಭಾಗದ ಶ್ರೀಯುತರಾದ ಚೆನ್ನಮಲ್ಲಪ್ಪ, ಸಿಂಪಿ ಲಿಂಗಣ್ಣ, ರಾಘು, ಧೂಲಾಸಾಹೇಬ ಹಾಗು ಈ ಪದಗಳ ಸಂಗ್ರಾಹಕರಾದ ಕಾಪಸೆ ರೇವಪ್ಪನವರು ಬಾಪನವರೆ ಅವರು. ಇವರ ನಿರಂತರ ಪ್ರಯತ್ನವು ಈ ಗ್ರಂಥಮಾಲೆಗೆ ನೂರು ಉತ್ತಮ ಗ್ರಂಥಗಳನ್ನು ಒದಗಿಸಿತು. ಇದರಿಂದಾಗಿ ಜನಪದ ಹಾಡುಗಳ ಬಗ್ಗೆ ಜನರಲ್ಲಿ ಆಸಕ್ತಿ ಹೆಚ್ಚಿ, ಉತ್ತರಕರ್ನಾಟಕದಲ್ಲಿ ಅವನ್ನು ಸಂಗ್ರಹಿಸುವ ಪ್ರವೃತ್ತಿ ಕಂಡುಬರುತ್ತಿದೆ. ಅಂತಹವರಲ್ಲಿ ಜನಸಾಹಿತ್ಯ ಪ್ರೇಮಿ ಎಂ. ಎಸ್. ರಂಗಸ್ವಾಮಿಯವರು ನಮಗೆ ಅಗ್ರತಃ ಕಂಡುಬರುತ್ತಾರೆ. ಈ ಸಾಹಿತಿಗಳು ಅವರನ್ನು ಬಿಟ್ಟರು. ಅವರಲ್ಲಿಯೂ ಸ್ವತಂತ್ರವಾದ ಸ್ವಂತದ ಜನಪದ ಸಾಹಿತ್ಯದ ದೊಡ್ಡ ಸಂಗ್ರಹವಿದೆ. ಅನುಕೂಲ ಕಾಲಪ್ರಾಪ್ತವಾದರೆ ನಮ್ಮ ವಾಚಕರಿಗೆ ಅದು ಲಭಿಸೀತೆಂದು ಆಶಿಸುತ್ತೇವೆ.

ಜನಪದ ಸಾಹಿತ್ಯವು ಜನಪ್ರಿಯವಾಗುವುದಕ್ಕೆ ಅದರ ರಸಸಾರವು ಕಾರಣ. ಅದು ಹಿರಿಯರನ್ನೂ ಮುಗ್ಧಗೊಳಿಸಿದ. ಅಪರಿಮಿತ ಕನ್ನಡದ ವಾಙ್ಮಯರಂಗಕ್ಕೆ ಹೊಸಬೆಳಕು ಬೀರುತ್ತಿದೆ. ಅದರಲ್ಲಿ ನಾಗರಿಕರ ಶಬ್ದಭಂಡಾರಕ್ಕೆ ಸೇರಬೇಕಾಗುವ ಶಬ್ದಗಳು, ಅಚ್ಚಗನ್ನಡದ ನುಡಿಗಳು ಸಿಕ್ಕುವಿವೆ, ಮನೋಜ್ಞವಾದ ಉಪಮೆಗಳು, ಒಳ್ಳೆಯ ವಾಕ್ಪ್ರಚಾರಗಳು, ಸೊಗಸಾದ ಗಾದೆಯ ಮಾತುಗಳು—ನಮಗೆಲ್ಲ ಅಪರಿಚಿತವಾದುವು- ಬೇಕಾದಷ್ಟಿವೆ. ಅವುಗಳಿಗೆ ತಕ್ಕ ರೀತಿಯಲ್ಲಿ ಒಪ್ಪಕೊಟ್ಟು ಸ್ವೀಕರಿಸಿ ಸನ್ಮಾನಿತ

ಕಾವ್ಯದೇವಿಯನ್ನು ಇನ್ನೂ ಹೆಚ್ಚು ಸುಂದರವಾಗಿ ಅಲಂಕರಿಸಬಹುದಾಗಿದೆ. ಆದುದರಿಂದ ರಸಿಕರಿಗೆ ವಾಚನೀಯವೂ ಸಾಹಿತಿಗಳಿಗೆ ಅವಶ್ಯ ಅಭ್ಯಸನೀಯವೂ ಆಗಿರುವುದೀ ಸಾಹಿತ್ಯ.

ಸಾಹಿತ್ಯವು ಜನಜೀವನದ ಪ್ರತಿಬಿಂಬವಷ್ಟೆ? ಬೆರಳೆಣಿಸುವಷ್ಟು ಪಟ್ಟಣಗಳನ್ನೂ ಸಂಸ್ಕೃತರೆನಿಸುವ ನಾಗರಿಕರನ್ನೂ ಬಿಟ್ಟರೆ, ನಮ್ಮ ನಾಡಿನ ಜನಜೀವನವು ನೂರರಲ್ಲಿ ತೊಂಬತ್ತು ಪಾಲು ಹಳ್ಳಿಗಳಲ್ಲಿದೆ. ನಮ್ಮ ನಾಡಿಗರ ಅನುದಿನದ ಆಚಾರ ವಿಚಾರಗಳನ್ನಾಗಲಿ, ಸಂಸ್ಕೃತಿಯನ್ನಾಗಲಿ, ಸಾಂಪ್ರದಾಯಿಕ ಇತಿಹಾಸವನ್ನಾಗಲಿ ಕಾಣಬೇಕಾದರೆ ಜನಪದ ಸಾಹಿತ್ಯಕ್ಕೆ ಮೊರೆ ಹೊಗಬೇಕಾಗುವುದು.

ನಮ್ಮ ಜನಸಾಮಾನ್ಯರ ಭಾವನೆಯ ಉಚ್ಚತೆ, ಶೀಲದ ಸ್ವಚ್ಛತೆ, ವಿಚಾರಗಳ ವಿದಗ್ಧತೆ ಇವು ಆ ಸಾಹಿತ್ಯದಲ್ಲಿ ಓದುಗರನ್ನು ಅಚ್ಚರಿಗೊಳಿಸುವಂತೆ ಒಡಮೂಡಿಲ್ಲವೆ? ಜನಜೀವನದ ಇತಿಹಾಸ ಸಂಶೋಧಕರಿಗೆ ಶಿಲಾಲೇಖ-ತಾಮ್ರಪಟಗಳಿಗಿಂತಲೂ ಹೆಚ್ಚಿನ ಸಹಾಯವು ಈ ಸಾಹಿತ್ಯದಿಂದ ದೊರೆಯದಿರಲಾರದು.

ಇದೀಗ ಈ ಸಾಹಿತ್ಯದ ಅಭ್ಯಾಸಕಾಲವು ಒದಗಿದೆ. ಅದಕ್ಕಾಗಿ ಜಯ ಕರ್ನಾಟಕ ಗ್ರಂಥಮಾಲೆಯಿಂದ ಗರತಿಯ ಹಾಡು, ಜೀವನ ಸಂಗೀತ, ಇದೀಗ ಮಲ್ಲಿಗೆದಂಡೆ—ಈ ಮೂರನ್ನು ಒದವಿಸಿದ್ದೇವೆ. ಕನ್ನಡಿಗರು ಇವುಗಳ ಲಾಭವನ್ನು ಪಡೆದುಕೊಳ್ಳುವರೆಂದು ಆಶಿಸುತ್ತೇವೆ.

ಈ ಪ್ರಕಟನೆಯೊಂದಿಗೆ ಗ್ರಂಥಮಾಲೆಯ ೩ನೆಯ ವರ್ಷವು ಮುಗಿಯಿತು. ಹೊಸ ವರುಷವನ್ನು ಒಂದು ಉತ್ತಮವಾದ ಕಾದಂಬರಿಯಿಂದ ಆರಂಭಿಸಬೇಕೆಂದು ವಿಚಾರವಿದೆ. ಸಹೃದಯರಾದ ಕನ್ನಡಿಗರು ಎಂದಿನಂತೆ ಪ್ರೋತ್ಸಾಹಿಸುವರೆಂದು ದೃಢವಿಶ್ವಾಸವಿದ್ದೇ ಇದೆ. ಈ ಸಂಗ್ರಹವನ್ನು ಸಮಗ್ರವಾಗಿ ಒದಗಿಸಿಕೊಟ್ಟ ಶ್ರೀ. ರೇವಪ್ಪನವರಿಗೂ ಅವರ ಗೆಳೆಯರಿಗೂ ವಂದನೆಗಳು.

ಧಾರವಾಡ
ಯುವಸಂವತ್ಸರ, ಚಂಪಾಷಷ್ಠಿ
೧-೧೨-೧೯೩೫

ಬೆಳಗಾವಿ ರಾಮಚಂದ್ರರಾಯ

ಮುನ್ನುಡಿ

"ನುಡಿದದ್ದೇ ವೇದ, ನಡೆದದ್ದೇ ಯೋಗ" ಎನ್ನುವ ಸಹಜ ಸುಜ್ಞಾನಿಗಳ ಜೀವನದೊಳಗಿನ ತೀರ ಸಾಮಾನ್ಯ ಸಂಗತಿಗಳು ಕೂಡ ಉಳಿದವರಿಗೆ ತೀರ ಬೋಧಪ್ರದವಾಗಿರುವಂತೆ "ನುಡಿದದ್ದೆಲ್ಲ ಕವಿತೆ, ನಡೆದದ್ದೆಲ್ಲ ರಸ"ವಾಗಿ ಪರಿಣಮಿಸಿದ ರಸಪುರುಷರ ಅಂತರಂಗದಿಂದುಕ್ಕಿಬಂದ ಒಂದು ಚಿಕ್ಕ ನುಡಿಯು ಕೂಡ ಸರ್ವಸಾಮಾನ್ಯರಿಗೆ ಅರಗಳಿಗೆಯ ಮಟ್ಟಿಗಾದರೂ ಸ್ವರ್ಗದ ಸುಳುವನ್ನು ತೋರದಿರದು. ಅಂತಹ ಸ್ವರ್ಗದ ಮಕ್ಕಳು ಇನ್ನೆಂದಿಗೇ ಆಗಲಿ ನಮ್ಮ ನಾಡಿನಲ್ಲಿ ಉದಯಿಸಲಿಕ್ಕಿರುವರೆಂಬುದಕ್ಕೆ ಪೂರ್ವಚಿಹ್ನವೆಂಬಂತೆ, ಇದೀಗ ಅಂತಹ ಜೀವನಕ್ಕೆ ಆಶೆಪಟ್ಟು ಹರಿದಾಡುವವರು ಹಲಕೆಲವರು ಹುಟ್ಟಿರುವರಷ್ಟೆ! ವರಕವಿಗಳು ಉದಯಿಸುವ ಮುಂಚೆ ಸಮ್ಮಂಧ ನರಕವಿಗಳ ಜಂಗುಳಿಯೇಳುವುದು ಅನಿವಾರ್ಯ. ಇವರ ಕಾವ್ಯಶಕ್ತಿಯು ಸಾಗುವಳಿಯಿಂದ ಬೆಳೆಯಬೇಕಾದದ್ದು. ಇವರ ಸಸಿಗೆ ಹೊರಗಿನ ನೀರೂ ಹವೆಯೂ ಕಾಲಕಾಲಕ್ಕೆ ಒದಗಬೇಕು. ಈ ದೃಷ್ಟಿಯಿಂದ ಸಂಗ್ರಹಿಸಿದ ಪ್ರಸ್ತುತಗೀತಗುಚ್ಛವು ನವ್ಯ ಕಾವ್ಯಕುಮಾರಿಯ ಕಳೆಯನ್ನು ಹೆಚ್ಚಿಸುವುದಕ್ಕೆಂದು ಅವಳಿಗೆ ಕಟ್ಟಿದ "**ಮಲ್ಲಿಗೆ ದಂಡೆ**" ಯಾಗಿದೆ.

ಜನಪದ ಸಾಹಿತ್ಯದ ಬೆಲೆಯನ್ನು ನಾನಿಲ್ಲಿ ಹೊಸದಾಗಿ ನಿರ್ಣಯಿಸುವ ಗೊಡವೆಗೇನೂ ಹೋಗಲಾರೆ. ಏಕೆಂದರೆ ಗೆಳೆಯ ಬೇಂದ್ರೆಯವರು 'ಗರತಿಯ ಹಾಡಿ'ನ ಪ್ರಸ್ತಾವನೆಯಲ್ಲಿ ಆ ಮಾತನ್ನು ವಿವರವಾಗಿ ಪ್ರತಿಪಾದಿಸಿದ್ದಾರೆ. ಇದೀಗ ನನ್ನ ಚಿತ್ತಕ್ಕೆ ಅಂಟಿಕೊಂಡಿರುವ ಒಗಟಗಳು ಎರಡು. ಇವೆರಡರಲ್ಲಿ ಮೊದಲನೆಯದು '**ಕಾವ್ಯದ ಉಗಮ**'; ಎರಡನೆಯದು '**ಕಾವ್ಯದ ಲಕ್ಷಣ**'. ಸದ್ಯಕ್ಕೆ ಕವನಪ್ರವೃತ್ತಿಯೇನೋ ಬಹಳ ಜನರಲ್ಲಿ ಕಾಣುತ್ತಿದೆ

ಆದರೆ ಅದರ ಸೆಲೆಯು ನಮಗೆ ಇನ್ನೂ ಸರಿಯಾಗಿ ಸಿಕ್ಕಿಲ್ಲವೆ-ವೇ ಹೇಳಬೇಕು. ಅಲ್ಲದೆ ಕವಿತೆ ಬರೆಯುವ ಉಬ್ಬು ಕಾವ್ಯಸುಂದರಿಯ ರೂಪಲಾವಣ್ಯವನ್ನು ಇನ್ನೂ ತಕ್ಕಷ್ಟು ಕಂಡಿಲ್ಲವೆಂದೇ ಹೇಳಬೇಕು ಹದಿನಾರು ವರುಷಗಳ ಹಿಂದೆ '**ಪ್ರಭಾತ**' ಸಮಯದಲ್ಲಿ ಛಂದಸ್ಸೊಂದೇ ಕವಿತೆಯ ಮುಖ್ಯಲಕ್ಷಣ ವಾಗಿ ಇದ್ದದ್ದು ಹಾಗೆ ಒಂದು ಪಟ್ಟ ಕಳೆದ ಮೇಲೆ ಈ ನಾಲ್ಕಾರು ವರುಷ ಗಳಲ್ಲಿ ಭಾವವು ಕಾವ್ಯದ ಜೀವವೆಂಬ ವ್ಯಾಖ್ಯೆಗೆ ಬಂದುಮುಟ್ಟಿವೆ. ಆದರೆ ಈ ಮಾತೂ ಕೂಡ ತಕ್ಕಷ್ಟು ಸ್ಪಷ್ಟವಲ್ಲವೆಂದೇ ಎನ್ನಬೇಕು.

ಇದೀಗ ನಾನು ಮಾತನಾಡುತ್ತಿರುವುದೆಲ್ಲಾ ಒಂದು ಗ್ರಹಿಕೆಯಿಂದ. ಅದೇನೆಂದರೆ—ಎಲ್ಲ ವಿದ್ಯೆಗಳಂತೆ ಕಾವ್ಯಕಲೆಯೂ ಒಂದು ವಿದ್ಯೆ, ಅದನ್ನು ವ್ಯಾಸಂಗ ಮಾಡಿ ಅದರಲ್ಲಿ ತಜ್ಞತೆಯನ್ನು ಗಳಿಸಬಹುದು. ವರಕವಿಗಳ ಮಾತನ್ನು ಒತ್ತಟ್ಟಿಗಿಟ್ಟರೆ ಪ್ರಯತ್ನಸಿದ್ಧರಾದ ನಮ್ಮಂಥ ನರಕವಿಗಳ ಮಟ್ಟಿ ಗಾದರೂ ಈ ಮಾತು ತುಂಬಾ ದಿಟವಾಗಿದೆಯೆಂದು ನನ್ನ ಭಾವನೆ. ಕಾವ್ಯ ರತ್ನವನ್ನು ಯಾವ ಗಣಿಯಲ್ಲಿ ಅರಸಬೇಕು? ಮತ್ತು ಅದನ್ನು ಗುರುತಿಸು ವುದಕ್ಕೆ ಕುರುಹುಗಳಾವವು? —ಎಂಬೆರಡು ಮಾತುಗಳು ಸರಿಯಾಗಿ ತಿಳಿ ದಲ್ಲದೆ ನಮ್ಮ ವ್ಯವಸಾಯವು ಎಂದಿಗೂ ಊರ್ಜಿತದಶೆಗೆ ಬಾರದು. ನಮಗೆ ಬೇಕಾಗಿರುವ ಮೇಲ್ಕಾಣಿಸಿದ ಎರಡು ಮಾತುಗಳ ಜ್ಞಾನವು ನಮಗಾಗಬೇಕಾ ದರೆ ಅದಕ್ಕೆ ಎರಡೇ ಮಾರ್ಗಗಳುಂಟು. ಜಗತ್ತಿನ ಪುರಾತನ ನೂತನ ಮಹಾಕವಿಗಳ ಕೃತಿಗಳನ್ನು ಪರಿಶೀಲಿಸುವುದೊಂದು; ಮತ್ತು ಕವಿಗಳಿಂದೆನಿ ಸಿಕೊಳ್ಳುವ ಹಂಬಲದ ಸೋಂಕು ಎಳ್ಳಷ್ಟೂ ಇಲ್ಲದ ಅಶಿಕ್ಷಿತ ಪುರಾತನರ ಜನಪದ ಸಾಹಿತ್ಯವನ್ನು ಸೋಸಿ ನೋಡುವುದು ಇನ್ನೊಂದು. ಒಂದು ಕವಿ ಗಳ ಕವಿತೆ ಇನ್ನೊಂದು ಕವಿಗಳಲ್ಲದವರ ಕವಿತೆ ಕವಿಗಳಲ್ಲದವರಲ್ಲಿಯೂ ಜೀವನದಲ್ಲಿ ಒಮ್ಮೊಮ್ಮೆ ರಸನಿಮಿಷಗಳು ಬಂದಾಗ ಕಾವ್ಯೋದ್ಗಾರಗಳು ಹೊರಹೊಮ್ಮಬಲ್ಲವು. ಬೌದ್ಧಿಕ ಸಂಘರ್ಷಣವಿಲ್ಲದ ಇಂಥ ಪುರಾತನ ಗ್ರಾಮ್ಯ ಗೀತಗಳ ಅನುಶೀಲನದಿಂದ ಕಾವ್ಯವಿಷಯಕವಾಗಿರುವ ಒಗಟುಗಳು ಒಡೆ ಯುವ ಸಂಭವವು ಹೆಚ್ಚಿಗೆ ಇದೆ

ಒಮ್ಮೆ ಗೆಳೆಯ ಬೇಂದ್ರೆಯವರೂ ನಾನೂ ಕೂಡಿಕೊಂಡು ನಮ್ಮ

ಹಳ್ಳಿಯಲ್ಲಿಯೇ ಕುರುಬರ ಬೀರನ ಹಾಡನ್ನು ಕೇಳುತ್ತಿರುವಾಗ ಆ ಹಾಡಿನಲ್ಲಿ ನೀರಿಗೆ ನಡೆದ ಬಾಲೆಯೊಬ್ಬಳ ವರ್ಣನೆ ಬರಲು ನನ್ನನ್ನು ಆ ವರ್ಣನ ರೀತಿಯು ಬಹಳ ಅಗಾಧಗೊಳಿಸಿಬಿಟ್ಟಿತು. ಪೂರ್ವಕಾಲದ ಕುರುಬರು ಇಂತಹ ಹೆಣ್ಣನ್ನು ಎಲ್ಲಿ ಕಂಡಿದ್ದಾರು? ಕಲ್ಪನೆಯು ಆಂತರಿಕವಾದ ಒಂದು ಸತ್ಯ ಸಾಮ್ರಾಜ್ಯಕ್ಕೆ ಸಂಬಂಧಿಸಿದ್ದಾಗಿರಬೇಕೇನು? ಅಲ್ಲಿ ಕಂಡ ಅಪೂರಕನ್ನಿಕೆಯು ಇಲ್ಲಿ ಹಾಡಿನೊಳಗಿನ ಹೆಣ್ಣಾಗಿರಬೇಕೇನು? ಈ ಮಾತು ನನ್ನ ಅಂತರಂಗ ದಲ್ಲಿ ಅತಿಶಯವಾಗಿ ದೃಢಪಟ್ಟಿತು. ಆವಾಗಲೇ ನನ್ನ ಈ ಒಳ ಅನಿಸಿಕೆ ಯನ್ನು ಗೆ. ಬೇಂದ್ರೆಯವರಿಗೆ ತಿಳಿಸಿದೆನು. ಅಲ್ಲದೆ ಅಷ್ಟರಲ್ಲಿ ಏ. ಈ. ಯವರ ಗ್ರಂಥಗಳಲ್ಲಿ ಈ ವಿಷಯಕ್ಕೆ ಇದೇ ಅಭಿಪ್ರಾಯವಿರುವುದಾಗಿಯೂ ಲಕ್ಷ್ಯಕ್ಕೆ ಬಂತು. ಆದರೆ ಆಗ ಆ ಪುಸ್ತಕವು ಬೇಗನೆ ನನ್ನ ಕೈಗೆ ಲಭಿಸ ದಷ್ಟು ದೂರಗತವಾಗಿದ್ದಿತು. ಮುಂದೆ ಅದನ್ನು ದೊರಕಿಸುವುದಕ್ಕೆ ಬೇಕಾದ ಕಾಲಾವಧಿಯೊಳಗಾಗಿ ನನಗೆ ಮತ್ತೆ ಎರಡು ಪ್ರಸಂಗಗಳಲ್ಲಿ ಮೇಲ್ಕಂಡ ಮಾತು ಅನುಭವಕ್ಕೆ ಬಂದಿತು. ಒಮ್ಮೆ ಪುಣೆಯಲ್ಲಿ ಬೇಂದ್ರೆಯವರೊಡನೆ ಅತ್ಯಂತ ತಲ್ಲೀನತೆಯಿಂದ ಅಧ್ಯಾತ್ಮಚರ್ಚೆ ನಡೆದಾಗ. ಇನ್ನೊಮ್ಮೆ ಈ ಪ್ರಸ್ತುತ ಕವನಸಂಗ್ರಹದೊಳಗಿನ 'ಹಣ್ಣ ಬಂದಾವ ಹಣ್ಣ' ಎಂಬ ಹಾಡನ್ನು ಒಬ್ಬ ಹೆಣ್ಣುಮಗಳು ಅತ್ಯಂತ ಸುಸ್ವರದಿಂದ ಹಾಡುವಾಗ. ಈ ಮೂರು ಪ್ರಸಂಗಗಳಲ್ಲಿ ಮೊದಲನೆಯದು ಕವಿಕಲ್ಪನೆಗೂ ಎರಡನೆಯದು ಶುದ್ಧತರ್ಕಕ್ಕೂ ಮೂರನೆಯದು ರಾಗತತ್ವಕ್ಕೂ ಸಂಬಂಧಿಸಿದವುಗಳಾಗಿವೆ. ಇವೆಲ್ಲವುಗಳಿಗೂ ನಮ್ಮ ಒಳಗಿನ ಯಾವುದೋ ಒಂದು ಸತ್ಯರಾಜ್ಯದ ನಿಕಟ ಸಂಬಂಧವಿದೆಯೆಂದು ನನಗೆ ಘನವಾಗಿ ಎನಿಸಿತು.

ಇತ್ತೀಚೆಗೆ ಏ. ಈ. ಯವರ **ಕ್ಯಾಂಡಲ್ ಆಫ್ ವ್ಹಿಜನ್** ಎಂಬ ಪುಸ್ತಕವು—ದೂರಗತವಾದದ್ದು—ಪುನಃ ನನ್ನ ಕೈಗೆ ಬಂತು. ಅದರಲ್ಲಿ ಅವರ ಈ ಮುಂದಿನ ವಾಕ್ಯವು ಕಣ್ಣಿಗೆ ಬಿತ್ತು.

"I am convinced that all poetry is, as Emerson said, first written in the heavens, that [illegible] deeper than appears in normal life......"

" ಇಮರ್ಸನ್ನರು ಹೇಳಿದಂತೆ ನನಗೂ ಮನವರಿಕೆಯಾದದ್ದೇನೆಂದರೆ—ಸಮಸ್ತ ಕವಿತೆಯು ಮೊದಲಿಗೆ ಸ್ವರ್ಗದಲ್ಲಿ ಬರೆಯಲ್ಪಟ್ಟಿರುತ್ತದೆ. ಸಹಜ ಜೀವನದಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಆಳದಲ್ಲಿರುವ ಆತ್ಮವು ಅದನ್ನು ಗ್ರಹಿಸಬಲ್ಲದು. "

ಏ. ಈ. ಯವರು ತಮ್ಮ ಅನುಭವವನ್ನು ಹೇಳಿದ್ದಲ್ಲದೆ ಅದಕ್ಕೆ ಇಮರ್ಸನ್ನರ ಸಾಕ್ಷಿಯೊಂದನ್ನು ಬೇರೆ ತೋರಿಸಿಕೊಟ್ಟರು. ಒಟ್ಟಾರೆ ನನ್ನ ಅನಿಸಿಕೆಗೆ ಹೀಗೆ ದ್ವಿಗುಣಿತ ಬಲವು ಲಭಿಸಿದಂತಾಯಿತು.

ಸತ್ಯಮಯವಾದ ಸೌಂದರ್ಯಮಯವಾದ ಶುಭಮಯವಾದ ಆ ಒಳಗಿನ ರಾಜ್ಯಕ್ಕೆ— ಏ. ಈ. ಯವರು "ಬಹುವರ್ಣಗಳ ದೇಶ" ವೆಂದು (ಮೆನಿಕಲರ್ಡ್ ಲ್ಯಾಂಡ್) ಹೆಸರಿಟ್ಟಿದ್ದಾರೆ. ಆ ರಾಜ್ಯದ ಬಗೆಗೆ ತಾವು ಕಂಡ ಕಣಸುಗಳನ್ನು ಒಂದೆಡೆಯಲ್ಲಿ ಹೇಳಿದ್ದು ಹೇಗೆಂದರೆ—

" Some times lying on the hillside with the eyes of the body shut as in sleep, I could see valleys and hills, lustrous as a jewel, where all was self-shining, the colours brighter and purer, yet making a softer harmony together than the colours of the world I know There too, in that land, I saw shining folk They were, I believe, those who in the ancient world gave birth to legends of nymph and dryad Their perfectness was like the perfectness of a flower. "

" ಆಗಾಗ್ಗೆ ನಾನು ಗುಡ್ಡದ ಓರೆಯಲ್ಲಿ ನಿದ್ರಿತನಂತೆ ಹೊರಗಣ್ಣುಗಳನ್ನು ಮುಚ್ಚಿಕೊಂಡು ಬಿದ್ದುಕೊಂಡಿರುವಾಗ ನನಗೆ ರತ್ನದಂತೆ ಪ್ರಕಾಶಿಸುವ ಕಂದರಗಳೂ ಗಿರಿಶಿಖರಗಳೂ ಕಂಗೊಳಿಸುತ್ತಿದ್ದವು. ಅವು ಸ್ವಯಂಪ್ರಕಾಶಿತವಾಗಿರುತ್ತಿದ್ದವು. ಅವುಗಳ ಬಣ್ಣಗಳು ಪ್ರಭಾಮಯವಾಗಿಯೂ ನಿರ್ಮಲವಾಗಿಯೂ ಇರುತ್ತಿದ್ದವು. ನನಗೆ ಗೊತ್ತಿರುವ ಜಗತ್ತಿನ ಬಣ್ಣಗಳಿಗಿಂತ ಅವುಗಳಲ್ಲಿ ಕೋಮಲ ಸಾಮರಸ್ಯವು ಹೆಚ್ಚಾಗಿ ಇದ್ದಿತು. ಆ ನಾಡಿನಲ್ಲಿ ನಾನು ಥಳಥಳಿಸುವ ಜನರನ್ನು ಕೂಡ ಕಾಣುತ್ತಿದ್ದೆನು. ಪೂರ್ವಕಾಲದ ಯಕ್ಷಿಣಿಯರ ಕಥೆಗಳು ಹುಟ್ಟುವುದಕ್ಕೆ ಇವರೇ ಕಾರಣರಾದರೆಂದು ನನ್ನ ನಂಬುಗೆ. ಅವರ ಪರಿಪೂರ್ಣತೆಯು ಹೂವುಗಳ ಪರಿಪೂರ್ಣತೆಗೆ ಸದೃಶವಾದದ್ದು."

ಈ ಜಗತ್ತಿನ ಸಂಗತಿಗಳು ನಮ್ಮ ಚಿತ್ತಕ್ಕೆ ಸ್ಪರ್ಶಿಸಲು ಭಾವಗಳೇಳುವವು. ಆದರೆ ಆ ಭಾವಗಳಿಗೆ ತಕ್ಕ ಕಲ್ಪನಾಕವಚವು ಒಳಗಿನ ಬಹು

ವರ್ಣಗಳ ದೇಶದಿಂದ ಲಭಿಸುವುದು. ಇವೆರಡರ ಸಮ್ಮಿಲನವೇ ಕವಿತೆ. ನಮ್ಮ ಚಿತ್ತಕ್ಷೇತ್ರವು ಸುಂದರವೂ ನಿರ್ಮಲವೂ ಆದ ಹಾಗೆಲ್ಲ ನಮ್ಮಲ್ಲಿ ಸತ್ಯ ಕವಿತೆಯ ಆವಿರ್ಭಾವಕ್ಕೆ ಆಸ್ಪದವಾಗುವುದು. ಸೃಷ್ಟಿಜನನಿಯ ಇದಿರಿಗೆ ಸರಳವಾದ ಶಿಸುಬುದ್ಧಿಯಿಂದ ನಾವು ಹರಿದಾಡಬಲ್ಲೆವಾದರೆ, ಆಗ ನಾವು ಕಾವ್ಯದೇವಿಯ ಕೃಪೆಗೆ ಪಾತ್ರರಾಗಬಲ್ಲೆವು. ಇದೀಗ ಸಂಗ್ರಹಿಸಿರುವ ತಿಳಿ ಹೃದಯದ ಹೆಣ್ಣುಮಕ್ಕಳ ಪುರಾತನ ಕೃತಿಗಳ ಸಂಗ್ರಹವು ನಮ್ಮನ್ನು ಈ ದಾರಿಯಲ್ಲಿ ಮುಂದುವರಿಸದಿರಲಾರದೆಂದು ನನ್ನ ಶ್ರದ್ಧೆ.

ಇನ್ನು ಸದ್ಯದ ಪುಸ್ತಕದ ಬಾಹ್ಯಾಂಗವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುವೆನು. ಪ್ರಸ್ತಾವನೆಯಲ್ಲಿ ಹೇಳಬೇಕಾಗಿರುವ ವಿಷಯದ ಬಹುಭಾಗವನ್ನು ಕೊನೆಟಿಪ್ಪಣಿಯ ಪ್ರವೇಶಿಕೆಗಳಲ್ಲಿ ಅಲ್ಲಲ್ಲಿಯೇ ಹೇಳಿ ಮುಗಿಸಿದೆ. ಆದುದರಿಂದ ವಾಚಕರು ಟಿಪ್ಪಣಿಯ ಪುಟಗಳನ್ನು ಅಲಕ್ಷಿಸ ಬಾರದಾಗಿ ಬಿನ್ನೈಸುವೆ.

ಹೆಣ್ಣುಮಕ್ಕಳ ಈ ಹಾಡುಗಳಲ್ಲಿ ತ್ರಿಪದಿಗೆ ಸಂಬಂಧಿಸಿರುವವುಗಳೇ ತೀರ ಹೆಚ್ಚು. ಕೆಲವೇ ವೃತ್ತಗಳು ಭಾವಕ್ಕೆ ತಕ್ಕಂತೆ ಬೇರೆ ಬೇರೆ ವಿವಿಧ ಮಟ್ಟುಗಳಿಂದ ಹಾಡಲ್ಪಡುವುದನ್ನು ಬಗೆದರೆ ಸಮಗೆ ಏಕಮೇವ ಪರಮಾತ್ಮನ ಅನಂತಲೀಲೆಯೇ ಇಲ್ಲಿ ನೆನಪಾಗುವುದು. ಈ ಹಾಡುಗಳನ್ನು ಪ್ರತ್ಯಕ್ಷವಾಗಿ ಅವುಗಳ ನೆಲೆಯರಿತ ಹೆಣ್ಣುಮಕ್ಕಳ ಬಾಯಿಂದ ಹಾಡಿಸಿ ಕೇಳಿದರೆ ವಾಚ ಕರಿಗೆ ಈ ಮಾತಿನ ಮನವರಿಕೆಯಾಗಿ ಅತ್ಯಾಶ್ಚರ್ಯವಾಗದಿರದು. ದೇವತಾ ಸ್ತುತಿಯ ಹಾಡುಗಳು ಶುದ್ಧರಗಳೆಯ ವೃತ್ತಗಳಾಗಿರುವುದನ್ನು ನೆನೆದರೆ ಅತ್ಯ ಗಾಧವೆನಿಸುವುದು. ದ್ರೌಪದಿಯ ಹಾಡು ಭೋಗಷಟ್ಪದಿಯಾಗಿರುವುದನ್ನು ಬಗೆದರೆ ಹೆಣ್ಣುಮಕ್ಕಳ ಹಾಡುಗಳ ಸಂಶೋಧನದ ಮಹತ್ವವು ಸ್ಪಷ್ಟವಾಗಿ ವಿದಿತವಾಗುವಂತಿದೆ.

ಇನ್ನು ಈ ಹಾಡುಗಳ ಭಾಷೆ. ಕೇವಲ ಇದ್ದಕ್ಕಿದ್ದಂತೆ ಗ್ರಾಮ್ಯ ವಾಗಿಯೇ ಅದನ್ನು ಇಡಬೇಕೆಂದು ಕೆಲವರ ಅಭಿಪ್ರಾಯ. ತುಸುಮಟ್ಟಿಗೆ ಸಂಸ್ಕರಿಸಿ ಗ್ರಾಂಥಿಕ ಸ್ವರೂಪಕ್ಕೆ ತರಬೇಕೆಂದು ಇನ್ನು ಕೆಲವರ ಅಭಿಪ್ರಾಯ. ಆದರೆ ಇವೆರಡೂ ಮಾತುಗಳು ಈ ಪುಸ್ತಕದಲ್ಲಿ ಸರಿಯಾಗಿ ಸಾಧಿಸಲಿಲ್ಲ.

ಕೆಲವು ಹಾಡುಗಳು ಹಾಗೂ ಇವೆ. ಇನ್ನು ಕೆಲವು ಹೀಗೂ ಇಡಲ್ಪಟ್ಟಿವೆ. ಮುಂದಿನವರು ಈ ಕೆಲಸವನ್ನು ತಕ್ಕಂತೆ ಸರಿಪಡಿಸಿಕೊಳ್ಳಲಿ.

ಈ ಹಾಡುಗಳಲ್ಲಿ ಅಕ್ಷರಗಳನ್ನು ಎಳೆದೆಳೆದು ಉಚ್ಚರಿಸಿ ಗಣಪೂರ್ತಿಗೊಳಿಸುವ ರೂಢಿಯುಂಟು. ಆಮೇರೆಗೆ ಅಂಥಲ್ಲಿ ಅವಗ್ರಹ ಚಿಹ್ನದಿಂದ ಸೂಚಿಸಲಾಗಿದೆ. ಅಲ್ಲದೆ ಕೆಲಕೆಲವು ಕಡೆಯಲ್ಲಿ ಒಂದು ಚರಣದಲ್ಲಿರಬೇಕಾದದ್ದಕ್ಕಿಂತ ಹೆಚ್ಚು ಇಲ್ಲವೆ ಕಡಿಮೆ ಗಣಗಳಿರುವುದುಂಟು. ಆದರೆ ಇಂಥ ಸಂದರ್ಭಗಳು ಬಹಳ ಕಡಿಮೆ.

ಹಿಂದೆ 'ಗರತಿಯ ಹಾಡ'ನ್ನು ಸಂಗ್ರಹಿಸಿದವರಲ್ಲೊಬ್ಬರಾದ ಗೆಳೆಯ ಕಾಪಸೆ ರೇವಪ್ಪನವರು ಈ ಸಾರೆ ಎರಡು ಮೂರು ತಿಂಗಳುಗಟ್ಟಲೆ ಶ್ರಮಪಟ್ಟು ಈ "**ಮಲ್ಲಿಗೆ ದಂಡೆ**"ಯನ್ನು ಹೆಣೆದಿರುವರು. ಕನ್ನಡ ನಾಡು ಅವರ ಈ ಶ್ರಮವನ್ನು ಸಾರ್ಥಕಗೊಳಿಸದಿರಲಾರದೆಂದು ನಾನು ನಂಬಿರುವೆನು.

ಹಲಸಂಗಿ
೧೨-೫-೧೯೩೫

ಮಧುರಚೆನ್ನ

ಮಲ್ಲಿಗೆದಂಡೆ

ಪರಿವಿಡಿ

ದೇವತಾಸ್ತುತಿ	೧	೧೦೬
ಗಣಪತಿಯ ಸ್ತೋತ್ರ	೩	೧೦೮
ಸೊಲ್ಲಾಪುರದ ಸಿದ್ಧರಾಮೇಶ್ವರ ಸ್ತೋತ್ರ	೪	೧೦೯
ಪಂಢರಪುರದ ವಿಠೋಬನ ಸ್ತೋತ್ರ	೫	೧೦
ಎಡವೂರ ವೀರಭದ್ರನ ಸ್ತೋತ್ರ	೬	೧೧೦
ಪ್ರಣಯಾಂತರ	೯	೨೧೧
ವಾರಿಯಮ್ಮಾಲಿ ಸುತ್ತಿ	೧೦	೧೧೩
' ಹಣ್ಣು ಬಂದಾವ ಹಣ್ಣು '	೧೧	೧೧೫
ನಬ್ಬಂಬು ರಾತೂರಿ	೧೨	೧೧೪
ಕೊರವಂಜೀ ಹಾಡು	೧೫	೧೧೭
ಗಂಗೀ ಗೌರೀ ಹಾಡು (೧)	೧೮	೧೧೭
ಗಂಗೀ ಗೌರೀ ಹಾಡು (೨)	೨೧	೧೧೩
ಭಾವಗೀತಗಳು	೨೫	೧೧೮
ಕೂಸಿನ ಹಾಡು	೨೪	೧೧೮
ಎತ್ತಿನ ಹಾಡು	೨೭	೧೧೮
ಮಳೀ ಹಾಡು	೨೬	೧೧೯
ಕಥೆಯ ಹಾಡುಗಳು	೨೯	೧೨೦
ಆಕಳ ಹಾಡು	೩೦	೧೨೦
ಎಲ್ಲಮ್ಮಾಸೀ ಹಾಡು	೩೪	೧೨೩

ಅಕ್ಕ ಮಹಾದೇವಿಯ ಹಾಡು	....	೩೭	....	೧೨೩
ಬರದ ಹಾಡು	....	೪೦	....	೧೨೪
ದ್ರೌಪದಿಯ ಹಾಡು	....	೪೩	....	೧೨೫
' ದಂಡ ಬಂತವ್ವಾ ದಂಡ '	....	೪೫	....	೧೨೬
ನೀಲಗಂಗಾನ ಹಾಡು	....	೪೬	....	....
ಮದುವೆಯ ಹಾಡುಗಳು	....	೪೯	....	೧೨೭
ಭಾಟಗೀ ಹಾಡು	....	೫೦	....	೧೨೭
ಒಳಕಲ್ಲ ಪೂಜೀ ಹಾಡು	...	೫೨	...	೧೨೮
ಅರಿಷಿಣ ಹಚ್ಚೊ ಹಾಡು (೧)	....	೫೩	....	೧೨೮
ಆರಿಷಿಣ ಹಚ್ಚೊ ಹಾಡು (೨)	....	೫೪	....	೧೨೯
ಐರಾಣಿಯ ಹಾಡು	....	೫೫	....	೧೨೯
ಸಂಡಿಗೆ ಕಡಿಯುವ ಹಾಡು	....	೫೬	....	೧೨೯
ಸೂಲು ಸುತ್ತುವ ಹಾಡು	....	೫೬	....	೧೩೦
ಅಡಿಕೆ ಆಡುವ ಹಾಡು	....	೫೭	....	೧೩೦
ಭೂಮುದ ಹಾಡು	....	೫೯	....	೧೩೧
ಬೀಗರ ಹಾಡು	....	೬೪	....	೧೩೨
ಕೂಸು ಒಪ್ಪಿಸುವ ಹಾಡು	....	೬೬	....	೧೩೩
ಸೋಬಾನದ ಹಾಡುಗಳು	....	೭೩	...	೧೩೪
ಮನಸ ಜೈನರ ಮಡದಿ	....	೭೪	....	೧೩೫
ಹಿಂಬಳಿ ಮುಂಬಳಿ	....	೭೫	....	೧೩೫
ರಸ್ನದುಡುಗುಣಿ	....	೭೬	....	೧೩೬
'ಬಾಲಿ ತಾ ಮೈನೆರದು'	....	೭೮	....	೧೩೬
'ಹಣಿಯಂಬೊ ಭಾಂಪಕ'	....	೭೯	....	೧೩೭
'ಹಸುಮಗಳಸ ನೀಲಮ್ಮ'	....	೮೦	....	೧೩೭

ಇತರ ವಿಧಾನಗಳು	....	೮೧	...	೧೩೮
ಕುಬಸಾ ಮಾಡೂ ಹಾಡು	....	೮೨	....	೧೩೮
ಬಯಕೆಯ ಹಾಡು	....	೮೩	....	೧೩೮
ಉಡಿತುಂಬುವ ಹಾಡು	....	೮೪	....	....
ಬೇನೆ ತಿನ್ನುವ ಹಾಡು	....	೮೬	....	೧೩೯
ತೊಟ್ಟಿಲಲ್ಲಿ ಹಾಕುವ ಹಾಡು	....	೮೭	....	೧೩೯
ಅತ್ತೆಮನೆಯ ಕಾಟ	....	೮೯	....	೧೪೦
ಅತ್ತೆಸೊಸೆಯರ ಜಗಳ	....	೯೦	....	೧೪೦
" ಶಾಂವಕ್ಕಿ ಕುಟ್ಟಂದ್ರ "	....	೯೧	....	೧೪೧
ಹಾಸ್ಯದ ಹಾಡುಗಳು	....	೯೫	...	೧೪೨
ಸೂಲೊಲ್ಲ್ಯಾಕ ಚೆನ್ನೀ?	....	೯೬	...	೧೪೨
ಕಿವುಡರ ಹಾಡು	....	೯೮	....	೧೪೨
ಜೀನಸನ ಹಾಡು	....	೯೯	...	೧೪೩
ಮಂಗ್ಯಾನ ಹಾಡು	....	೧೦೧	....	೧೪೩

ದೇವತಾಸ್ತುತಿ

ಗಣಪತಿಯ ಸ್ತೋತ್ರ

ಗಂಧ ಕಸ್ತುರಿ ಪುಸಗಽ |
ಗೌರವ್ವನ | ಕಂದಗ ಧರಿಸಿದರಽ |
ಅಂದದ ಬೀಎಲಿ ಅಡಕಿ ಕಾಚವು ಸುಣ್ಣ |
ಮುಂದ ಪುಡಚಿನಿಟ್ಟ್ವಿ ಪುಲ್ಲಿಽಗಿ ಮಳಿಗರೆದ |
ಮತಿಯ ಪಾಲಿಸೊ ಎನಗಽ|
ಶ್ರೀಗಣರಾಯಾ | ಸ್ತುತಿಪಾಡಿ ಉಣಿಸುಽವೆನೊ ||೧||

ರಾಜಾನ್ನ ಕೆನೆಮುಸರಽ |
ರುಚಿಗಾಯಿ | ಭೋಜನಕ ಸವಿಪುಜ್ಜಿಗೆಽ |
ಸಾಜನಾಗಿ ಬಂದು ಸೆಳೆಮಂಚದಲಿ ಕುಳಿತು |
ಮತಿಯ ಪಾಲಿಸೊ ಎನಗಽ |
ಶ್ರೀಗಣರಾಯಾ | ಸ್ತುತಿಮಾಡಿ ಉಣಿಸುಽವೆನೊ ||೨||

ಹಣ್ಣು ಹಪ್ಪಳ ಶೆಂಡಿಽಗಿ |
ಎಸಳಾದ | ಸಣ್ಣು ಶಾವಿಗಿ ಬನೆದಽ |
ಉಂಡ ಮಗಿ ನೊರೆಹಾಲ ಉದರ-ಸಕ್ಕರಿ ತುಪ್ಪ |
ಮತಿಯ ಪಾಲಿಸೊ ಎನಗಽ |
ಶ್ರೀಗಣರಾಯಾ | ಸ್ತುತಿಮಾಡಿ ಉಣಿಸುಽವೆನೊ ||೩||

ಚಿಗುಳಿ ಚಿನ್ಪಾಲ್ ಬಚ್ಚೀಪಽ |
ಚಿಟುಬಾಳಿ | ಅಗಲೋಳು ಗರಿಕಾಣೆನಽ |
ಪರಿಪರಿ ಸೋಬಸ್ತ ಪರಿಪುಽಳನೇರಸ್ತ |
ಮತಿಯ ಪಾಲಿಸೊ ಎನಗಽ |
ಶ್ರೀಗಣರಾಯಾ | ಸ್ತುತಿಪಾಡಿ ಉಣಿಸುಽವೆನೊ ||೪||

ಸುರ ಹರಿ ನಮ ದೇವರ ಕಾಳಿs |
ಧೊರಿಪೂಜಿ | ಧೊರಿಪೂಜಿ ಮಾಡುವೆನs |
ಪರಿಪರಿ ಸೋಬಸ್ತ ಪರಿಮಳನೇರಸ್ತ |
ಮತಿಯ ಪಾಲಿಸೊ ಎನಗs |
ಶ್ರೀಗಣರಾಯಾ | ಸ್ತುತಿಮಾಡಿ ಉಣಿಸುವೆನೊ || ೫ ||

ಸೊಲ್ಲಾಪುರದ ಸಿದ್ಧರಾಮೇಶ್ವರ ಸ್ತೋತ್ರ

ಬಾಗಿಲದಾಗಿನ ಕೋಗಿಲ ಕೂಗಿ ಕೂಗಿ ಮರನೇರಿ |
ನಾಗರ್ಹೆಡಿಯಂಗಾಡ್ಯಾವೇಳಯ್ಯಾ | ಸಿದ್ಧರಾಮಾ |
ನಾಗರ್ಹೆಡಿಯಂಗಾಡ್ಯಾವೇಳಯ್ಯಾ || ೧ ||

ಅತ್ತಿsಯ ಮರನೇರಿ ಸತ್ತು ಸೊರಗಿ ನಾನೆ ಬಂದ |
ಮುತ್ತಿನೊಸ್ತಾ ತೋರ್ಯಾರೇಳಯ್ಯಾ | ಸಿದ್ಧರಾಮಾ |
ಮುತ್ತಿನೊಸ್ತಾ ತೋರ್ಯಾರೇಳಯ್ಯಾ || ೨ ||

ಆಲsದ ಮರನೇರಿ ಆಲಪರದು ನಾನೆ ಬಂದ |
ನೀಲದೊಸ್ತಾ ತೋರ್ಯಾರೇಳಯ್ಯಾ | ಸಿದ್ಧರಾಮಾ |
ನೀಲದೊಸ್ತಾ ತೋರ್ಯಾರೇಳಯ್ಯಾ || ೩ ||

ಅಕ್ಕಿಪೂಜಿ ಬ್ಯಾಳಿಪೂಜಿ ಪ್ಯಾಲ ಎಲಿಯ ಘಟ್ಟಪೂಜಿ |
ನಿತ್ಯಪೂಜಿ ಕಟ್ಟ್ಯಾರೇಳಯ್ಯಾ | ಸಿದ್ಧರಾಮಾ |
ನಿಮಗ ಪೂಜಿ ಕಟ್ಟ್ಯಾರೇಳಯ್ಯಾ || ೪ ||

ಕೆಂಪ ಗಂಧಾ ಬಿಳಿಯ ಗಂಧಾ ಅಷ್ಟಗಂಧ ಸಿರಿಯಗಂಧಾ
ಛಂದದಿಂದ ಏರ್ಯಾವೇಳಯ್ಯಾ | ಸಿದ್ಧರಾಮಾ |
ಛಂದದಿಂದ ಏರ್ಯಾವೇಳಯ್ಯಾ || ೫ ||

ಜಾಜಮಲ್ಲಿಗಿ ಜೂಜಮಲ್ಲಿಗಿ ಅರಳಮಲ್ಲಿಗಿ ಶಾವಂತಿಗ್ಹೂವಾ |
ನಿಮ್ಮ ಪೂಜಿಗಿ ಬಂದಾವೇಳಯ್ಯಾ । ಸಿದ್ಧರಾಮಾ |
ನಿಮಗ ಪೂಜಿ ಮಾಡ್ಯಾರೇಳಯ್ಯಾ || ೬ ||

ಅಚ್ಚದಚ್ಚ ಬೆಲ್ಲದಚ್ಚಾ ಮ್ಯಾಗ ಎಳ್ಳ ಚಿಗಳಿನೆಚ್ಚಾ |
ನಿಮಗ ನೆವುದೀ ಬಂದಾವೇಳಯ್ಯಾ | ಸಿದ್ಧರಾಮಾ |
ನಿಮಗ ನೆವುದೀ ತೋರ್‍ಯಾರೇಳಯ್ಯಾ || ೭ ||

ಬಾಜಿ ಬಾಜಿ ಬಾಜಿಯಂತರಿ ಬಾಳಿ ಬನದಾಗ್ ಹಲಗಿ ಖೊಂಬಾ |
ಭೋರಗೆಜ್ಜಿ ಗಿಲ್ಲಂದಾವೇಳಯ್ಯಾ | ಸಿದ್ಧರಾಮಾ |
ಭೋರಗೆಜ್ಜಿ ಗಿಲ್ಲಂದಾವೇಳಯ್ಯಾ || ೮ ||

ಗಂಗಿಯೊಳಗ ಸ್ನಾನ ಮಾಡಿ ಶಿವನ ಸಿಕರ ಸುತ್ತಿ ಬಂದು |
ಹರದ್ಯೆರು ಫಲವ ಬೇಡ್ಯಾರೇಳಯ್ಯಾ | ಸಿದ್ಧರಾಮಾ |
ಹರದ್ಯೇರು ಫಲವ ಬೇಡ್ಯಾರೇಳಯ್ಯಾ || ೯ ||

ಸಂಕರಾತರಿ ಭೋಗಿ ದಿನಾ ಮಲ್ಲಿನಾಥನ ಗುಡಿಯ ಒಳಗ |
ನಾಚನಾದವ ಛೆಂದದಿಂದ | ಸಿದ್ಧರಾಮಯ್ಯ |
ನಾಚನಾದವ ಛೆಂದಛೆಂದ ಸಿದ್ಧರಾಮಯ್ಯ || ೧೦ ||

ಸಂಕರಾತರಿ ಸಮತಿ ದಿನಾ ನಂದಿಕೋಲಾ ಮೆರೆವ ದಿನಾ |
ಟೆಂಗಕ್ಕೆ ಸೂರ್‍ಯಾದವೇಳಯ್ಯಾ | ಸಿದ್ಧರಾಮಾ |
ಖಾರೀಕಕ್ಕೆ ಸೂರ್‍ಯಾದವೇಳಯ್ಯಾ || ೧೧ ||

ಸಂಕರಾತರಿ ಕರಿಯ ದಿನಾ ಮಿತ್ರೆರೆಲ್ಲಾ ಮಡಿಗಳುಟ್ಟು |
ಮುತ್ತಿನಾರುತಿ ಎತ್ತ್ಯಾರೇಳಯ್ಯಾ | ಸಿದ್ಧರಾಮಾ |
ಮುತ್ತಿನಾರುತಿ ಎತ್ತ್ಯಾರೇಳಯ್ಯಾ || ೧೨ ||

ಸಿಂಗರಾದ ಸೊಲ್ಲಪೂರ ಭಂಗರಾದ ಸಿದ್ಧರಾಮಾ |
ಸಿಕರ ಕಟ್ಟ್ಯಾರು ರೈತರೆಲ್ಲಾರು | ಸಿದ್ಧರಾಮಾ |
ಸಿಕರ ಕಟ್ಟ್ಯಾರು ರೈತರೆಲ್ಲಾರು || ೧೩ ||

ಕಮರ ತಽಳಿ ರೇವಣಸಿದ್ದಾ ಗಂಗಿಯೊಳಗ ಸಿದ್ಧರಾಮಾ |
ನಡುವ ಕುಃತಾರ ಮಲ್ಲಿಕಾರ್ಜುಽನ | ಸಿದ್ಧರಾಮಾ |
ಊರಾಗ್ಯಾರ ಮಲ್ಲಿಕಾರ್ಜುಽನ || ೧೪ ||

ಪಂಢರಪುರದ ವಿಠೋಬನ ಸ್ತೋತ್ರ

ಇಟ್ಟಿಗೀ ಕಲ್ಲ ಮ್ಯಾಲ ಊರಿ ನಿಂತಾನೆರಡು ಪಾದ |
ಜರದ ಮಂದೀಲ ಶಾಲ
ಇಳಿಯ ಬಿಽಟ್ಟ್ಯಾರ ಜೋಲ
ನಾದ ಬ್ರಹ್ಮ ಮೇಘ ಶಾಮ
ಸೃಷ್ಟಿಕರ್ತ ಸರ್ವ ಗೋಪು
ಸಾದು ಸಂತಽರ ಪ್ರೇಮ
ಹ್ಯಾಂಗ ನಿಂತಾರೆನಗ ಪೇಳಿರೇ | ಶ್ರೀಪಾಂಡುರಂಗ |
ಹ್ಯಾಂಗ ನಿಂತಾರೆನಗ ಪೇಳಿರೇ || ೧ ||

ಟೊಂಕದ ಮ್ಯಾಲ ಕೈಯನಿಟ್ಟು ಹೃದಯದಲ್ಲಿ ಲತ್ತಿಪೆಟ್ಟು
ತೆಗ್ಗ ಬಿತ್ತು ಒಳ್ಳೆ ಎಷ್ಟು
ದುಕ್ಕ ಇಲ್ಲ ಎಳ್ಳಿನಷ್ಟು
ತುಳಸಿ ಮಾಳಿ ಬುಽಕ್ಕಿಟ್ಟು
ಹಗಲ ಇರಳ ಭಜನಿಗೋಳು
ಆವಂದೀ ಅಂಸ ಮೃದುಂಗ ತಾಳ
ಮದನ ಮೂರ್ತಿ ಗೋಽಪಾಳ
ಸಾದು ಸಂತಽರ ಮ್ಯಾಳ
ಹ್ಯಾಂಗ ನಿಂತಾರೆನಗ ಪೇಳಿರೇ | ಶ್ರೀಪಾಂಡುರಂಗ |
ಹ್ಯಾಂಗ ನಿಂತಾರೆನಗ ಪೇಳಿರೇ || ೨ ||

ಟೊಪ್ಪಿಗೀ ಲಿಂಗಕಾರ ಟಿಳಕ ಬಟ್ಟ ಚಂದ್ರತಾರಾ
ಮುಂದ ಹರಿವ ಭೀಮ ತೀರ
ಪುಣ್ಯಕ್ಷೇತ್ರ ಪಂಡರಿಪೂರ
ಪುಂಡಲೀಕ ಗೋಪುಕಾರ
ಚಾತುರ್ಮಾಸ ಪರಸಿ ಭಾಳ
ಯೋಗಿ ಜನರಿಗ್ಹಪರೂಪ
ನೇಮದಿಂದ ಸುಡುವ ಪಾಪ
ಈತನೇನ ಬೌದ್ಧ್ಯ ರೂಪ
ಹ್ಯಾಂಗ ನಿಂತಾರೆನಗ ಹೇಳಿರೇ । ಶ್ರೀಪಾಂಡುರಂಗ ।
ಹ್ಯಾಂಗ ನಿಂತಾರೆನಗ ಹೇಳಿರೇ ॥ ೩ ॥

ಹಾಸ್ಯವದನ ಕಮಲನಯನ ಶೇಷಶಯನ ಗರುಡವಾಹನ
ಶಿಷ್ಯಮೂಳ ನಿಜಧಾಮ
ರಾಮರಸ ರಸದಿಂದ
ಎಂದಿಗೀ ದೊರಕ್ಯಾನಂದ
ಹೆವಳ ಕೂಡಸ್ತ ಛಂದ
ಹ್ಯಾಂಗ ನಿಂತಾರೆನಗ ಹೇಳಿರೇ । ಶ್ರೀಪಾಂಡುರಂಗ
ಹ್ಯಾಂಗ ನಿಂತಾರೆನಗ ಹೇಳಿರೇ ॥ ೪ ॥

ಎಡವೂರ ವೀರಭದ್ರನ ಸ್ತೋತ್ರ

ಎಡವೂರ ತಳವಲ್ಲಿ ಏನೇನ ಶಡಗರ
ಎಡಕ ನಂದೀಕೋಲ ಬಲಕ ಪಲ್ಲಕಿ ಪಂಕ
ಶಡಗರದ ಛತ್ತುರಕಿ ಎಡಬಲ ಬತಾಗೀರಿ
ಹಾರೂವ ಹೂಬಾಣ ಹೊಬತ್ತಿ ಕಂಡಿsರಿ
ಗುಗ್ಗsಳದಾರೂತಿ ಗುಡಿಮುಂದ ಕಂಡಿsರಿ

ಶರಣಬಂದಯ್ಯಗ ಕರಣ ನೋಡಿ ಪೂಜಿಗೋಳ ಬನ್ನೆ
ಜಯಮಂಗಳ್ಕ ನಿತ್ಯ ಶಿವಮಂಗಳ ‖ ೧ ‖

ಹಣಿಯ ಮ್ಯಾಲಿನ ಗಂಧ ಗಿಣಿರಾಮು ಕುಂತಂಗ
ಕರಿಯ ಕುಂದಲದ್ದರಳ ಕಿವಿಯಾಗ ಇಟ್ಟಾನ
ಏಸೊಂದು ಶೃಂಗಾರ ಎಡಗೈಲಿ ಹಿಡದಾನ
ಪರವೂತ ಗಿರಿಗುಡ್ಡ ಬಲಗೈಲಿ ಹಿಡದಾನ
ಚಳ್ಳುಂಗ್ರ ಚಿಮ್ಮೂತ ಕ್ವಾರ್ಮೀಸಿ ತಿದ್ದೂತ
ಕರಿ ಈರಭದ್ರನ ಕರಣ ನೋಡಿ ಪೂಜಿಗೋಳ ಬನ್ನೆ
ಜಯಮಂಗಳ್ಕ ನಿತ್ಯ ಶಿವಮಂಗಳ ‖ ೨ ‖

ಬಿಳಿಯಂಗಿ ತೊಟ್ಟಾನ ಬಿಗದುಟ್ಟು ನಿಂತಾನ
ಸರಗಂಟಿ ಸರಮಾಲಿ ಕೊರಳಿಗಿ ಹಾಕ್ಯಾನ
ಏಸೊಂದ ರುದ್ರಾಕ್ಷಿ ಸ್ವಾಮಿ ತಾ ಧರಸ್ಯಾನ
ಪಡಪಕಲ ದಿಕ್ಕಿಕಗಿ ಒಡೆಯ ತಾ ನೆನದಾನ
ತುಂಗಬದ್ರಿ ಕಾಳಿ ಬಾಗಿಕಲ ತೆರೆಯಂದ
ಕರಿ ಈರಭದ್ರನ ಕರಣ ನೋಡಿ ಪೂಜಿಗೋಳ ಬನ್ನೆ
ಜಯಮಂಗಳ್ಕ ನಿತ್ಯ ಶಿವಮಂಗಳ ‖ ೩ ‖

ಮಂಗಳಾರಕ ದಿನ ವೀರ ನಿನ್ನೋಲಗ
ಚಿಟ್ಟಿ ಚಿಣಗೀ ಹೂವ ದುಂಡಮಲ್ಲಿಗಿ ಹೂವ
ಕೊಂಡಾಡೊ ದಾಸ್ಯಾಳ ಮಂಡ್ಲೇಸೂರದ್ಹೂವ
ಏಳ ಸಮುದುರದಾನ ಪಾರಿಕಜಾತದ ಹೂವ
ಕಂಚಿಕಯ ಈ ಮಗ್ಗಿ ಕಮಳದ ಈ ಮಗ್ಗಿ
ಖ್ಯಾದಿಕಗಿ ಹೊಡಿ ನೂರು ಖ್ಯಾದಿಕಗಿ ಗರಿ ನೂರು
ಎಲ್ಲಕಕ ಹೆಚ್ಚಿಂದು ಬೆಲ್ಲಪತ್ತುರಿ ನೂರು
ಕರಕಿಕಯ ಪತ್ತೂಕರಿ ಕರಿಯ ತುಂಬೀ ಹೂವ
ಕರಿ ಈರಭದ್ರನ ಕರಣ ನೋಡಿ ಪೂಜಿಗೋಳ ಬನ್ನೆ
ಜಯಮಂಗಳಕ ನಿತ್ಯ ಶಿವಮಂಗಳ ‖ ೪ ‖

ಹೆಗ್ಗಾಳಿ ಚಿನಕಾಳಿ ದೊಡ್ಡ ರಂಗಿನ ಕಾಳಿ
ಊದುಽಸು ನೆತಪೇರಿ ಬಾರಿಽಸು ನಗಾರಿ
ಆಡು ಪಾತರ ಮ್ಯಾಳ ಗುಡಿಮುಂದ ಕಂಡಿಽರಿ
ಗುಗ್ಗಽಳದಾರೂತಿ ಗುಡಿಮುಂದ ಕಂಡಿಽರಿ
ಶರಣಬಂದಯ್ಯಾಗ ಕರಣ ನೋಡಿ ಪೂಜಿಗೋಳ ಬನ್ನಿ
ಜಯಮಂಗಳಽ ನಿತ್ಯ ಶಿವಮಂಗಳ ॥ ೫ ॥

ಪ್ರಣಯಾಂತರ

‘ ವಾರಿ ರುಮ್ಮಾಲ ಸುತ್ತಿ’

ವಾರಿ ರುಮ್ಮಾಲ ಸುತ್ತಿ ಓಣ್ಯಾಗ ನಿಂತಾನ |
ಹ್ವಾರ್ಯಾನಿಲ್ಲೇನೊ | ಹೊಲದಾಗ ಹೊಲದಾಗ |
ಹ್ವಾರ್ಯಾನಿಲ್ಲೇನೊ ||
ಹ್ವಾರ್ಯಾನಿಲ್ಲs ಏನೊ ಹೊಲದಾಗ ಚಂದರಾಮಾ |
ನಾರ್ಯಾರಿಲ್ಲೇನೊ | ಮನಿಯಾಗ ಮನಿಯಾಗ |
ನಾರ್ಯಾರಿಲ್ಲೇನೊ || ೧ ||

ಮಕಮಕ ಮಲ್ಲೀಗಿ ಅದರಾಗ ಖ್ಯಾದೀಗಿ |
ಬಿಚ್ಚಿ ನೋಡಿದರ | ಬಿಳಿಯೆಲಿಯೊ ಬಿಳಿಯೆಲಿಯೊ |
ಬಿಚ್ಚಿ ನೋಡಿದರ ||
ಬಿಚ್ಚೀನೆ ನೋಡಿದರ ಬಿಳಿಯೆsಲಿಯಂಥವಳು |
ಬಿಟ್ಟ ಮಲಗೂದು | ಥಂದೇನೊ ಥಂದೇನೊ |
ಬಿಟ್ಟ ಮಲಗೂದು || ೨ ||

ಬಿಟ್ಟsರ ಬಿಡಲ್ಯಾಕ ಬಿಗುವೀನ ಮಾತ್ಯಾಕೊ |
ಬಿಟ್ಟಕ್ಕಿ ಮ್ಯಾಲ | ಮನಸ್ಯಾಕೊ ಮನಸ್ಯಾಕೊ |
ಬಿಟ್ಟಕ್ಕಿ ಮ್ಯಾಲ ||
ಬಿಟ್ಟಕ್ಕಿಯs ಮ್ಯಾಲ ಮನಸ್ಯಾಕೊ ಚಂದರಾಮಾ |
ಕಟ್ಟಕಲ್ಲಾಗಿ | ಇರಹೋಗೊ ಇರಹೋಗೊ |
ಕಟ್ಟಕಲ್ಲಾಗಿ || ೩ ||

ಬಾಳಿ ಕೊಯ್ದರ ತೋಟ ಹಾಳಾದರರಿದೇನೊ |
ಆಳಲ್ದ ರಾಯಾ | ಮಡದೀಗೊ ಮಡದೀಗೊ |
ಆಳಲ್ದ ರಾಯಾ ||

ಆಳಲ್ದನಽ ರಾಯಾ ಮಡದಿಽಗಿ ಬಿಟ್ಟರ ।
ಬಾಳಿಹಣ್ಣೀಂನೊ । ಕೆಡಲಾಕೊ ಕೆಡಲಾಕೊ ।
ಬಾಳಿಹಣ್ಣೀಂನೊ ॥ ೪ ॥

ಮಲ್ಲಿಗ್ಹೂವಿನ ದಂಡಿ ಅಲ್ಲಿಟ್ಟ ಇಲ್ಲಿಟ್ಟ
ಕಲ್ಲ ಮ್ಯಾಲಿಟ್ಟ । ಕೈಯಾಗಿಟ್ಟ ಕೈಯಾಗಿಟ್ಟ ।
ಕಲ್ಲ ಮ್ಯಾಲಿಟ್ಟ ॥

ಕಲ್ಲ ಮ್ಯಾಲಽ ಇಟ್ಟ ಕೈಯಾಗಿಟ್ಟ ಚೆಂದರಾಮಾ ।
ಪಾದ ಮ್ಯಾಲಿಟ್ಟ । ಶರಣೆಂದ ಶರಣೇಂದ ।
ಪಾದ ಮ್ಯಾಲಿಟ್ಟ ॥ ೫ ॥

'ಹಣ್ಣ ಬಂದಾವ ಹಣ್ಣ'

ಹಣ್ಣ ಬಂದಾವ ಹಣ್ಣಾ ಮಗಿಯ ಮಾವಿನ ಹಣ್ಣಽ ಜಾಣೆ ॥
ಹಣ್ಣ ಕೊಳತೇಂವ ಹಣ್ಣಿನ ಬೆಲಿಽಯ ಹೇಂಳ ಜಾಣೆ ॥ ೧ ॥

ಬೆಲಿಯ ಹೇಂಳುಽವ ಜಾಣಾ ಮಲ್ಲಾಡ ದೇಂಶಕ್ಹೋಂಗಿದನಲ್ಲೋಂ ಜಾಣಾ ॥
ತಿಳಿಯಲಾರಽದ ಬೆಲಿಯ ನಾ ಏನ್ಹೇಂಳಾಲೊ ಜಾಣಾ ॥ ೨ ॥

ಕೆರಿಯ ಪಾಳ್ಯದ ಮ್ಯಾಲ ಕರಿಽ ಕಬ್ಬ ಹಚ್ಚ್ಯಾರಲಮ್ಮಽ ಜಾಣೆ ॥
ಅದರಾಗ ತುಡಽಗ ದನ ಹೊಗತಾವಲಮ್ಮಽ ಜಾಣೆ ॥ ೩ ॥

ತುಡಽಗ ದನ ಹೊಕ್ಕರ ಹೊಡದಾರ ಬಡದಾರೋಂ ಜಾಣಾ ॥
ನಾಲೂರ ಕೂಡಿ ಬುದ್ದೀಂ ಹೇಂಳುವರಲ್ಲೋಂ ಜಾಣಾ ॥ ೪ ॥

ಭಾಂಯಾದರ ಕಟ್ಟ್ಯಾರಲ್ಲ ಅರುಟಿಗ್ಯಾದರಿಟ್ಟ್ಯಾರಲವ್ವಽ ಜಾಣೆ ॥
ಅದರಾಗ ದಾಽನ ಧರ್ಮ ಇಲ್ಲಏನಽ ಜಾಣೆ ॥ ೫ ॥

ಅನ್ನ ವಸ್ತ್ರರು ದಾನ ಬೆಳ್ಳಿ ಬಂಗಾರ ದಾನೋ ಜಾಣಾ ॥
ಹೆಣ್ಣು ಮಕ್ಕಳ ದಾನಾ ಕೊಡುವರೇನೋ ಜಾಣಾ ॥ ೬ ॥
ಗುಡಿಯಾದರು ಕಟ್ಟ್ಯಾರಲ್ಲಾ ಕಳಸಾದರಿಟ್ಟಾರಲಮ್ಮ ಜಾಣಿ ॥
ಕಣ್ಣೊತ್ತಿ ಕಳಸಗೋಳು ಒಡೆದಾವಲಮ್ಮ ಜಾಣಿ ॥ ೭ ॥
ಒಡೆದಾರೆ ಒಡಿಯಾಲಿ ಒಡೆದುನೆ ಛಲ್ಲುವಲೋ ಜಾಣಾ ॥
ಒಡಹುಟ್ಟಿದಣ್ಣನಾಗಿ ಇರಸನೆ ಹೋಗೋ ಜಾಣಾ ॥ ೮ ॥

'ಸಬ್ಬಂಬು ರಾತೂರಿ'

ಸಬ್ಬಂಬು ರಾತೂರಿ ಒಬ್ಬಕ್ಕಿ ನಾ ಇದ್ದ ।
ನೀವೆಲ್ಲಿ ಹೋಗಿ ಬಂದ್ರಿಸ । ನೀವೆಲ್ಲಿ ಆಡಿ ಬಂದ್ರಿಸ ॥ ೧ ॥

ಜಾಣಿ । ಬೆಟ್ಟಂಬು ಬ್ಯಾಸಗಿ । ಕಣ್ಣಸಗಿ ನಿದ್ದಿಲ್ಲ ।
ತನುಗಾಳಿಗ್ಹೋಗಿದ್ದೇವ । ತನುಗಾಳಿಗ್ಹೋಗಿದ್ದೇವ ॥ ೨ ॥

ಎದಿಯ ಮ್ಯಾಲಿನ ಘಾಯಿ ಎಳಿಯ ಚಂದ್ರಮನಂಗ ।
ನೀವೆಲ್ಲಿ ಹಾದು ಬಂದ್ರಿಸ । ನೀವೆಲ್ಲಿ ಹೋಗಿ ಬಂದ್ರಿ ॥ ॥ ೩ ॥

ಜಾಣಿ । ಬಾಳಿಸಯ ಬನದಾಗ । ಹಾದು ನಾವ್ಬರುವಾಗ ।
ಬಾಳಿಸಯ ಗರಿ ತಾಕ್ಯಾವಸ । ಬಾಳಿಸಯ ಗರಿ ತಾಕ್ಯಾವ ॥ ೪ ॥

ಹುಬ್ಬ ಹುಬ್ಬಿನ ಘಾಯಿ ಹುಬ್ಬೆಲ್ಲ ಚ್ಯೂರು ಘಾಯಿ ।
ನೀವೆಲ್ಲಿ ಹೋಗಿ ಬಂದ್ರಿಸ । ನೀವೆಲ್ಲಿ ಆಡಿ ಬಂದ್ರಿ ॥ ೫ ॥

ಜಾಣಿ । ತ್ವಾಟದಾಗಸ ಇರುವ । ನೀಟುಳ್ಳ ಗಜನಿಂಬಿ ।
ಗಜನಿಂಬಿ ಗರಿ ತಾಕ್ಯಾವಸ । ಗಜನಿಂಬಿ ಗರಿ ತಾಕ್ಯಾವಸ ॥ ೬ ॥

ನಾರ್ಯ್ಯಾರ್ಥ್ಯಚ್ಹಲ್ಲಪುಡಿ । ನಾರ್ಯ್ಯಾರ್ಥ್ಯಚ್ಹಲ್ಲಪೂಡಿ ।
ನಿಮ್ಹಲ್ಲಿಗ್ಯಾಕ್ಹತ್ಯಾವರೀ । ನಿಮ್ಹಲ್ಲಿಗ್ಯಾಕ್ಹತ್ಯಾವರೀ ॥ ೭ ॥

ಜಾಣಿ । ಗೊಲ್ಲರ ಓಣ್ಯಾಗ ಹಾದು ನಾವ್ಬರುವಾಗ ।
ಅವರು ಹಲ್ಲಿಗಿ ತಂದ್ಧುಚ್ಚಿದರs । ಅವರು ಹಲ್ಲಿಗಿ ತಂದ್ಧುಚ್ಚಿದರ ॥ ೮ ॥

ಹತ್ತ ವಾರಿsನ ಹೂವಿನs ಶಾಲ್ಗೋಳು ।
ಮತ್ತ್ಯಾಕ ಮಾಸಿದವರಿ । ಮತ್ತ್ಯಾಕ ಬೆವತಿದವರಿ ॥ ೯ ॥

ಜಾಣಿ । ಗರಡಿsಯ ಮನಿಯಾಗ । ಸಗತಿ ನಾ ಹೊಡಿಯಾಗ ।
ಕಿರಿಬೆವರ ಬಿಟ್ಟಿದಾವs । ಕಿರಿಬೆವರ ಬಿಟ್ಟಿದಾವ ॥ ೧೦ ॥

ಹತ್ತ ವಾರಿsನ ಮುತ್ತಿsನ ನಡಕಟ್ಟ ।
ಮತ್ತ್ಯಾಕ ಮಾಸಿದವರಿ । ಮತ್ತ್ಯಾಕ ಬೆವತಿದವರಿ ॥ ೧೧ ॥

ಜಾಣಿ । ಚೆಂಡಾಟನಾಡಾಗ । ಕೃಷ್ಣರು ಬಂದ್ಹಿಡಿಯಾಗ ।
ಬಿದ್ದಲ್ಲಿ ಮಾಸಿದಾವs । ಬಿದ್ದಲ್ಲಿ ಮಾಸಿದಾವ ॥ ೧೨ ॥

ಎಷ್ಟಂತ ಹೇಳಲಿ ಎಷ್ಟಂತ ಕೇಳೂತಿ ।
ಕೃಷ್ಣರ ದೇಶಕ್ಹೋಗಿದ್ದೇವs । ಕೃಷ್ಣರ ದೇಶಕ್ಹೋಗಿದ್ದೇವ ॥ ೧೩ ॥

ಭಾಳ ಭಾಳ ಮಾತಾಡತೀದಿ ಬಾಯ್ ಪಾಟ್ಲಿ ಬೈತೀದಿ ।
ರಂಗಿsಗಿ ಬಂದಿ ನೀನು । ಭಾಳ ಪೆಟ್ಟsಗಿ ಬಂದಿ ನೀನು ॥ ೧೪ ॥

ಊರ ಹೊರಗಿsನ ನಿಷ್ಕುಳ್ಹಣಮನ ಮುಂದ ।
ಆಣಿ ಮಾಡುಣು ನಡಿಯ । ಆಣಿ ಮಾಡೂಣು ನಡಿಯ ॥ ೧೫ ॥

ಕೊರವಂಜೀ ಹಾಡು

ಬಾಳಿsಯ ಬನದಾಗ ಬಾಲ ಚೆಂಡಾಡ್ಯಾನ
ಬಾ ನನ್ನ ಮಗನs ಅಬರಂಗ ಧೊರಿಯs
ಬಾಳಿಕಿಂತಾ ಥೆಲಿವ್ಯೋ । ನನ ಸೂಸಿ ।
ಬಂದೊಮ್ಮೆ ಮಕದೋರೊ ॥ ೧ ॥

ಬಾಳಿಕಿಂತ ಛೆಲಿವ್ಯಾದ್ರ ಭಾಂಯಾಗ ಸುಗಸವ್ವಾ
ಉಟ್ಟೀದ ದಟ್ಟಿಽ ಕಳಕೋರ್ಥಡದವ್ವಾ
ಬಿಟ್ಟುಬಚ್ಚ ತವರ್ಮನಿಽಗೇ । ನಾ ನನ್ನ ।
ಬಲ್ಲಿಂತ ಸುಳಿಗಾರನಽ ॥ ೨ ॥

ನಿಂಬಿಽಯ ಬನದಾಗ ಕಂದ ಚೆಂಡಾಡ್ಯಾನ
ಬಾ ನನ್ನ ಮಗನಽ ಅಬರಂಗ ಧೊರಿಯಽ
ನಿಂಬಿಕಿಂತಾ ಛೆಲಿವ್ಯೋ । ನನ ಸೊಸಿ ।
ಬಂದೊಮ್ಮೆ ಮಕದೋರೊ ॥ ೩ ॥

ನಿಂಬಿಕಿಂತ ಛೆಲಿವ್ಯಾದ್ರ ಭಾಂಯಾಗ ಸುಗಸವ್ವಾ
ಕಟ್ಟೀದ ಕರಮಣಿಽ ಹರಕೋರ್ಥಡದವ್ವಾ
ಬಿಟ್ಟುಬಚ್ಚ ತವರ್ಮನಿಽಗೇ । ನಾ ನನ್ನ ।
ಬಲ್ಲಿಂತ ಸುಳಿಗಾರನಽ ॥ ೪ ॥

ಅಣ್ಣಾನ ಮಗಳಂತ ಹಮ್ಮೀಲಿ ಕರತಂದ
ನನ ಮಽಗ ಮಾತಾ ಕೇಳವಲ್ಲ ಸೊಸಿ ಮುದ್ದ
ಹೋಗವ್ವ ತವರ್ಮನಿಽಗೆ । ಸೊಸಿಮುದ್ದ ।
ಹೋಗವ್ವ ತವರ್ಮನಿಽಗೆ ॥ ೫ ॥

ಅಣ್ಣ್ಯಾರ ತಮ್ಮ್ಯಾರ ತಾಯ್ಯಾರ ತಂದ್ಯಾರ
ಅಣಾ ನ್ಯಾಂಡಾರೊಂದವರ್ಯಾಽರತ್ತೆವ್ವಾ
ಹೋಗ್ಲಾರೆ ತವರ್ಮನಿಽಗೆ । ಅತ್ತೆವ್ವ ।
ಹೋಗ್ಲಾರೆ ತವರ್ಮನಿಽಗೆ ॥ ೬ ॥

ಒಂದ ಹೊನ್ನಽ ಕೊಟ್ಟು ಮದಿವ್ಯಾರೆ ಮಾಡಿಽದಿ
ಎರಡ್ಹೊನ್ನ ಕೊಟ್ಟು (ಕೊರವಂಜಿ) ಬುಟ್ಟಿ ಕೊಂಡು ಕುಽಡತ್ತಿ
ಗಂಡಽನ ನೋಡಿ ಬರುವೆ । ಗಂಡನ ।
ರಂಡೀಯ ನೋಡಿ ಬರುವೆ ॥ ೭ ॥

ಒಂದ ವೈ ಮುತ್ತs ಹಚ್ಚಿ ಒಂದ ವೈ ಮಾಣಿಕ ಹಚ್ಚಿ
ಕೆತ್ತ ಮಾಣಿಕ ಬುಟ್ಟಿ ತಂದಿಟ್ಟ್ಯಾಳತ್ತೆವ್ವ।
ಆ ಕ್ಷಣಕ ತಂದಿಟ್ಟ್ಯಾಳತ್ತೆವ್ವಾ ॥ ೮ ॥

ಚೆಪ್ಪೂಲಿ ಮೆಟ್ಟಿದಾಳs ಎನ್ನಮ್ಮ
ಚೆಪ್ಪೂಲಿ ಮೆಟ್ಟಿದಾಳ ಎನ್ನಮ್ಮ। ಚೆಪ್ಪೂಲಿ ಮೆಟ್ಟಿದಾಳ।
ರಾಯsರ ಇರುವೂದು ರಾಜಪಟ್ಟಣದ್ದ್ಯಾದಿ ದಾವದೊಂದ್ದೇಳಿ
ಕೊಡಿರಿ ॥ ೯ ॥

ದನಕಾಯೊ ಅಣ್ಣಾಗಳಿರ್‍ಯಾ ಎನ್ನಮ್ಮ।
ದನಕಾಯೊ ತಮ್ಮಗಳಿರ್‍ಯಾ ಎನ್ನಮ್ಮ। ದನಕಾಯೊ ಅಣ್ಣಾಗಳಿರ್‍ಯಾ ॥
ರಾಯsರ ಇರುವೂದು ರಾಜಪಟ್ಟಣದ್ದ್ಯಾದಿ ದಾವದೊಂದ್ದೇಳಿ
ಕೊಡಿರಿ ॥ ೧೦ ॥

ಬಾಳೀsಯ ಬಲಕ್ವಾಯs ಎನ್ನಮ್ಮ।
ನಿಂಬೀsಯ ಎಡಕ್ವಾಯs ಎನ್ನಮ್ಮ। ನಿಂಬೀsಯ ಎಡಕ್ವಾಯ।
ನಾಗಸಂಪಿಗೆsಯ ನುಡುವ್ವಾಯ ಕೋಲು ಕೋಲಣ್ಣ ಕೋಲ ॥ ೧೧ ॥
ಹಸರೊಂದು ಉಟ್ಟಿದಾಳs ಎನ್ನಮ್ಮ।
ಹಸರೊಂದು ತೊಟ್ಟಿದಾಳ ಎನ್ನಮ್ಮ। ಹಸರೊಂದು ತೊಟ್ಟಿದಾಳ।
ಹಸರೊಂದ ಸೆರಗಾ ಮರಿಮಾಡಿ ತನ್ನಂಥಾ ಹರದ್ಯಾರನ
ಬಲಗೊಂಡಾಳ ॥ ೧೨ ॥

ಕೆಂಪೊಂದು ಉಟ್ಟಿದಾಳs ಎನ್ನಮ್ಮ
ಕೆಂಪೊಂದು ತೊಟ್ಟಿದಾಳ ಎನ್ನಮ್ಮ। ಕೆಂಪೊಂದು ತೊಟ್ಟಿದಾಳ।
ಕೆಂಪೊಂದು ಸೆರಗಾ ಮರಿಮಾಡಿ ತನ್ನಂಥಾ ಬಾಲ್ಯಾರನ
ಬಲಗೊಂಡಾಳ ॥ ೧೩ ॥

ಆನಿ ಆನೀsಯ ಮುಂದ ಎನ್ನಮ್ಮ।
ಆನೀsಯ ಮರಿಮುಂದ ಎನ್ನಮ್ಮ। ಆನೀsಯ ಮರಿಮುಂದ।
ಆನೀsಯ ಏರೂವ ಚೆದರ ಮನ್ನೆರ ಮಗಳು ಹೊಂಟಾಳ
ರಾಜಬೀದಿsಗೆ ॥ ೧೪ ॥

ಒಂಟಿ ಒಂಟೆಯ ಮುಂದ ಎನ್ನಮ್ಮ |
ಒಂಟೆಯ ಮರಿಮುಂದ ಎನ್ನಮ್ಮ | ಒಂಟೆಯ ಮರಿಮುಂದ |
ಒಂಟೆಯ ಏರೂವ ಭಂಟ ಮನ್ನೆರ ಮಗಳು ಹೊಂಟಾಳ
ರಾಜಬೀದಿಗೆ || ೧೫ ||

ಕಾಲ ಕಂಚಿನ ಪಿಲ್ಲೆ ಕಿಂವಿಯಾಗ್ಹಿತ್ತಾಳಿ ವಾಲಿ |
ಸರಪಳಿ ಘಂಟಿ ಸರದಾಳೆವ್ವ ನೀ |
ಯಾ ನಾಡದ ಕೊರವೇ | ಜಾಣೆ ನೀ |
ಯಾ ನಾಡದ ಕೊರವೇ || ೧೬ ||

ಆ ನಾಡದ ಕೊರವ್ಯಲ್ಲ ಈ ನಾಡದ ಕೊರವ್ಯಲ್ಲ |
ದೇವಲೋಕಾದ ಕೊರವಿದ್ದೊ ಜಾಣ ನಾ |
ದ್ಯಾವಾರ್ಧೇಳತೇನೊ | ಕೈ ತಾ |
ಕೈ ತಾ ಕೈ ತಾರೋ || ೧೭ ||

ಆ ನಾಡದ ಕೊರವ್ಯಲ್ಲ ಈ ನಾಡದ ಕೊರವ್ಯಲ್ಲ |
ದೇವಲೋಕಾದ ಕೊರವಿದ್ದೊ ಜಾಣ ನಾ |
ದ್ಯಾವಾರ್ಧೇಳತೇನೋ | ಸೂಳ್ಯಾರು |
ಮಾಡೇರಿ ಹೊಡಿತಾರೊ || ೧೮ ||

ನನ್ನ ಮಡದಿನ ಬಿಟ್ಟು ಹನ್ನೆರಡು ವರುಷಾಯ್ತು |
ಮಡದೀಗಿ ನನಗ ಕೂಡಿಷ ಕೊರವಂಜಿ |
ಕೈಯಾರೆ ಜೋಡಸ್ತೇನ | ನಾ ನಿನ್ನ |
ಕಾಲಾರೆ ಬೀಳ್ತೇನ || ೧೯ ||

ನನ್ನ ಮಡದೀನ ಬಿಟ್ಟು ಹನ್ನೆರಡು ವರುಷಾಯ್ತು |
ಮಡದೀಗಿ ನನಗ ಕೂಡಿಸ ಕೊರವಂಜಿ |
ಕರಕೊಂಡು ಬರತೇನ | ನಾ ನಿನಗ |
ಸೀರಿ ಕುಬಸ ಮಾಡ್ತೇನ || ೨೦ ||

ನನ ಕಾಲ ಬೀಳಲಕ ನನ್ನ ಕೈ ಜೋಡಿಸಲಕ।
ಯಾರೀಗಿ ಯೇನs ಮಾಡೀsದಿ ಮಾರಾಯಾ।
ಹೋಗೂನು ನಡೀರಿ। ಮಾರಾಯಾ।
ಹೋಗೂನು ನಡೀರಿ ॥ ೨೧ ॥

ಗಂಡಹೆಂಡರವರು ಗರದೀಲಿ ಬರುವಾಗ।
ಕತ್ಹಿಂತ ರಂಡೀ ಬೆನ್ಹತ್ತಿ ಬರತಾಳ।
ಹೊಡೆದ್ಹಾsಕ್ಹಿಂದsಕ। ಅಕಿ ತನ್ನ।
ಹೊಡಮsಳಿ ಹೊಳ್ಳಿದಂsಗ ॥ ೨೨ ॥

ಆರು ವರುಷಾ ತಿರುಗಿ ಅರಸsರ ತಂದೀದ।
ಅತ್ತಿ ಬಾ ಹೊರಿಯಾಕ। ನಿನ ಮಗನ।
ಕರಕೋರೊಳಿಯಾsಕ ॥ ೨೩ ॥

ಗಂಗೀ ಗೌರೀ ಹಾಡು

(೧)

ಗಂಗಿನ ತರಬೇಕಂತ ನಂದಿನ ಸ್ಹಂಗಾರ ಮಾಡಿ ॥
ಕೊಂಬಣಾಸ ಕೊರಳsಸ ಹುಲಗೆಜ್ಜಿ। ಕೋಲ ॥ ೧ ॥

ಕೊಂಬುs ಅಣಸ ಕೊರಳ ಹುಲಗೆಜ್ಜಿ ಶಿವರಾಯಾ ॥
ಗಂಗಿsನ ತರವೋs ನಡದಾರ। ಕೋ ॥ ೨ ॥

* * * *

ಹಳ್ಳsದ ದಂಡಿsಗಿ ಹೊವ ಕೋವ್ರೂ ಜಾಣಿ ॥
ಲಿಂಗಕೊಂಡ್ಹೂವ ದಯಮಾಡ। ಕೋ ॥ ೩ ॥

ಲಿಂಗಕೊಂಡ್ಹೂವs ದಯಮಾಡಿದ್ರ ಮಾಡೇನ ॥
ನಮ್ಮವ್ವ ನಮಗs ಬೈದಾಳ। ಕೋ ॥ ೪ ॥

ಹಳ್ಳsದ ದಂಡಿsಗಿ ಹೂವ ಕೋ೯ವ್ರೂ ಜಾಣಿ ||
ಲಿಂಗಕ್ಕೆರಡ್ಹೂವs ದಯಮಾಡ | ಕೋ೯ ||೫||

ಲಿಂಗಕ್ಕೆರಡ್ಹೂವ ದಯಮಾಡಿದ್ರ ಮಾಡೇ೯ನ ||
ನಮ್ಮಪ್ಪ ನಮಗs ಬಡದಾನ | ಕೋ೯ ||೬||

ನಿಮ್ಮವ್ವ ಬೈದsರ ನಿಮ್ಮಪ್ಪ ಬಡಿದsರ ||
ಬೇ೯ಗ ಬಾ ಗಂಗಾ ಜಡಿಯಾಗ | ಕೋ೯ ||೭||

ಬಂದsರ ಬಂದೇ೯ನ ನೆಂಬಿಗಿಲ್ಲೋ೯ ಶಿವನೆ ||
ರಂಭ್ಯಾsಳೊ ನಿನ್ನ ಮನಿಯಾಗ | ಕೋ೯ ||೮||

ನನ್ನಾಣಿ ನಿನ್ನಾಣಿ ಮತ್ತ ನಿ೯ಗದಾಣಿ ||
ರಂಬಿಲ್ಲ ನನ್ನ ಮನಿಯಾಗ | ಕೋ೯ ||೯||

ಬಂದsರ ಬರುವೇನೊ ನೆಂಬಿಗಿಲ್ಲೋ೯ ಶಿವನೆ ||
ಮಡದ್ಯಾsಳೊ ನಿನ್ನ ಮನಿಯಾಗ | ಕೋ೯ ||೧೦||

ನನ್ನಾಣಿ ನಿನ್ನಾಣಿ ಮತ್ತ ದೇ೯ವsರಾಣಿ ||
ಮಡದಿಲ್ಲ ನನ್ನ ಮನಿಯಾಗ | ಕೋ೯ ||೧೧||

* * * *

ಜಡಿಯಾಗ ಹೋ೯ಗೂದು ಗಿಣಿರಾಮ ಕಂಡಾನ ||
ಹೋ೯ಗಿ ಹೇ೯ಳ್ಯಾನs ಗೌರವ್ವ | ಕೋ೯ ||೧೨||

ಮನಗಿsದ ಗೌರವ್ವ ಮೈಮುರಿದು ಎದ್ದಾಳ ||
ತಣ್ಣೀ೯ರ ಗಿಂಡೀ೯ಲಿ ಮಕ ತೊಳೆದ | ಕೋ೯ ||೧೩||

ತಣ್ಣೀ೯ರ ಗಿಂಡೀ೯ಲಿ ಮಕ ತೊಳೆದ ಗೌರವ್ವ ||
ಹ್ವಾದಾಳಣ್ಣಾsನ ಅರಮನಿಗಿ | ಕೋ೯ ||೧೪||

ಎಂದಿಲ್ದ ಗೌರವ್ವ ಇಂದ್ಯಾಕ ಬಂದಾಳ ||
ಕುಂಡsರ ಕುಡರೇ೯ ಮಣಿಚೌಕಿ | ಕೋ೯ ||೧೫||

ಕುಂಡಕರ ಬಂದಿಲ್ಲ ನಿಂದಕರ ಬಂದಿಲ್ಲ ||
ನಾ ಒಂದ ಕನಸ ಹೇಳಬಂದ | ಕೋ || ೧೬ ||

ಕೆರಿಮ್ಯಾಲಿ ಕೆರಿಹುಟ್ಟಿ ಕೆರಿಮ್ಯಾಲಿ ಮರಹುಟ್ಟಿ ||
ಮರದ ಮ್ಯಾಲೊಬ್ಬ ಬಲಿಹಾಕಿ | ಕೋ || ೧೭ ||

ಕೆರಿಯಂದ್ರ ಶಿವರಾಯಾ ಮರ ಅಂದ್ರ ಬಡಿಗೋಳು ||
ಬಲಿಯಂದ್ರ ಒಳಗ ಸಿರಿಗಂಗಿ | ಕೋ || ೧೮ ||

ದೇಶಾನೆ ಆಳವರಿಗೇಸೊಂದು ಹೇಡ್ವರ ||
ನಿನಗ್ಯಾಕ ತಂಗೀ ಪರದುಕ್ಕ | ಕೋ || ೧೯ ||

ಕಿಡಿಕಂಡಿಸಾದಾಳ ಕಿಡಿಚಂಡಸಾದಾಳ ||
ಎಡವಿದ ಬೆರಳೊಂದರವಿಲ್ಲ | ಕೋ || ೨೦ ||

ಎಡವೀದ ಬೆರಳೊಂದರವಿಲ್ಲ ಗೌರವ್ವ ||
ಬಂದಾಳ ತನ್ನ ಅರಮನಿಗೆ | ಕೋ || ೨೧ ||

* * * *

ಗೊಬ್ಬೂರ ಹಾದೀಲಿ ಒಬ್ಬಯ್ಯ ಬರತಾನ ||
ಅಬ್ಬರಣಿ ಗೌರೀ ಸಿಂಗರಿಸಡ | ಕೋ || ೨೨ ||

ಒಂದ್ ಗಿಂಡಿ ಇಡು ಅಂದ್ರ ಎರಡ ಗಿಂಡಿ ಇಟ್ಟ್ಯಾಳ ||
ನಿನಗಿಬ್ಬರೇನ ಪುರುಷರ | ಕೋ || ೨೩ ||

ಅಯ್ಯಯ್ಯ ಶಿವಶಿವ ಅನಕದ ಮಾತ್ಯಾಕೊ |
ಸರವ ಕೆಂಜೆಡಿ ಮಣಿಮುಕುಟ | ಕೋ || ೨೪ ||

ಸರವನೆ ಕೆಂಜೆಡಿ ಮಣಿಮುಕುಟದೊಳಗಿನ ||
ಸಿರಿಗಂಗಾಗೊಂಡು ನಿನಗೊಂದ | ಕೋ || ೨೫ ||

ಗೊಬ್ಬೂರ ಹಾದೀಲಿ ಒಬ್ಬಯ್ಯ ಬರತಾನ ||
ಅಬ್ಬರಣಿ ಗೌರಿ ಎಡಿಮಾಡ | ಕೋ || ೨೬ ||

ಒಂದೆsಡಿ ಮಾಡಂದ್ರ ಎರಡೆsಡಿ ಮಾಡ್ಯಾಳ ||
ನಿನಗಿಬ್ಬರೇನ ಪುರುಷsರ | ಕೋ || ೨೭ ||

ಅಯ್ಯಯ್ಯ ಶಿವಶಿವ ಅನಕsದ ಮಾತ್ಯಾಕೊ ||
ಸರವ ಕೆಂಜೆsಡಿ ಮಣಿಮುಕುಟ | ಕೋ || ೨೮ ||

ಸರಪsನೆ ಕೆಂಜೆsಡಿ ಮಣಿಮುಕುಟದೊಳಗಿsನ ||
ಸಿರಿಗಂಗಿಗೊಂದs ನಿಮಗೊಂದs | ಕೋ || ೨೯ ||

ಗಂಗೀನ ತಂದsರ ತಂಗೀನ ತಂದಂಗ ||
ನಿಂಗsವ ತಾರ ಬಡಿತೇನ | ಕೋ || ೩೦ ||

ಗಂಗಿsನ ತಂದsರ ತಂಗೀನ ತಂದಂಗ ||
ಖಿಂಡsವ ತಾರs ಬಡಿತೇನ | ಕೋ || ೩೧ ||

* * * *

ಬೆಳ್ಳಿ ಬಟ್ಟಲದಾಗ ಎಳ್ಳೆಣ್ಣಿ ತಕ್ಕೊಂಡು ||
ಗೌರ್‍ಯ್ಹೋದಳವನs ತೆಲಿ ಹೂಸ | ಕೋ || ೩೨ ||

ತೆಲಿಯಂಬ ಭಾಂವಕ ಒತ್ತ್ಯ್ಯಾಳ ವರಿಸ್ಯಾಳ ||
ಟೊಂಕಂಬು ಭಾಂವsಕೆಳಿದಾಳ | ಕೋ || ೩೩ ||

ಟೊಂಕೆಂಬೊ ಭಾಂವಕ ಒತ್ತ್ಯ್ಯಾಳ ವರಿಸ್ಯಾಳ ||
ಪಾದಂಬ ಭಾಂವsಕೆಳಿದಾಳ | ಕೋ || ೩೪ ||

ಪಾದಂಬೊ ಭಾಂವಕ ಒತ್ತ್ಯ್ಯಾಳ ಒರಿಸ್ಯಾಳ ||
ನೆಲ ಸೋಸಿ ಗಂಗಿ ಹರಿದಾಳ | ಕೋ || ೩೫ ||

ಗಂಗ್ಹೋದ ಮರುದಿsನ ಗೌರಿ ಮುಟ್ನಾದಾಳ ||
ಮಿಂದೆನಂದsರs ನೀರಿಲ್ಲ | ಕೋ || ೩೬ ||

ಮಿಂದೇನು ಅಂದsರ ನೀರಿಲ್ಲ ಶಿವರಾಯಾ ||
ಹಾಲಿsನ ಕ್ಷಡಾ ಖಳವ್ಯಾನ | ಕೋ || ೩೭ ||

ಹಾಲೀಲಿ ಮಿಂದಿದರ ಹೋಗಽವು ಮುಡಚಾಟ ||
ತಂಗಿ ಗಂಗಮನ ಖಳವಽರಿ | ಕೋ || ೩೮ ||

ಗಂಗ್ಯ್ಯೋಽದ ಮರದಿಽನ ಗೌರಿ ಮುಟ್ನಾದಾಳ ||
ಮಿಂದೇನಂದಾರಽ ನೀರಿಲ್ಲ | ಕೋ || ೩೯ ||

ಮಿಂದೇನು ಅಂದಽರ ನೀರಿಲ್ಲ ಶಿವರಾಯಾ ||
ತುಪ್ಪಽದ ಕ್ವಡಾ ಖಳವ್ಯಾನ | ಕೋ || ೪೦ ||

ತುಪ್ಪೀಲಿ ಮಿಂದಿದರ ಹೋಗಽವ ಮುಡಚಾಟ ||
ತಂಗಿ ಗಂಗಮನ ಖಳುವಽರಿ | ಕೋ || ೪೧ ||

ಗಂಗೀ ಗೌರೀ ಹಾಡು

(೨)

ಅಡವಿಯನ್ನಿ ಮರನೆ
ಗಿಡವ ಬನ್ನಿ ಮರನೆ
ಅಡವ್ಯಾಗ ಇರುವಂಥ
ಸಾರಂಗ ಸರದೂಳಿ
ಹೆಬ್ಬುಽಲಿ ಹುಲಿಕರಡಿ
ಎಡಬಲ ಹಾಂವು ತೇಽಳೋ ದೇವಾ |
ಎನ್ನ ಮೇಲಾಡಿ ಶ್ರೀಗಂಗೀನ ತಂದಿ |
ಎನ್ನ ತಪ್ಪೇನು ಕಂಡಿ || ೧ ||

ಪಟ್ಟಣದ ದಾರಿ ಮ್ಯಾಲ
ಹಿಟ್ಟಗಲ್ಲಿನ ಮ್ಯಾಲ
ಕತ್ತ್ರಿಽಯ ವರಿಯಂಗ
ವರಿಯವರು ಇದ್ದಲ್ಲಿ

ಇಪ್ಪತ್ತು ಗಾಂವುದ ತಪನಿದ್ದೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ।
ಎನ್ನ ತಪ್ಪೇನು ಕಂಡಿ ॥೨॥

ಸಾರಂಗ ದಾರಿಮ್ಯಾಲ
ಸಾಲಗಲ್ಲಿನ ಮ್ಯಾಲ
ಭೂಜೀಯ ಮಣಿಯಂಗ
ಮಣಿಯವರು ಇದ್ದಲ್ಲಿ
ನಾಲ್ವತ್ತು ಗಾಂವುದ ತಪನಿದ್ದೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ।
ಎನ್ನ ತಪ್ಪೇನು ಕಂಡಿ ॥೩॥

ತನುಪ ಇಲ್ಲದ ಗಂಗಿ
ಧಣ್ಣೀರಿಗ್ಹೋದಾಗ
ಸಿಂಬೀಹಣ್ಣೀನಂಗ
ತುಂಬೀದ ಕುಚಗಳು
ಬಂದ ಕುಂತಾಳ ಜಡಿಯೊಳಗೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ।
ಎನ್ನ ತಪ್ಪೇನು ಕಂಡಿ ॥೪॥

ಒಟ್ಟೀದ ಘಣವೀಗಿ
ಕೀಚಗುಳ್ಳ ಬಿದ್ದಂಗ
ಮುತ್ತೀನ ರಾಸೀಗಿ
ಕಳ್ಳರು ಬಿದ್ದಂಗ
ಚಿಕ್ಕಂದಿನೊಗತಾನಾ
ಮತ್ತೊಬ್ಬಿಗಾಯ್ತುಂದ
ಹೊಟ್ಯಾಗ ಭೆಂಕಿ ಬರಕ್ಯಾದೋ ದೇವಾ
ಎನ್ನ ಮೇಲಾಡಿ ಶ್ರೀಗಂಗೀನ ತಂದಿ।
ಎನ್ನ ತಪ್ಪೇನು ಕಂಡಿ ॥೫॥

ಭಾವಗೀತಗಳು

ಕೂಸಿನ ಹಾಡು

ಕೂಸ ಕೂಸೆಂದೇನ ಕುಂದಽಲದ್ದ್ರಳಿಽಗಿ ।
ಮಂಡಲದಾಗಾಡೊ ಮಗನ ಗೋವಿಂದಾ ॥
ಕೂಸ ಕಂಡಿಽರೇ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೧ ॥

ಸಣ್ಣಾಗಿ ಬೀಸಿಽದ ಸಂಣ್ಣಲ್ಲಿ ಮಾಡಿಽದ ।
ಬೆಣ್ಣಿಚ್ಚಿ ರೊಟ್ಟೀ ನಾ ಕುಡುವೆನವ್ವಾ ॥
ಕೂಸ ಕಂಡಿಽರೀ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೨ ॥

ಹಸರಂಗಿ ತೊಡಸಿಽದ ಹಾಲಗಡಗ ಇಡಸಿಽದ ।
ಕುಸಲದ ಟೊಪ್ಪಿಽಗಿ ತೆಲಿಮ್ಯಾಲಿತ್ತವ್ವಾ ॥
ಕೂಸ ಕಂಡಿಽರೆ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೩ ॥

ಭಾಂಯಿ ಮ್ಯಾಲ ನಿಂತಿತ್ತು ಬಾಯಿ ಮಾಡಿ ಅಳತಿತ್ತು ।
ಕಂಡ ಬಾಲ್ಯಾರಿಗಿಽ ಕೈಮಾಡಿತವ್ವಾ ॥
ಕೂಸ ಕಂಡಿಽರೆ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೪ ॥

ಬಿಳಿ ಅಂಗಿ ತೊಡಸಿಽದ ಬಿಳಿಮುತ್ತನಿಡಸಿಽದ ।
ಅಂಗಳದಾಗ ಕೂಸಾ ಮಾಯಾಯಿತವ್ವಾ ॥
ಕೂಸ ಕಂಡಿಽರೆ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೫ ॥

ಗಂಡಹೆಂಡರು ಕೂಡಿ ಖಂಡಗ ಹರಕೀ ಮಾಡಿ ।
ನಾ ಗಂಡಸಮಗನ್ನಽ ಹಡದಿದ್ದನವ್ವಾ ॥

ಕೂಸ ಕಂಡಿಽರೆ । ಅವ್ವಾ ನನ್ನ ।
ಬಾಲಽನ ಕಂಡಿಽರೆ ॥ ೬ ॥

ಜನವ ಜಾತ್ರಿಽಗ್ಹೊಯ್ತ ನಾನೂ ಜಾತ್ರಿಽಗ್ಹ್ವಾದ ।
ಜನಕಿಲ್ಲದ ಕೇಃಡಾ ನನಗಾಯಿತವ್ವಾ ॥
ಕೂಸ ಕಂಡಿಽರೆ । ಅವ್ವಾ ನನ್ನ ।
ಬಾಲನ ಕಂಡಿಽರೆ ॥ ೭ ॥

ಎತ್ತಿನ ಹಾಡು

ಮಾಗಿಽಯ ಹೊಡಿಯಾಗ
ನನ ಕೈಲೆ ಮಾಯದಿಂದ ಮಾಡಿಸಿಕೋಂಡ್ಯಾ
ನಾ ಹೋಃಗಿ ಒಂದ
ತೆನಿಧಂಟ ತಿಂದರ
ಕಲ್ಲಕಲ್ಲಿಲೆ ಹೊಡದ್ಯೊ । ನಮ ಜೀಃವ ಹೋಃದಾವೊ
ಕೈಲಾಸಕ ॥೧॥

ನಾ ಒಂದ ಬಿತ್ತಿಽದಽ ನಾ ಒಃದ ಬೆಳದೀಃದ
ನಾ ಹೋಃಗಿ ಒಂದ
ಹೊಡೆಧಂಟ ತಿಂದರ
ಬಡಬಡಗಿಲೆ ಹೊಡದ್ಯೊ । ನಮ ಜೀಃವ ಹೋಃದಾವೊ
ಕೈಲಾಸಕ ॥೨॥

ಹತ್ತಿಕಾಳ ಕುಡು ಅಂದ್ರಽ
ಸಿನ ಮಡದಿ ಅತ್ತ ಮಾರಿ ತಿರುವ್ಯಾಳ
ಹತ್ತಗೊಳಗ ತಿನ್ನಂದ್ರ
ಖಂಡಽಗ ತಿನ್ನುವ

ತುಂಡಿನಾ ತಂದ್ಕೊಡೊ । ನನು ಜೀವ ಹೋಂದಾವೊ
ಕೈಲಾಸಕ ॥ ೩ ॥
ಹಿಂಡಿಯ ಕುಡು ಅಂದಾ
ನಿನ ಪಡದಿ ಮೂಗನೆ ಮುರದಾಳ
ಖಂಡಗ ತಿನ್ಸಂದ್ರ
ಇಖ್ಬಂಡ್ಗ ತಿನ್ಸಂಧ
ತುಂಡಿನಾ ತಂದ್ಕೊಡೊ । ನನು ಜೀವ ಹೋಂದಾವೊ
ಕೈಲಾಸಕ ॥ ೪ ॥

ಇಕ್ಕಿದರ ಹೇಂಡಿಸಾದಿನಾ । ಹಚ್ಚಿದರ ಕುಳ್ಳಸಾದಿನಾ
ದೇವರ ಮುಂದಿನ
ಪರಸಾದ ನಾ ಆದ
ಮತ್ತ್ಯಾತಕಾದೇನಾ । ನನು ಜೀವ ಹೋಂದಾವ
ಕೈಲಾಸಕ ॥ ೫ ॥
ಸತ್ತರ ತೊಗಲಾದೇನಾ । ಮೆಟ್ಟಿದರ ಕೆರವಾದೇನಾ ।
ಹೆಗಲ ವ್ಯಾಲಾಡಂತ
ಬಾರಕೋಲ ನಾ ಆದ
ಮತ್ತ್ಯಾತಕಾದೇನ । ನನು ಜೀವ ಹೋಂದಾವ
ಕೈಲಾಸಕ ॥ ೬ ॥

ಮಳೀ ಹಾಡು

ಬಣ್ಣಾದ ಗುಬ್ಬ್ಯಾರು ಮಳಿರಾಜಾ । ಅವರು ।
ಮಣ್ಣಾಗಿ ಹೋದರು ಮಳಿರಾಜಾ ॥
ಬಣ್ಣಾದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳಿರಾಜಾ ॥ ೧ ॥

ಒಕ್ಕಲಗೇರ್‍ಯಾಗ ಮಳಿರಾಜಾ । ಅವರು ।
ಮಕ್ಕಳು ಪಾರ್‍ಯಾರ ಮಳಿರಾಜಾ ॥
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತಂಡs ತಿರಗ್ಯಾರ ಮಳಿರಾಜಾ ॥ ೨ ॥

ಸೊಲಗಿ ಹಿಟ್ಟಿನಾಗ ಮಳಿರಾಜಾ । ಅವರು ।
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ ॥
ಹಸ್ತು ಬಂದಕೇರಿ ಗಪಗಪ ತಿಂದು
ಒದ್ದ್ಯಾಡಿ ಸತ್ತಾರ ಮಳಿರಾಜಾ ॥ ೩ ॥

ಗಿದ್ವನ ಅಕ್ಕ್ಯಾಗ ಮಳಿರಾಜಾ । ಅವರು ।
ಅಪ್ಪುವನ್ನು ಕೂಡ್ಯ್ಯಾರ ಮಳಿರಾಜಾ ॥
ಸಣ್ಣ ಕೂಸಿಗಿ, ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಚ್ಯಾವ ಮಳಿರಾಜಾ ॥ ೪ ॥

ಗಂಡುಳ್ಳ ಬಾಲ್ಯಾರು ಮಳಿರಾಜಾ । ಅವರು ।
ಭಿಕ್ಷ್ಯಾಕ ಹೊರಟಾರ ಮಳಿರಾಜಾ ॥
ಗಂಡುಳ್ಳ ಬಾಲ್ಯಾರು ಭಿಕ್ಷ್ಯಾಕ ಹೋದರು
ಅನ್ಯದ ದಿನ ಬಂದು ಮಳಿರಾಜಾ ॥ ೫ ॥

ಸ್ವಾತಿsಯ ಮಳಿ ಬಂದು ಮಳಿರಾಜಾ । ಸುತ್ತ ।
ದೇಶಾಕ ಆಗ್ಯಾದ ಮಳಿರಾಜಾ ।
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ ॥ ೬ ॥

ಕಥೆಯ ಹಾಡುಗಳು

ಆಕಳ ಹಾಡು

ತಾಯ್ ಹೊಟ್ಟಿ ತಂಗಾಲಿ ತಾಯಿರಲಿ ದ್ರೌಪತಿ |
ನೀಲಗೊಂಡೇದ ನಿರವೀರ | ಬಾಲನ ಮ್ಯಾಲ |
ಶ್ರೀರಾಮರಿದ್ದಾರೊಂದಗಲಾದೆ ||೧||

ಎಂದೀಗಿ ಈ ಹಾಡ ಹೋಂದಿಸ್ತಿದ್ದಾರೆಂದು |
ಅಂಗಳಕ ಬಂದು ತಿರಗೀನೆ | ಹ್ವಾದವರು |
ಹಾಳು ದೇಗುಲದ ಕದವಾಗೆ ||೨||

ಎಂದೀಗಿ ಈ ಹಾಡ ಹೋಂದಿಸ್ತಿದ್ದಾರೆಂದು |
ಬಾಗಿಲಿಗಿ ಬಂದು ತಿರಗೀನೆ | ಹ್ವಾದವರು |
ಹಾಳ ಹಿತ್ತಲದ ಕದವಾಗೆ ||೩||

* * * *

ಪಟ್ಟೋಳಿ ಗುಡಿ ತಂದು ಕಟ್ಟ್ಯಾರ ನಡುಮನಿ |
ಸುತ್ತ ಸಾರುಸಪ ಹೊಳಿಯುಸವ | ಗುಡಿಗೋಳು |
ಕಟ್ಯಾರ ಬವಲಿ ನಡುಮನಿಯ ||೪||

ರೊಕ್ಕಸ್ತ್ರ ಗುಡಿ ತಂದು ಕಟ್ಟ್ಯಾರ ನಡುಮನಿ |
ಸುತ್ತ ಸಾರುಸವ ಹೊಳೆಯುಸವ | ಗುಡಿಗೋಳು |
ಕಟ್ಟ್ಯಾರ ಬವಲಿ ನಡುಮನಿಯ ||೫||

ತಪ್ಪಾನೆ ಈ ಕಾಲ ತಪ್ಪಾನೆ ತೊಯ್ದಾವ |
ಮುತ್ತು ಸುರದಂಗ ಬಿಪತಾಳ | ಬವಲಿ ತಾ |
ಪುತ್ರನ ಈಗ ಹಡದಾಳ ||೬||

ತಟ್ಟಾನೆ ಈ ಕಾಲ ತಪ್ಪಾನೆ ತೊಯ್ದಾವ |
ಹವಳ ಸುರಿದಂಗ ಬಿಪತಾಳ | ಬವಲಿ ತಾ |
ಕಂದನ ಈಗ ಹಡದಾಳ ||೭||

ಉಚ್ಚ್ಯಾಯ ದಿನದಲ್ಲ ದಡ್ಡಿಕಯ ಉಡುಗೂಸಿ ।
ಉಪ್ಪ ಅಂಬೀಲ ಕರಿಯ ಜೀವನೆ ತರಿಸಿ ।
ಕೆಂಚಕಲ ಮ್ಯಾಲ ಇಳಿವ್ಯಾರ ॥ ೮ ॥

ಹಾಲಾನೆ ತರಸ್ಯಾರ ಗಿಣ್ಣಾನೆ ಕಾಸ್ಯಾರ ।
ತಂದಿಟ್ಟರ ಪುಸಿಯ ನಡುಮುಸಿಯ ।
ಬಾಳಿಕಯ ಎಲಿ ಹಾಸಿ ಆಳ ಗೌವಳರೆಲ್ಲಾ ।
ಉಂಡಾರ ಗಿಣ್ಣ ಜನರೆಲ್ಲಾ । ಸರುರೆಲ್ಲಾ ।
ಬಾಲನ ತಾಯಿ ಸುಖಿಸಿರಕ ॥ ೯ ॥

ನಿಂಬಿಕಯ ಎಲಿ ಹಾಸಿ ಇಂದರ ಗೌವಳರೆಲ್ಲಾ ।
ಉಂಡಾರ ಗಿಣ್ಣ ಜನರೆಲ್ಲಾ । ಸರುರೆಲ್ಲಾ ।
ಕಂದಕನ ತಾಯಿ ಸುಖಿಸಿರಕ ॥ ೧೦ ॥

ಅತ್ತಿಕಯ ಎಲಿ ಹಾಸಿ ಸುತ್ತಿನ ಗೌವಳರೆಲ್ಲಾ ।
ಉಂಡಾರ ಗಿಣ್ಣ ಜನರೆಲ್ಲಾ । ಸರುರೆಲ್ಲಾ ।
ಪುತ್ರನ ತಾಯಿ ಸುಖಿಸಿರಕ ॥ ೧೧ ॥

ಮುತ್ತಿಕನ ಆರುಕತಿ ಮುನಿಯ ತಂವೆತ್ತೀದಾ ।
ಲಕ್ಷಣವಂತಿ ಗುಣವಂತಿ । ಬವಲಿ ತಾ ।
ಹೊಕ್ಕೊಮ್ಮೆ ಬಾರ ಹೊಲಗೋಳ ॥ ೧೨ ॥

ಬರದ ಬತ್ತಿಸಿದಂತಾ ಕರಚೆಲುವಿ ಬವಲಿ ತಾ ।
ತೊರದ ಹಿಮ್ಮಾಲಿ ಕೆಲಕು ಹೊತ್ತಲಿ ತನ್ನ ।
ಪರದಕ್ಷದಿಂದ ನಡದಾಳ ॥ ೧೩ ॥

ಮುಂದ ಹಿಂಡಕನ್ನಾಕಿ ಹಿಂದ ತಾ ಆಗ್ಯಾಳ ।
ಹಿಂಗೆಚ್ಚಲವ್ವ ಬಳಲ್ದೀವಿ । ಬವಲಿ ತಾ ।
ಹ್ವಾದಾಳ ಬಾವಂಜಿ ಬನದಾಕಗ ॥ ೧೪ ॥

ಒಳಿಯ ಒಳಿಯಾಕ್ಹೋಗಿ ಹೊಡಿಯ ಹುಲ್ಲನೆ ಮೆಯ್ದು ।
ಹಿರಿದೊಂದು ಕಿರಿದೊಂದು ತೆನಿಯ ಹುಲ್ಲನೆ ಮೆಯ್ದು ।
ಕೆಂಚನ ತುಂಬಿ ಬಿಗಿದಾನ || ೧೫ ||

ಒಳಿಯ ಒಳಿಯಾಕ್ಹೋಗಿ ಹೊಡಿಯ ಹುಲ್ಲನೆ ಮೆಯ್ದು ।
ಒಪ್ಪುಳ್ಳ ಕೊಡವ ತಿಳಿಯ ನೀರನೆ ಕುಡಿದು ।
ಕೆಂಚನ ತುಂಬಿ ಬಿಗಿದಾನ || ೧೬ ||

ಮುಂದ ಹಿಂಡನ್ಹಾಕಿ ಹಿಂದ ತಾ ಆದಾಳ ।
ಏರೊಮ್ಮಿ ಇಳಿದು ಬರುವಾಗ ।
ನಾರಿ ಕಂಡಾಳ ಹುಲಿಗೋಳ || ೧೭ ||

ಎಲ್ಲೀದು ಹುಲ್ಲೀದು ಎಲ್ಲೀದು ನೀರಿನದು ।
ಎಲ್ಲೆನ್ನ ಇದಿಯು ಎಳೆದೆನ್ನ ತಂದೀತು ।
ಕಂದನ ಇಂದು ಅಗಲೀನ || ೧೮ ||

ಎತಲೀದು ಹುಲ್ಲೀದು ಎತಲಿಂದು ನೀರಿನದು ।
ಎತಲೆನ್ನ ಇದಿಯು ಎಳೆದೆನ್ನ ತಂದೀತು ।
ಪುತ್ರನ ಇಂದ ಅಗಲೀನ || ೧೯ ||

ಬಾಲನಗ ಮಲಿಕೊಟ್ಟು ಬಂದೀನು ನಾ ಈಗ ।
ಬಾಳಿನಯ ಬನದ ತನವಿನಲ್ಲಾಡಂತ ।
ಬಾಲಯ್ಯನಾಣಿ ಹುಸಿಯಲ್ಲ || ೨೦ ||

ಕಂದನಗ ಮೊಲಿಕೊಟ್ಟು ಬಂದೀನು ನಾ ಈಗ ।
ನಿಂಬಿನಯ ಬನದ ತನವಿನಲ್ಲಾಡಂತ ।
ಕಂದಯ್ಯನಾಣಿ ಹುಸಿಯಲ್ಲ || ೨೧ ||

ಪುತ್ರನಗ ಮೊಲಿಕೊಟ್ಟು ಬಂದೀನು ನಾ ಈಗ ।
ಅತ್ತಿನಯ ಬನದ ತನವಿನಲ್ಲಾಡಂತ ।
ಪುತ್ರಯ್ಯನಾಣಿ ಹುಸಿಯಲ್ಲ || ೨೨ ||

*　　*　　*

ಅಕ್ಕತಂಗೆರು ನೀವು ಒಪ್ಪಿಲಿ ಬರುವುದು ಕಂಡು ।
ನನ್ನ ಕೋಮಾರ ಅರಬಕ್ಷಿ ಪರಬಕ್ಷಿ ।
ಒಬ್ಬರೊಂದೀನ ಮಲಿಗೊಳ್ಳs || ೨೩ ||

ತಾಯಿ ಮಕ್ಕಳ ನೀವು ಚ್ಯಾಯಲಿ ಬರುವುದು ಕಂಡು ।
ನನ್ನ ಕೋಮಾರ ಅರಬಕ್ಷಿ ಪರಬಕ್ಷಿ ।
ಒಬ್ಬರೊಂದೀನ ಮಲಿಗೊಳ್ಳs || ೨೪ ||

*　　*　　*

ಬೇಲಿಮ್ಯಾಲೀನ್ಹುಲ್ಲಿ ಚಾಯದಲೆಯ್ಹಾವೆಂದು ।
ಹೋಗಿ ಮಲಿಬ್ಯಾಡ ಬಾಲ ಮಲ್ಲಿಗಿ ನಿನ್ನ ।
ಸಾಲೀಗ್ಗಿ ಮುಳ್ಳ ಮುರದಾsವ || ೨೫ ||

ಹುತ್ತಿನ ಮ್ಯಾಲೀನ್ಹುಲ್ಲಿ ಹಚ್ಚಗೆಯ್ಹಾವೆಂದು ।
ಹೋಗಿ ಮಲಿಬ್ಯಾಡ ಬಾಲಮಲ್ಲಿಗಿ ನಿನ್ನ ।
ಕುತ್ತೀಗಿ ಸರಪ ಹರದಾsವ || ೨೬ ||

ಭಾಂವಿ ಮ್ಯಾಲಿನ ಹುಲ್ಲ ಚಾಯದಲೆಯ್ಹಾವೆಂದು ।
ಹೋಗಿ ಮಲಿಬ್ಯಾಡೊ ಬಾಲಮಲ್ಲಿಗಿ ನಿನ್ನ ।
ಕಾಲ ಜಾರಿದರ ಮುಣಗೀಯೊ || ೨೭ ||

ಇಷ್ಟನೆಲ್ಲಾ ಹೇಳಿ ನೀ ಎಲ್ಹೋಗುತಿ ತಾಯಿ ।
ನೀ ಹ್ವಾದಲಿ ನಾನು ಬರುವೆsನ ।
ನೀ ಹ್ವಾದಲಿ ನಾನು ಬರುವೆsನ ಅಂದsರ ।
ದಾವ್ರಣಿ ಕುಣಕಿ ಸಡಲ್ಯಾವ || ೨೮ ||

ಮುಂದ ಹಿಂಡsನ್ಹಾಕಿ ಹಿಂದ ತಾನಾದಾಳ ।
ಹಿಂಗೆಚ್ಚಲವ್ವ ಬಳಲ್ದೀವಿ । ಬವಲಿ ತಾ ।
ಹ್ವಾದಾಳ ಬಾವಂಜಿ ಬನದಾಗ || ೨೯ ||

ಮಲಗಿರುವ ಹುಲಿರಾಜನ ತೊಡಿ ಬಡೆದು ಎಬ್ಬಽಸಿ ।
ಅನ್ಯಽವನಾಡದೆ ಕರತಿನ್ನಽ ।
ನನ್ನಪ್ಪ ನನ ತಾಯಿ ನಾ ನಿನ್ನ ತಿನಲಾರ
ಇನ್ನಾರ ತಿಂಗಳುಪ್ಪಾಸ ॥ ೩೦ ॥

ಹುಲಿರಾಜ ಬಳಲ್ದೀವಿ ಏಕಾಂತ ಮಾತಾಡಾಗ ।
ಊದೂವ ಶಂಖ ಹರಿ ಕೂಳಿ ಬಂದಾವ ।
ಖ್ಯಾತೆ ಬಳಲ್ವೀವಿ ಇದಿರ್ಗೊಳ್ಳ ॥ ೩೧ ॥

ಎಳ್ಳಾಮಾಸೀ ಹಾಡು

ಸರಸೀಗಿ ಬರವೂದು ।
ಸರಸಪ್ಪ ಎಳ್ಳಾಮಾಸಿ । ಕೋಲಣ್ಣ ಕೋಲ ॥ ೧ ॥

ಏಳ ಮಂದಿ ಸೆಗೇಣಿ ಮಕ್ಳು ॥
ಬೆಳ್ಳ ಬೆಳಗಾಽನ ಏಳ್ರಿ । ಕೋ ॥ ೨ ॥

ಬೆಳ್ಳ ಬೆಳಗಾಽನ ಏಳ್ರಿ ।
ಮನಿಮಾರ ಸಾರಿಸರೆವ್ವಾ । ಕೋ ॥ ೩ ॥

ಮನಿಮಾರ ಸಾರಿಸರೆವ್ವಾ ।
ತಲಿಯಾರೆ ಎರಕೋರೆವ್ವಾ । ಕೋ ॥ ೪ ॥

ಕಾಯ್‌ಪಲ್ಲ್ಯ ಸೋಸರೆವ್ವಾ ।
ಅಡಿಗೆಂಬಲಿ ಮಾಡರೆವ್ವಾ । ಕೋ ॥ ೫ ॥

ಅಡಿಗೆಂಬಲಿ ಮಾಡರೆವ್ವಾ ।
ಹೆಡಗಿ ಬುಟ್ಟಿ ತುಂಬರೆವ್ವಾ । ಕೋ ॥ ೬ ॥

ಸಣ್ಣಕ್ಕಿ ನಾಗುಬಾಯಿ ।
ಮನಿಮಾರ ಜ್ವಾಕಿನವ್ವಾ । ಕೋ॰ ॥ ೭ ॥

ಮನಿಮಾರ ಜ್ವಾಕಿನವ್ವಾ ।
ಕರ ಬಿಟ್ಟು ಕರ ಕಟ್ಟಿ । ಕೋ॰ ॥ ೮ ॥

ಕರ ಬಿಟ್ಟು ಕರಕಟ್ಟಿಟಗೆ ।
ಕರ ಹೊಯ್ತು ರಾಜಬೀದಿಗಿ । ಕೋ॰ ॥ ೯ ॥

ಪಟ್ಟನೆ ನಾಲ್ಯಾಗ ।
ಸೆಟ್ಟಿ ಸಾವುಕಾರರ ಮಗನ । ಕೋ॰ ॥ ೧೦ ॥
ಸೆಟ್ಟೇನೆ ಸಾವುಕಾರನ ।
ಮಗನ ಆಕೀ ಮ್ಯಾಲ । ಕೋ॰ ॥ ೧೧ ॥

ಬಿರಿಬಿರಿ ಹೋಗ್ಯಾನ ।
ಮನಿಯಾಗ ಮನಗ್ಯಾನ । ಕೋ॰ ॥ ೧೨ ॥

ಏನ ಬ್ಯಾನೆಪ್ಪಾ ಮಗನ ।
ಎಂತ ಬ್ಯಾನೆಪ್ಪಾ ಮಗನ । ಕೋ॰ ॥ ೧೩ ॥

ಏನ ಬ್ಯಾನಿಲ್ಲ ತಾಯಿ ।
ಎಂತ ಬ್ಯಾನಿಲ್ಲ ತಾಯಿ । ಕೋ॰ ॥ ೧೪ ॥

ಕಳಸೆಟ್ಟ್ಯವರ ಸೊಸಿ ಮ್ಯಾಲ ।
ನನ ಮನಸ ಹೋಗ್ಯಾದ ತಾಯಿ । ಕೋ॰ ॥ ೧೫ ॥

* * * *

ಏಳ್ಮಂದಿ ನೆಗೇಣಿ ಮಕ್ಕ್ಯಾ ।
ಮುತ್ತೈದಿತನ ಹೇಳ್ತೈವ್ರಿ । ಕೋ॰ ॥ ೧೬ ॥

ಸಣ್ಣಕ್ಕಿ ನಾಗುಬಾಯಿಗಿ ।
ನಣ ಹೊಡೆದು ಹೆಣಾಹಾಕಿ । ಕೋ॰ ॥ ೧೭ ॥

ಸಟ್ಟೆ ಸರವತ್ತ ಸಾಗ ।
ಹಿಂದಕ ಮುಂದಕ । ಕೋ ॥ ೧೮ ॥

ಆರು ಮಂದಿ ನೆಗೆಣಿ ಮಕ್ಕ್ಯಾಳ ।
ಮುಂಜಾಳಿದ್ದು ಬರತಾಳ್ಹೋಗ್ರಿ । ಕೋ ॥ ೧೯ ॥

* * * *

ಸಟ್ಟೆ ಸರವತ್ತಸಾಗ ।
ಮೈಯಮುಟ್ಟೆ ಕೈಯ ಮುಟ್ಟೆ । ಕೋ ॥ ೨೦ ॥
ಕೊರಳಾನ ಪುತಳಿ ಸರ ।
ಹರದ ದಿಕಪಾಲ ಮಾಡಿ । ಕೋ ॥ ೨೧ ॥

ಸಮ್ಮತ್ತಿ ಬೈತಾಳ ।
ಪೋಣಿಕೊಡರಿ ಸಮಗ । ಕೋ ॥ ೨೨ ॥

ಮುಂದ ಮುಂದ ಪೋಣಿಸ್ತ ।
ಹಿಂದ ಒಂದ ಉಚ್ಚ್ಯಾಳ । ಕೋ ॥ ೨೩ ॥

ಇಟ್ಟನೆ ಆಟಗಟಿಗೆ ।
ಬೆಳ್ಳಬೆಳಗಾನೆ ಆಗಿ । ಕೋ ॥ ೨೪ ॥

* * * *

ಕಾಲಮುಡಿ ಬಂದಿದಾನ ।
ಬಾಗಿಲ ತೆರೀರಿ ಸಮಗ । ಕೋ ॥ ೨೫ ॥
ಬರತೇನಿ ಅಂತ್ಹೇಳಿ ।
ಭಾಷ್ಯೇರಿ ಕೊಟ್ಹೋಗ । ಕೋ ॥ ೨೬ ॥
ಎದಿಯ ಮ್ಯಾಲಿನ ಸೆರಗ ।
ಆತನ ಕೈಯಲಿ ಕೊಟ್ಟ । ಕೋ ॥ ೨೭ ॥
ಒಂದ ಪಾಟುಣಗಿಳದಾಳ ।
ಒಂದ ನಿಲಗಿ ಉಚ್ಚ್ಯಾಳ । ಕೋ ॥ ೨೮ ॥

ಎಡ್ಡ ಪಾಟುಣಗಿಸಳದಾಳ ।
ಎಡ್ಡ ನಿಲಗಿ ಉಚ್ಚ್ಯಾಳ । ಕೋ ॥ ೨೯ ॥

ಮೂರ ಪಾಟುಣಗಿಸಳದಾಳ ॥
ಮೂರ ನಿಲಗಿ ಉಚ್ಚ್ಯಾಳ । ಕೊ ॥ ೩೦ ॥

ಸಾಕೇಬು ಪಾಟುಣಗಿ ।
ಎಮ್ಮೀ ಖೋಡೀಗಿ ಸಿಗಸಿ । ಕೋ ॥ ೩೧ ॥

* * * *

ಅತ್ತೆವ್ವಾ ಅತ್ತೆವ್ವಾ ॥
ಬಾಗೀಲ ತೆರೀರಿ ಸಮುಗ । ಕೋ ॥ ೩೨ ॥

ಸಟ್ಟೆ ಸರವತ್ತನಾಗ ॥
ದೆವ್ವಿದ್ಯಾ ಭೂತಿದ್ಯಾ । ಕೋ ॥ ೩೩ ॥

ದೆವ್ವಿಲ್ಲ ಭೂತಿಲ್ಲ ॥
ಸಣ್ಣಕಿ ನಾಗೂಬಾಯಿ । ಕೋ ॥ ೩೪ ॥

* * *

ಕಳಸಿಟ್ಟೆವರ ಮನಿಸಮುಂದ ॥
ಜಂಬ ನೀಲಸದ ಹಣ್ಣು । ಕೋ ॥ ೩೫ ॥

ಕೈಗ್ಯಾದರು ಬಂದಸವ ॥
ಬಾಯಿಗ್ಯಾದರ ಬರಲಿಲ್ಲ । ಕೋ ॥ ೩೬ ॥

ಅಕ್ಕ ಮಹಾದೇವಿಯ ಹಾಡು

ಅಂಕ ಬಂಕಸದವನ । ಟೊಂಕಿನ ಮ್ಯಾಲ ಕೈಸಯಿಟ್ಟು ।
ಡೊಂಕಸ ನಿಂತಾನ ಇವನ್ಯಾರ । ಕೋಲೆಣ್ಣು ಕೋಲ ॥ ೧ ॥

ಅವ ನನ್ನ ಅಣ್ಣಾವ। ಅವ ನನ್ನ ತಮ್ಮನ।
ಅವ ನನ್ನ ಊರ ಒಡಿಯಾನ। ಕೋ ॥ ೨ ॥

ಅವಾ ನನ್ನಾ ಊರ। ಒಡಿಯಾನ ನನ್ನ ಮಗಳ।
ಅವನಿಗಿ ನಿನಗ ಕೊಡತೀನ। ಕೋ ॥ ೩ ॥

ನೀವು ಜಯಾನರು। ನಾವು ನಿಂಗೋಂತರು।
ಕೊಟ್ಟರೊಲ್ಲೆನ ಜಯನರಿಗಿ। ಕೋ ॥ ೪ ॥

ಶಾಂವಿಗಿನಾಗತಾವ। ಸೈದಾನನಾಗತಾವ।
ಇಂದ್ಯಾನ ಇವರ ಮನಿಯಾಗ। ಕೋ ॥ ೫ ॥

ಇಂದ ಯಾನ ಇವರ। ಮನಿಯಾಗ ಹಡದವ್ನ।
ಅವ್ವನೌವ್ವನತ್ತ ದಿನಗಳ। ಕೋ ॥ ೬ ॥
ಹಪ್ಪಳನಾಗತಾವ। ಶಂಡಿಗಿನಾಗತಾವ।
ಇಂದ್ಯಾನ ಇವರ ಮನಿಯಾಗ। ಕೋ ॥ ೭ ॥
ಇಂದ ಯಾನ ಇವರ। ಮನಿಯಾಗ ಹಡದವ್ನ।
ಅಪ್ಪನವ ನತ್ತ ದಿನಗೋಳ। ಕೋ ॥ ೮ ॥

* * * *

ನನ್ನೂರ ಹಾದಿಂಲಿ। ನಿಬ್ಬಣ ಬರತಾದ।
ನೀ ಏರಿ ನೋಡ ನನ ಮಗಳ। ಕೋ ॥ ೯ ॥

ನಾ ಏರಿ ನೋಡಲಕ। ನನ್ನ ತವರಲ್ಲ।
ನೀ ಏರಿ ನೋಡ ಹಡದವ್ವಾ। ಕೋ ॥ ೧೦ ॥

ಎಣ್ಣೆಯ ಕೊಡಗೋಳು। ಬಣ್ಣದಲಿ ಬರೂತಾವ।
ಮಣ್ಣಾಗ ಬಿದ್ದು ಒಡಿಯಾಲಿ। ಕೋ ॥ ೧೧ ॥

ಮಣ್ಣೊಳಗ ಬಿದ್ದು। ಒಡಿಯಾಲಿ ಈ ಊರ।
ಹೆಣ್ಣ ಖೋಡೆಂದು ತಿಡುಗಲಿ। ಕೋ ॥ ೧೨ ॥
ತುಪ್ಪದ ಕೊಡಗಳೂ। ಒಪ್ಪದಲಿ ಬರೂತಾವ।
ತಿಪ್ಪ್ಯಾಗ ಬಿದ್ದು ಒಡಿಯಲಿ। ಕೋ ॥ ೧೩ ॥

ತಿಪ್ಪಿಯಾಗಽ ಬಿದ್ದು । ಒಡಿಯಽಲಿ ಈ ಊರ ।
ಮಿತ್ರಿ ಖೋಃಡೇಃದು ತಿರುಗಲಿ । ಕೋಃ ॥ ೧೪ ॥

ಛೆಜ್ಜಿಽಯ ಹೊಲದಾಗಽ । ಛೆಲ್ಲ್ಯಾಡೊ ನಿಽಬ್ಬಣ ।
ಫಿಲ್ಲ್ಯಾ ಇಡಬಾರ ಸನ ಮಗಳ । ಕೋಃ ॥ ೧೫ ॥

ಆ ಫಿಲ್ಲ್ಯಾ ನಾಽ ಒಲ್ಲ । ಈ ಫಿಲ್ಲ್ಯಾ ನಾಽ ಒಲ್ಲ ।
ಕೊಟ್ಟಿರೊಲ್ಲಿಽನ ಜಯನರಿಗಿ । ಕೋಃ ॥ ೧೬ ॥

ಹತ್ತಿಽಯ ಹೊಲಽದಾಗ । ಒತ್ತ್ಯಾಡೊ ನಿಃಬ್ಬಣ ।
ನತ್ತ ಇಡಬಾರ ಸನ ಮಗಳ । ಕೋಃ ॥ ೧೭ ॥

ಆ ನತ್ತ ನಾಽ ಒಲ್ಲ । ಈ ನತ್ತ ನಾಽ ಒಲ್ಲ ।
ಕೊಟ್ಟಿರೊಲ್ಲಿಽನ ಜಯನರಿಗಿ । ಕೋಃ ॥ ೧೮ ॥

* * * *

ಊದಸ್ತ ಬಾಽರಸ್ತ । ಸೋಃಬಾನ ಹಾಡುಽತ ।
ಬಂದನ ಮದಮಗ ಅಗಸಿಽಗಿ । ಕೋಃ ॥ ೧೯ ॥

ಅಗಸಿಽಯ ತೆಲಽ ಸನ್ನ । ಬಗಸುಳ್ಳ ತಳಽವಾರಾ ।
ಬೊಗಸಿ ತುಃಬಡಕಿ ಬಿಳಿ ಎಲಿಯ । ಕೋಃ ॥ ೨೦ ॥

ಊದಸ್ತ ಬಾಽರಸ್ತ । ಸೋಃಬಾನ ಹಾಽಡುತ ।
ಬಂದನ ಮದುಮಽಗ ಬಾಗಿಲಿಗಿ । ಕೋಃ ॥ ೨೧ ॥

ಬಾಗಿಲದಾಗಿಽನ ಕುದುರಿ । ಕಾಲಮ್ಯಾಲಾಽಗಲಿ ।
ಮದುಮಗ ಕಾಳಿಂಗ ಮಡಿಯಽಲಿ । ಕೋಃ ॥ ೨೨ ॥

* * * *

ನಮೌಕ್ರಾವ್ವಾ ಕಟ್ಟ್ಯಾಳ । ಎಳ್ಳ ಹಚ್ಚಿಽದ ರೊಟ್ಟಿ ।
ಕೂಡುಂಬುಸು ಬಾರ ನನ ಮಗಳ । ಕೋಃ ॥ ೨೩ ॥

ನೀಃವು ಜೈಯಽನರು । ನಾವು ನಿಂಗೋಃಽತಽರು ।
ನಿಮ್ಮಲ್ಲಿ ನಾವು ಉಣಬರದ । ಕೋಃ ॥ ೨೪ ॥

ಪಟ್ಟೋಳಿ ಸೀರ್ಯುಟ್ಟಿರಿದು | ಬುತ್ತಿಯ ಕಟ್ಟಿದ |
ನೀರ ಕಾಡಲ್ಲಿ ಇಳಿದುಣ್ಣ | ಕೋ || ೨೫ ||

ಇವ್ರೂ ಬುತ್ತಿಗಳು | ನೀವು ಮುಟ್ಟಿರತೀರಿ |
ನಾ ಉಣುದಿಲ್ಲ ಹಡದವ್ವ | ಕೋ || ೨೬ ||

ಒಟ್ಟ ಅಕ್ಕಿಯ ತಗೋ | ಬ್ಯಾಳಿ ಬೆಲ್ಲವ ತಗೊ |
ಮಾಡಿಕೊಂಡುಣ್ಣ ನಿನ್ನಡಿಗಿ | ಕೋ || ೨೭ ||
ಹಿಟ್ಟಕ್ಕಿ ತಗೋಂಡಾಳ ಬ್ಯಾಳಿ ಬೆಲ್ಲ ತಗೊಂಡಾಳ |
ಹ್ವಾದಾಳ ಸಂಗಯನ ಗುಡಿಯಾಗ | ಕೋ || ೨೮ ||

ಎಡಕಾದರ ಸುಳವಿಲ್ಲ | ಬಲಕಾದರ ಸುಳವಿಲ್ಲ |
ಎಲ್ಲ್ಯಾದರಕಿಯ ಸುಳವಿಲ್ಲ | ಕೋ || ೨೯ ||

ಬರದ ಹಾಡು

ಮೊನ್ನಿನ ಬರದಾಗ ಕುಸುಬಿಯ ಮಾರಿದರಲ್ಲ |
ಕೋಲು ಕೋಲೆಣ್ಣ ಕೋಲ || ೧ ||

ಅಣ್ಣಾಗಾದರು ಮಕ್ಕಳಿಲ್ಲ ತಮ್ಮಗಾದರೂ ಮಕ್ಕಳವ | ಕೋ || ೨ ||

* * * *

ಏ ಅಣ್ಣಾ ಏ ಅಣ್ಣಾ ಸೊಲಗಿ ಜ್ವಾಳಾ ಕಡಾಕೊಡು | ಕೋ || ೩ ||

ಸೊಲ್ಲಿಗಿ ಜ್ವಾಳಾ ಕಡನೆ ಕೊಟ್ಟರ ನಟ್ಟ ಕಡಿಯಲಿ ಹ್ವಾದೇನಂದಾ |
ಕೋ || ೪ ||

ಬಿರಿ ಬಿರಿ ಹ್ವಾದನಲ್ಲ ಗಾದ ಮೆತ್ತಿಗಿ ತಗೆದನಲ್ಲ | ಕೋ || ೫ ||

ಗಾದ ಮೆತ್ತಿಗಿ ತಗೆದನಲ್ಲ ಸೊಲ್ಲಿಗಿ ಜ್ವಾಳಾ ಕೊಟ್ಟನಲ್ಲ |
ಕೋ || ೬ ||

ಸೊಲ್ಲಿಗಿ ಜ್ವಾಳಾ ಒಯ್ದುಕೇರಿ ಹೆಣತಿ ಕೈಯಲಿ ಕೊಟ್ಟಾನಲ್ಲಾ |
ಕೋ || ೭ ||

ಒಲೀಮ್ಯಾಲ ಎಸರನಿಟ್ಟು ಒಡಿಲಾಕಾದರು ಕುತ್ತನಳಲ್ಲ |
ಕೋ || ೮ ||

ನೆರಮನಿ ನೆಗಿಯಾಣಿ ಬೆಂಕಿಗಾದರು ಬಂದಾಳಲ್ಲ | ಕೋ || ೯ ||

ಬೆಂಕಿಗಾದರು ಬಂದಳಲ್ಲ ಜ್ವಾಳದ ಗುರುತಾ ಹಿಡಿದಳಲ್ಲ |
ಕೋ || ೧೦ ||

ಒಲಿಮ್ಯಾಲಿನ ಎಸರದಾಗ ಹಿಡಿಗಲ್ಲ ಹಗೆದಳಲ್ಲ | ಕೋ || ೧೧ ||

ಬೀಸಿದ ಹಿಟ್ಟಿನಾಗ ಬೂದಿ ಮಸ್ಲಾ ಕಲಸ್ಯಾಳಲ್ಲ | ಕೋ || ೧೨ ||

ಮರದಾಗಿನ ಜ್ವಾಳಗೋಳು ಉಡಿಯಲ್ಲಾದರು ತಕ್ಕೊಂದಳ |
ಕೋ || ೧೩ ||

* * * *

ಎಂಟು ಮಕ್ಕಳ ಕರಕೊಂಡು ತವರಮನಿಗಿ ಹೋಗೀದಾಳ |
ಕೋ || ೧೪ ||

ಏ ಅತಿಗಿ ಏ ಅತಿಗಿ ಸೇರ ಜ್ವಾಳಾ ಕಡಾಕೊಡ | ಕೋ || ೧೫ ||

ಸೇರ ಜ್ವಾಳಾ ನಮ್ಮಲ್ಲಿಲ್ಲಾ ಹೇರ ಜ್ವಾಳಾ ನಮ್ಮಲ್ಲಿಲ್ಲಾ |
ಕೋ || ೧೬ ||

ಅಟ್ಟು ಮಕ್ಕಳ ಕೈಯಾಗ ತುತ್ತ ರೊಟ್ಟಿ ಕೊಡು ಅವ್ವಾ |
ಕೋ || ೧೭ ||

ತುತ್ತ ರೊಟ್ಟಿ ಬೇಡಲಿಕ್ಕ ಬಿಕ್ಕಿಗಾರೆ ಬಂದಿದಿಯಾನ | ಕೋ || ೧೮ ||

ಅಸೂ ಮಕ್ಕಳ ಕರೆದುಕೊಂಡು ಅಳೂತ ಕರೂತ ಮನಿಗಿ ಬಂದ್ಳ |
ಕೋ || ೧೯ ||

ತಾಳಿನಾರಿ ತಗೊಂಡಾಳ ಅಂಗಡೀಗಾರೆ ಹೋಗಿದಾಳ | ಕೋ || ೨೦ ||

ಅದ್ದನಕ್ಕಿ ಕೊಡಿರೆಪ್ಪಾ ದುಡ್ಡಿನಿಸಾ ಕೊಡಿರೆಪ್ಪಾ | ಕೋ || ೨೧ ||

ಅದ್ದನಕ್ಕಿ ಯಾರಿಗವ್ವಾ ದುಡ್ಡಿನಿಸಾ ಯಾರಿಗವ್ವಾ | ಕೋ || ೨೨ ||

ಅದ್ದನಕ್ಕಿ ಮಕ್ಕಳಿಗೆಪ್ಪಾ ದುಡ್ಡಿನಿಸಾ ಹೆಗ್ಗಣಿಗೆಪ್ಪಾ | ಕೋ || ೨೩ ||

ಅದ್ದನಕ್ಕಿ ತಕ್ಕೊಂಡಾಳ ಮನಿಗಾರೆ ಬಂದೀದಾಳ | ಕೋ || ೨೪ ||

ಕುದುಕುದು ಬಾನಿಸಾಗ ಮಡ್ಡಿ ಸನಿಸಾ ಸುರುವೀದಾಳ | ಕೋ || ೨೫
ನೀಲವ್ವ ನಿಂಬೆವ್ವ ಒಂದೇ ಎಡಿ ಮಾಡಿದಾಳ | ಕೋ || ೨೬
ಗಂಗವ್ವ ಗೌರವ್ವ ಒಂದೇ ಎಡಿ ಮಾಡಿದಾಳ | ಕೋ || ೨೭
ಬೀಮಣಗ ಕಾಮಣಗ ಒಂದೇ ಎಡಿ ಮಾಡಿದಾಳ | ಕೋ || ೨೮
ರಾಮಣ್ಣಾ ಲಕ್ಷ್ಮೀಮಣಗ ಒಂದೇ ಎಡಿ ಮಾಡಿದಾಳ | ಕೋ || ೨೯ |
ಗಂಡ ಹೆಂಡರ ನಡುವ ಒಂದೇ ಎಡಿ ಮಾಡಿದಾಳ | ಕೋ || ೩೦ |
ನೀಲವ್ವ ನಿಂಬೆವ್ವ ತನ್ನ ಬಲಕ ಹಾಕಿದಾಳ | ಕೋ || ೩೧ ||
ಗಂಗವ್ವ ಗವರವ್ವ ತನ್ನ ಎಡಕ ಹಾಕಿದಾಳ | ಕೋ || ೩೨ ||
ರಾಮಣಗ ಲಕ್ಷ್ಮಣಗ ಗಂಡನ ಬಲಕ ಹಾಕಿದಾಳ | ಕೋ || ೩೩ ||
ಬೀಮಣಗ ಕಾಮಣಗ ಗಂಡನ ಎಡಕ ಹಾಕಿದಾಳ | ಕೋ || ೩೪ ||
ಗಂಡ ಹೆಂಡರಿಗಿ ನಟ್ಟ ನಡು ಹಾಸಿದಾಳ | ಕೋ || ೩೫ ||

* * * *

ಬಾಗಿಲಿಕ್ಕಲಕ್ಹೋಗಿ ಏಸಂತಾಳ ನೀಲವ್ವಾ | ಕೋ || ೩೬ ||
ಮಾಯದ ನನ್ನ ಅಣ್ಣಾ ಮಲ್ಲಡಕಾರೆ ಹೋಗೀದಾನ | ಕೋ || ೩೭ ||
ದಿಕ್ಕಿಗಿಲ್ಲದ ಬರ ನಮ್ಮ ಮಕ್ಕಳ ಸುತ್ತ ಬಂದಿತ್ತೀನ | ಕೋ || ೩೮ ||
ರಾಜಾಕಿಲ್ಲದ ಬರ ನಮ್ಮ ರಾಯರ ಸುತ್ತ ಬಂದಿತ್ತೀನ | ಕೋ || ೩೯ ||

* * * *

ಏ ಅವ್ವಾ ಏ ಅವ್ವಾ ನೀಲಾನ ಸುದ್ದಿ ಕೇಳೀರೇನ | ಕೋ || ೪೦ ||
ಮೊನ್ನೆಯಾರೆ ಬಂದಿದಳಪ್ಪಾ ನೀರ ಜ್ವಾಳಾ ಬೇಡಿದಳಪ್ಪಾ | ಕೋ || ೪೧ ||
ನೀರ ಜ್ವಾಳಾ ಬೇಡಿದರ ಹೇರ ಜ್ವಾಳಾ ಕೊಡುದಿತ್ತ | ಕೋ || ೪೨ ||
ಮಕ್ಕುವಳಸಗಿತ್ತಿ ಬಡಿವ್ಯಾದರ ಇದ್ದಾಳವ್ವ | ಕೋ || ೪೩ ||
ಹೇರು ಜ್ವಾಳಾ ತೆಗೆದುಕೊಂಡು ತಂಗೀ ಊರಿಗೆ ಹೋಗಿದಾನ | ಕೋ || ೪೪ ||
ನೀರಿಗಿ ಬಂದ ಅವ್ವಗಳಿರ್ಯಾ ನೀಲನ ಸುದ್ದಿ ಕೇಳಿದಿರೇನ | ಕೋ || ೪೫ ||
ಆಕಿ ಸುದ್ದಿ ಕೇಳಿಲ್ಲಪ್ಪಾ ಆಕಿ ಮನಿಗಿ ಹೋಗಿಲ್ಲಪ್ಪಾ | ಕೋ || ೪೬ ||

ಹೇರ ಜ್ವಾಳಾ ತೆಗೆದುಕೊಂಡು ತಂಗಿ ಮನಿಗಿ ಬಂದಿದಾನ। ಕೋ ॥ ೪೭ ॥
ಹೊತ್ತು ಹೊಂಟು ಇಟ್ಟೊತ್ತಾಯ್ತು ತಂಗಿ ಸುಳಿವ ಕಾಣಲಿಲ್ಲ।
ಕೋ ॥ ೪೮ ॥
ಬೆಳಽಗನಾಗಿ ಇಟ್ಟೊತ್ತಾಯ್ತು ಬೀಗನ ಸುಳುವ ಕಾಣಲಿಲ್ಲ।
ಕೋ ॥ ೪೯ ॥
ಬಿಸಽಲ ಬಿದ್ದು ಇಟ್ಟೊತ್ತಾಯ್ತು ಮಕ್ಕಳ ಸುದ್ದಿ ಕಾಣಲಿಲ್ಲ।
ಕೋ ॥ ೫೦ ॥
ಬಾಗಿಲ ತೆರಿದು ನೋಡೂತನಾ ಹತ್ತು ಹೇಣಾ ಬಿದ್ದೀದಾವ।
ಕೋ ॥ ೫೧ ॥
ಹತ್ತ್ರ ಗೂಡ ಹನ್ನೊಂದಂತ ಪೇಟಗಟಾರ ಮಾಡಿಕೊಂಡ।
ಕೋ ॥ ೫೨ ॥
ನೀಲವ್ವನ ನಿಂಬೆವ್ವನ ನಿಂಬಿ ಬನದಾಗಿಟ್ಟಿದಾರ। ಕೋ ॥ ೫೩ ॥
ಗಂಗವ್ವನ ಗೌರವ್ವನ ಬಾಳೀ ಬನದಾಗಿಟ್ಟಿದಾರ। ಕೋ ॥ ೫೪ ॥
ರಾಮಣಾಗ ಲಕ್ಷ್ಮೀಮಣಾಗ ತೆಂಗಿನ ಬನದಾಗಿಟ್ಟಿದಾರ। ಕೋ ॥ ೫೫ ॥
ಭೀಮಣಾಗ ಕಾಮಣಾಗ ಪೇರೂ ಬನದಾಗಿಟ್ಟಿದಾರ। ಕೋ ॥ ೫೬ ॥
ಗಂಡಹೆಂಡಽರನೊಯ್ದು ಶಿವನ ಪಾದದಲಿಟ್ಟಿದಾರ। ಕೋ ॥ ೫೭ ॥
ಮಾಯಽದ ಅಣ್ಣನ ಒಯ್ದು ತಂಗೀ ಪಾಪದಲಿಟ್ಟೀದಾರ।
ಕೋ ॥ ೫೮ ॥

ದ್ರೌಪದಿಯ ಹಾಡು

ಕರಿಯಪೂರ ನಗರದಲ್ಲಿ।
ಕಽವರವರು ಪಾಂಽಡವ್ರವರು।
ಧರಿಯ ಮ್ಯಾಲ ಲೆತ್ತನಿಟ್ಟು ಜೂಜನಾಡ್ಯಾರ ॥ ೧ ॥

ಪರಮಪಾಪಿ ಶಕುನಿ ತಾನು ।
ಪಾಶಾದೊಳಗ ಫಕಿರನಾಗಿ ।
ಧರ್ಮರಾಜ ಧರುಣಿ ದ್ರೌಪತಿನ ಸೋತರ ॥ ೨ ॥

ಸೋತನಂತ ದುರ್ಯೋಧನ ।
ಸಂತೋಷದಿಂದ ಕೇಳಿದಾನ ।
ದೂತನ್ನಟ್ಟಿದಾರು ಪೋರು ಬಡುಕ ತರಸ್ಯಾರ ॥ ೩ ॥

ನಿಂಬೆಣ್ಣಂತ ಕೊಂಬೆಣ್ಣಂತ ।
ಆನಿಹಂತ ನಿನ್ನ ನಡಗಿ ।
ಜಾತಮುತ್ತಿನಂಥ ರಂಬಿ ಬಾರ ದ್ರೌಪತಿ ॥ ೪ ॥

ಹೆಚ್ಚು ಕುಂದ್ಯಾನಾಡದಿರು ।
ಹೆರವರ್ಹೆಣ್ಣಾ ನೋಡದಿರು ।
ಹಲ್ಲ ಕಿತ್ತ್ಯಾರ್ಹೈವರವರು ಬ್ಯಾಡೊ ದುಸುವಾಸಾ ॥ ೫ ॥

ಹೆಣ್ಣ ಬಾಲಿ ಐವರಿಗೆ ।
ಹೆಮ್ಮಿಯಾದ ಮಾತನ್ಯಾಕ ।
ಕಣ್ಣ ಚಿವುಟಿ ದುರ್ಯೋಧನ ಸದರಿಗೊಪ್ಪ್ಯಾನ ॥ ೬ ॥

ಹೀನ ದುಸುವಾನ ನಿನ್ನ ।
ರಗತಿನೊಳಗ ನಿಲಿಯ ಹಿಂಡಿ ।
ಕರಳ ತೆಗೆದು ಮಾಲಿಮಾಡಿ ಧರಿಸೇನಂದಳ ॥ ೭ ॥

ಮುದ್ದಿ ಮುಖದ ಮಾನವರಿಗಿ ।
ಮುಂದೆಮಾಡಿ ತಂದೆನಂದ ।
ಇಂದ ನಿಮಗ ಬಿನ್ನವೆಂದು ಕೈಯ ಮುಗಿದರ ॥ ೮ ॥

ವೀರಬೊಬ್ಬಿ ಇಕ್ಕತಾರ ।
ಲಡ್ಡನಾದರು ಕಡವುತಾರ ।
ಆಗ ದ್ರೌಪತಿಯ ಸೀರಿ ಸೆಳೆಯುತಿದ್ದರ ॥ ೯ ॥

ಆಗ ಮಾಡಿದ ಪಾಪ |
ಈಗ ಬಂದು ಒದಗಿತೇನ |
ಕೃಷ್ಣದೇವನ ಪಾದಕ್ಹೋಗಿ ಎರಗಲೇನ ॥ ೧೦ ॥

ಹರಿಯ ಹರಿಯ ಅನ್ನುತಾಳ |
ಹರಿಗೆ ಮೊರೆಯನಿಡುವುತಾಳ |
ಧರಿಯ ಮ್ಯಾಲ ಬಿದ್ದು ದ್ರೌಪತ್ಹೊರಳತಿದ್ದಳ ॥ ೧೧ ॥

ಆಕಾಶ ಬಣ್ಣ ಸೀರಿ |
ಲೋಕದಾಗ ಇಲ್ಲ ಸೀರಿ |
ಸಾಕ್ಷ ಕೊಟ್ಟಂತ ಸೀರಿ ಸಂಪಿಯಲ್ಹೊಂಪದ ॥ ೧೨ ॥

ಹಾದಿ ಇಂಜಾನ ಕಾಯೊ |
ಗಿಡದ ಮಂಜಾನ ಕಾಯೊ |
ಹಿಂಡ ದೈತ್ಯರಾಳುವಂಥ ದೇವ ನೀ ಕಾಯೊ ॥ ೧೩ ॥

‘ದಂಡ ಬಂತವ್ವಾ ದಂಡ’

ದಂಡ ಬಂತವ್ವ ದಂಡ ಸೊಲ್ಲಾಪುರದ ದಂಡ |
ದಂಡ ನೋಡಿ ಬರತ ಹಡದವ್ವಾ | ಕೋಲೆನ್ನ ಕೋಲ ॥

ಹುಟ್ಟಿದ ಮಗಳವ್ವ ಕಟ್ಟಿಕಲ್ಲ ಇಳದಿಲ್ಲ |
ಭ್ಯಾಡ ನನ ಮಗಳ ಹೊರಿಯಾಕ | ಕೋ ॥

ಭ್ಯಾಡ ಭ್ಯಾಡಂದರ ಘಿರಿಘಿರಿ ಹೋಗ್ಯಾಳ |
ಹೋಗಿ ಅಗಸ್ಯಾಗ ನಿಂತಾಳ | ಕೋ ॥
ಧೇರ್ಯಾದ ಮ್ಯಾಲಕಿಯ ಬೆಳಕ | ಕೋ ॥

ಮುಗಿಲಿಲ್ಲ ಮಾಡಿಲ್ಲ ಮಿಂಚ ಗದ್ದರಣಿಲ್ಲ |
ಇದು ಯಾತದ ಬೆಳಕ ಕರಣೀಕ | ಕೋ ||

ಒಬ್ಬರ ಹೋಗಂದ್ರ ಇಬ್ಬರ ಹೋಗಿದಾರ |
ಓಡ್ಹೋಗಿ ಅಕಿನ ಹಿಡದಾರ | ಕೋ ||

ಇಪ್ಪತ್ತು ವರುಷದ ತುಪ್ಪಂಡ ಕೂದಲ |
ನಾರಿ ನಿನಗಾಗಿ ಕಾಯ್ದಿದಾಳೀನ | ಕೋ ||

ಹನ್ನೆರಡು ವರುಷದ ಎಣ್ಣಂಡ ಕೂದಲ |
ಮಿತ್ರಿ ನಿನಗಾಗಿ ಕಾಯ್ದಿದಾಳೀನ | ಕೋ ||

ನಾರಿ ನಿನಗಾಗಿ ಕಾಯ್ದಿದಾಳೀನ ಸೊಲ್ಲಪುರದ |
ದಂಡೀಗಿ ಥಾರಿ ಎರೆದೀದನೇನ | ಕೋ ||

ಅಂಗಳದಾಗಿನ ತನುವ ಶಾವಂತಿಗ್ಹೂವ |
ಹೂ ಬಾಡಿದಾಗೊಮ್ಮೆ ನೆನೆಯವ್ವ | ಕೋ ||

ಕುಂಬಿಯ ಮ್ಯಾಲಿನ ಮಂಡ ಶಾವಂತಿಗ್ಹೂವ |
ಹೂ ಬಾಡಿದಾಗೊಮ್ಮೆ ನೆನೆಯವ್ವ | ಕೋ ||

ನೀಲಗಂಗಾನ ಹಾಡು.

ತಾಯಿ ತಂದಿ ಸತ್ತು ಇಂದಿಗ್ಹನ್ನೆರಡೊ ವರುಷ ||
ಇಂಥ ನಮ ನಿ(ೀ)ಲ-ಗಂಗನ ಭಾವ ಬಂದಾನ | ಸೂಯಿ ||
ಇಂದ ನಿಮ ನಿ(ೀ)ಲ-ಗಂಗನ ಖಳುವಬೇಕವ್ವಾ | ಸೂಯಿ ||

* * * *

ಅಚ್ಚೀ ಬಿಂದಿ ಬಿಡು ಇಚ್ಚಿ ಬಿಂದಿ ಬಿಡು ||
ಬಡುವಿನ ಬಿಂದ್ಯಾನ ಸೀರಿ ಉಟಗ್ವಾ ನಿಲಗಂಗಾ | ಸೂಯಿ ||

ಅಚ್ಚೀ ಭರಣೀ ಬಿಡು ಇಚ್ಚೀ ಭರಣೀ ಬಿಡು ||
ನಡುವಿನ ಭರಣ್ಯಾನ ಪನ್ನಾ ಇಟಗ್ವಾ ನೀಲಗಂಗಾ | ಸೂಯಿ ||
ಎಡಕೊಮ್ಮ ಹೊಳ್ಳವ್ವಾ ಬಲಕೊಮ್ಮ ಹೊಳ್ಳವ್ವಾ ||
ನಿಂತ ಗೆಳದ್ಯಾರಿಗಿ ಹೇಳವ್ವಾ ತಂಗಿ | ಸೂಯಿ ||
ಬಿಸಲ ಒಡೆದರ ಶೆಲ್ಲ್ಯಾ ಮುಸುಕ ಹಾಕಣ್ಣಾ | ಸೂಯಿ ||
ನೀರಡಿಕ್ಯಾದರ ಗಿಂಡಿಲಿ ನೀರ ಕುಡಿನಣ್ಣಾ | ಸೂಯಿ ||

* * * *

ತೆವರಿಂಗ್ಹೋಡಿಯುವ ಕುದುರಿ ತೆಗ್ಗಿಂಗಿ ಹೊಡದಾನ ||
ಮೈಯ ಕೈಯಗಳು ಮುಟ್ಟಲ್ಹೋಗ್ಯಾನ | ಸೂಯಿ ||
ಸಿಟ್ಟೀಲಿ ನೀಲಗಂಗಾ ಮಡವ ಧುಮಕ್ಯಾಳ | ಸೂಯಿ ||

* * * *

ಆ ಊರ ಹಾದೀಲಿ (ಬತ್ತಲ) ಕುದರಿ ಬರತದ ||
ಅಣ್ಣಾ ಸಹದೇವಣ್ಣಾ ಒಬನೇ ಬರತಾನ | ಸೂಯಿ ||
ಮಡದೀ ನೀಲಗಂಗಾನ ಖೂವ ಲಿಲ್ಲೀನ | ಸೂಯಿ ||
ಆ ಊರ ಹಾದೀಲಿ ಏಳ್ಮಂದಿ ಕಳ್ಳರು ||
ಮೈಯ ಕೈಯಗಳು ಮುಟ್ಟಲ್ಹೋಗ್ಯಾರೋ | ಸೂಯಿ ||
ಸಿಟ್ಟೀಲಿ ನೀಲಗಂಗಾ ಮಡವ ಧುಮಕ್ಯಾಳೋ | ಸೂಯಿ ||
ಮೊನ್ನಿನ ರಾತುರಲಿ ನವನವು ಬಿದ್ದಿತೊ ||
ಮುತ್ತಿನ ತೂರಾಯಿಗಿ ಬೆಂಕಿ ಹತ್ತಿತ್ತೊ | ಸೂಯಿ ||
ಇನವು ಸುದ್ದಿಗಳವರಕ್ಕನಗ ಒಯ್ಯೋ | ಸೂಯಿ ||

* * * *

ತಂಗಿ ನೀಲಗಂಗಾ ಏನ ಹೇಳ್ಯಾಳೊ | ಸೂಯಿ ||
ಆ ಊರ ಹಾದೀಲಿ ಏಳ್ಮಂದಿ ಕಳ್ಳರ ||
ಮೈಯ ಕೈಯಗಳು ಮುಟ್ಟಲ್ಹೋಗ್ಯಾರೊ || ಸೂಯಿ ||
ಸಿಟ್ಟೀಲಿ ನೀಲಗಂಗಾ ಮಡವ ಧುಮಕ್ಯಾಳೊ | ಸೂಯಿ ||

ತಾಯ್ತಂದಿ ಸಾಯಾಗ ಐದ್ವರುಸದ ಕೂಸಿದ್ದೆವೆ !
ಖಾರಿಕ ತೇಯ್ದುಣಿಸಿ ಸಲಹಿದನಲ ತಂಗಿ | ಸೂಯಿ ||
ತಾಯ್ತಂದಿ ಸಾಯಾಗ ಏಳ್ವರುಸದ ಕೂಸಿದ್ದಿ ||
ಉಂಬರಪ್ಪಿ ತಿನ್ನಿಸಿ ಸಲಹಿದನಲ ತಂಗಿ | ಸೂಯಿ ||

ಮದುವೆಯ ಹಾಡುಗಳು

ಭಾಟಗೀ ಹಾಡು

ಹೆಣ್ಣ ಬೇಃಡಲಿ ಹ್ಯಾದ್ರಽ ಹೆಣ್ಣೇಃಸು ಮಾಡತಿರಲಿ ।
ಹೆಣ್ಯಾಲಾ ಬಾನಾಽ ಉಣತಿರಲೆ ।
ಹೆಣ್ಯಾಲಾ ಬಾನಾ ಉಣತಿರಲಿ । ಹೆಣ್ಣನ ತಾಯಿ ।
ಉಮ್ಮಾಕ್ರಯದ ನಗಿಯ ನಗತಿರಲೆ ॥ ೧ ॥

ಕೂಸ ಬೇಃಡಲಿ ಹ್ಯಾದ್ರಽ ಕೂಸೇಃಸು ಮಾಡತಿರಲಿ ।
ಕೂಸ್ಯಾಲು ಬಾನಾಽ ಉಣತಿರಲೆ ।
ಕೂಸ್ಯಾಲು ಬಾನಾ ಉಣತಿರಲೆ । ಕೂಸಿನ ತಾಯಿ ।
ಕುಸಮಾಯದ ನಗಿಯ ನಗತಿರಲೆ ॥ ೨ ॥

* * * *

ಗ್ಯಾಡಿಯ ನೀಃ ತೆಳಗಽ ಜೋಃಡ ಮಾವಿನ ಮರನ ।
ತಟ್ಟಂದರ ತೆಳಗಽ ತುದಿಯೆಲಿಯ ।
ತಟ್ಟಂದರ ತೆಳಗಽ ತುದಿಯೆಲಿ । ಪಕ್ಕಸಿ ಕುಃತು ।
ದೊಡ್ಡವರಿಗೊಚನಾ ಕೊಡತಾವ ॥ ೩ ॥

* * * *

ಪಟ್ಟ ಪಡಸಲಿಗ್ಯಾಗಽ ದೊಡ್ಡಪ್ಪ ತಾ ಕುಂತು ।
ಮಡದೀಃನ ಕರೆದು ಬೆಸಗೊಂಡಾ ।
ಮಡದೀಃನ ಕರೆದು ಬೆಸಗೊಂಡು । ಕೇಃಳ್ಯಾರ ।
ಕೊಡವೂನೆನವಂಗೆ ಮಗಳನ್ನ ॥ ೪ ॥

ವರಸುದ್ದನಿದ್ದರ ಕುಲ ಚೊಕ್ಕನಿದ್ದರ ।
ಫಣಿ ನಾಲಿಗಿ ಸುದ್ದಽ ಮುಕ ಸುದ್ದ ।
ಫಣಿ ನಾಲಿಗಿ ಸುದ್ದಽ ಮುಕ ಸುದ್ದ । ನಿದ್ದರ ।
ಕುಡಹೋಃಗರಿ ನಮ್ಮ ಮಗಳನ್ನ ॥ ೫ ॥

* * *

ಆ ಮನಿ ಅತ್ತಿsಗಿ ಈ ಮನಿ ನಾದಿsನಿ।
ಆಕಳ ಕರ ಸಾಕ್ಷಿ ನೆಗಿಯಾಣಿ।
ಆಕಳ ಕರ ಸಾಕ್ಷಿ ನೆಗಿಯಾಣಿನ। ಕರಕೊಂಡು।
ಬಾಲನ ಭಾಟಿಗ್ಗೆ ಬರಬೇಕ ॥ ೬ ॥

ಶುಕ್ರವಾರ ದಿನ ಸೂರ್ಯ ಉದಯಾದಂಗ।
ಇಂದ ನಮ್ಮ್ಕಿಯ ಉದಿಯಾದ।
ಇಂದ ನಮ್ಮ್ಕಿಯ ಉದಿಯಾದ। ಹಡೆದವ್ವ।
ಶಾಂವಿಗಿ ಸಯಿದಾನಕ ಹದಮಾಡ ॥ ೭ ॥

ಮಂಗಳವಾರ ದಿನ ಚಂದರುದಯಾದಂಗ।
ಇಂದ ನಮ್ಮ್ಕಿಯ ಉದಯಾದ।
ಇಂದ ನಮ್ಮ್ಕಿಯ ಉದಯಾದ। ಹಡೆದವ್ವ।
ಹಪ್ಪಳ ಸೆಂಡಿsಗಿ ಹದಮಾಡ ॥ ೮ ॥

ಕಡಲಿಕಾಳಂಗ ಕಟಪ ಮುತ್ತಿಟ್ಟ್ಯಾನ।
ಹಡದವ್ವ ನೋಡ ಅಳಿಯರಿಗೆ।
ಹಡದವ್ವ ನೋಡ ಅಳಿಯsರ। ಚೆಲುವಿsಕಿ।
ದೊಡ್ಡವರ ತಕ್ಕ ಅಳಿಯsನ ॥ ೯ ॥

ಉದ್ದಿsನ ಬ್ಯಾಳ್ಯಂಗ ತಿದ್ದಿ ಮುತ್ತಿಟ್ಟ್ಯಾನ।
ದೊಡ್ಡವ್ವ ನೋಡ ಅಳಿಯರನ।
ದೊಡ್ಡವ್ವ ನೋಡ ಅಳಿಯsರ। ಚೆಲುವಿsಕಿ।
ದೊಡ್ಡವರ ತಕ್ಕ ಅಳಿಯsನ ॥ ೧೦ ॥

ಒಳಕಲ್ಲ ಪೂಜೇ ಹಾಡು

ಕಲ್ಲ ಪೂಜಿ ಮಾಡಲಕ ನನ್ನಾ್ಯರು ಕರಸ್ಯಾರ।
ನಾಲಮ್ಯಾಳಿಗಿ ಮನಿಯವಳ ॥ ಸುವ್ವಿ ಸುವ್ವಿ ಸುವ್ವಾಲಿ॥ ೧ ॥

ನಾಲಮ್ಯಾಳಿಗಿ ಮನಿಯವಳ ತಂಗೆವ್ವಾ।
ಕಲ್ಲ ಪೂಜಿಸಗಿ ಕರಸ್ಯಾಳ ॥ ಸು.... ॥ ೨ ॥

ಒಳ್ಳ ಪೂಜಿ ಮಾಡಲಿಕ್ಕ ನನ್ನಾ್ಯರು ಕರಸ್ಯಾರ।
ನಾಲ ಮ್ಯಾಳಿಸಗಿ ಮನಿಯವಳ ॥ ಸು ... ॥ ೩ ॥

ನಾಲ ಮ್ಯಾಳಿಸಗಿ ಮನಿಯವಳು ತಂಗೆವ್ವಾ।
ಒಳ್ಳ ಪೂಜಿಸಗಿ ಕರಸ್ಯಾಳ ॥ ಸು.... ॥ ೪ ॥

ಬಲ್ಲಬಲ್ಲವರಿಸಗಿ ಪಲ್ಲಕ್ಕಿ ಕಳವ್ಯಾಳ।
ಪಿಲ್ಲ್ಯಾದಗಾಲ ಮಗಳಿಸಗಿ ॥ ಸು ... ॥ ೫ ॥

ಪಿಲ್ಲ್ಯಾದಗಾಲ ಮಗಳ ಸಂಗಮ್ಮಗ।
ಪಲ್ಲಕ್ಕಿ ಕೊಟ್ಟು ಕರಸ್ಯಾರ ॥ ಸು.... ॥ ೬ ॥

ನೆಂಟನೆಂಟರಿಸಗಿ ಮಂಟಪ್ಪ ಖಳವ್ಯಾರ।
ಮಂಟಿಗಿಗಾಲ ಮಗಳಿಗೆ ॥ ಸು ... ॥ ೭ ॥

ಮಂಟಿಸಗಿಗಾಲ ಮಗಳ ಸಂಗಮ್ಮಗ।
ಒಂಟಿ ಸಿಂಗರಿಸಿ ಖಳವ್ಯಾರ ॥ ಸು.... ॥ ೮ ॥

ಹಂದರ ಮ್ಯಾಲಿನ ಕಣಕಿ ನಂದಿ ಮೆಯ್ದಾವೆಂದು।
ಬಿಚ್ಚಿ ಬಿಳಿ ಎಲಿ ಹೆರವ್ಯಾರ ॥ ಸು.... ॥ ೯ ॥

ಬಿಚ್ಚಿ ಬಿಳಿ ಎಲಿಯ ಹೆರವ್ಯಾರ ತಮ್ಮಸಗ ॥
ಅಪ್ಪ ಮಾಡ್ಯಾನ ಮದುವಿಸಯ ॥ ಸು.... ॥ ೧೦ ॥

ಹೆಂದರ ಮ್ಯಾಲಿನ ಕಣಿಕಿ ನಂದಿ ಮೆಯ್ದ್ಯಾವಂದ ।
ಬಿಚ್ಚಿ ಬಿಳಿಯಸಲಿ ಹರವ್ಯಾರ ಸು.... ॥ ೧೧ ॥

ಬಿಚ್ಚಿ ಬಿಳಿಯಸಲಿ ಹರವ್ಯಾರ ತಮ್ಮಸಗ ।
ಅಣ್ಣ ಮಾಡ್ಯಾನ ಮದುವಿಸಯ ॥ ಸು.... ॥ ೧೨ ॥

ಅರಿಷಿಣ ಹಚ್ಚೊ ಹಾಡು

(೧)

ದೇವ ದೇವರೆಣ್ಣೊ ಯಾವ ದೇವರೆಣ್ಣೊ ।
ಮನಿಯ ದೇವಸರ ಮೊದಲೆಣ್ಣೊ ।
ಹರಹರ ನಮ ಸಿವಗ ನೆಯ್ಯಿಣೆ ॥ ೧ ॥

ಬಾಲಸಗೆಣ್ಣೊ ಹಚ್ಚೊಟಿಗೆ ಬಾಗಿಲಿಗೆ ಬಿಸಿಲ್ಬಂದ ।
ನಾಲ್ವತ್ತಾವ್ಟಸದ ಎಲಿ ಬಂದ । ಹರಹರ.... ॥ ೨ ॥

ಕಂದಸಗೆಣ್ಣೊ ಹಚ್ಚೊಟಿಗೆ ಅಂಗಳಕ ಬಿಸಿಲ್ಬಂದ ।
ಐವತ್ತಾವ್ಟಸದ ಎಲಿ ಬಂದ । ಹರಹರ.... ॥ ೩ ॥

ನೀರಿಲ್ಲಸದಂಗಳಾಗ ನೀರ್ಯಾಕನಾಗ್ಯಾವ ।
ಊರಿಗಿ ದೊಡ್ಡವರ ಮಗ ಮಿಂದ । ಹರಹರ.... ॥ ೪ ॥

ಕೆಸರಿಲ್ಲದಂಗಳಾಗ ಕೆಸರ್ಯಾಕನಾಗ್ಯಾವ ।
ಹೆಸರಿಗಿ ದೊಡ್ಡವರ ಮಗ ಮಿಂದ । ಹರಹರ.... ॥ ೫ ॥

ಹೆಸರಿಸಗಿ ದೊಡ್ಡವರ ಮಗ ಮಿಂದ ತಮ್ಮಗ ।
ಹಸರ ಪಲ್ಲಕ್ಕಿ ನೆರಳಾಗಿ । ಹರಹರ.... ॥ ೬ ॥

ಅರಿಷಿಣ ಹಚ್ಚೋ ಹಾಡು

(೨)

ಹಂಚಗೂಣಿ ಬೆಂಚಗೂಣಿ ಮುತ್ತಿನ ನಾಗುರಣಿ
ಕುಸಮಲ್ಲಿ ಭೂದೇಃವಿಗೆ ॥
ಮುತ್ತಿನ ಬಟ್ಟೆಟ್ಟು ಮುತ್ತೈದೆರೆಲ್ಲಾ
ಎಣ್ಣೆ ಹಚ್ಚಾನು ಬನ್ನಿಽರೆ ॥ ೧ ॥

ಗಂಜಿಽಯ ಸೀಃರ್ಯುಟ್ಟು ಗಂದಽದ ಬಟ್ಟೆಟ್ಟು
ಪಿಲ್ಲೆ ಕಾಲುಂಗರಿಟ್ಟಽ ॥
ಮುಡಿಸಣ್ಣ ಮುತ್ತಿಽನ ಸತ್ತನಿಟ್ಟವರೆಲ್ಲ
ಎಣ್ಣೆ ಹಚ್ಚಾನು ಬನ್ನಿಽರೆ ॥ ೨ ॥

ಚಿಕ್ಕಽಯ ಸಿಂರ್ಯುಟ್ಟು ಚಿಲಕಽದ ಬಟ್ಟೆಟ್ಟು
ಮೂಗಿಽಗಿ ಮೂಗತಿಟ್ಟವರ ॥
ಜಾಃಗಿಪಂಡಿಃ ಮುಡಿಯ ಮುತ್ತೈದೇಃರ್ಯಾ
ಎಣ್ಣೆ ಹಚ್ಚಾನು ಬನ್ನಿಽರೆ ॥ ೩ ॥

ಕಂಚೀಃನ ಬಟ್ಲಾಗ ಮಿಂಚೆಣ್ಣೆ ತಕ್ಕೊಂಡು
ಕೆಂಚೆರೊಂದ್ಯೆವರಽ ॥
ಕೆಂಚರೊಂದ್ಯೆವರ ನೆರೆದ ಮುತ್ತೈದೇಃರ್ಯಾ
ಎಣ್ಣೆ ಹಚ್ಚಾನು ಬನ್ನಿಽರೆ ॥ ೪ ॥

ಬೆಳ್ಳಿಽಯಃ ಬಟ್ಲಾಗ ಎಳ್ಳೆಣ್ಣೆ ತಕ್ಕೊಂಡು
ನಲ್ಲೆರೊಂದ್ಯೆವರಽ ॥
ನಲ್ಲೆರೊಂದ್ಯೆವರ ನೆರೆದ ಮುತ್ತೈದೇಃರ್ಯಾ
ಎಣ್ಣೆ ಹಚ್ಚಾನು ಬನ್ನಿಽರೆ ॥ ೫ ॥

ಹೆವಳಸರ ಬವಳಸರ ಮ್ಯಾಲ ಮುತ್ತಿನ ಸರ
ತಾಯಿತ ಲ್ಯಾವಳ ||
ತಾಯಿತ ಲ್ಯಾವಳ ತಾಳಿ ಕಟ್ಟಿದವರ‍್ಯಾ
ಎಣ್ಣಿ ಹಚ್ಚಿಸು ಬನ್ನಿರೆ ||೬||

ಐರಾಣಿಯ ಹಾಡು

ಜಾಣ ಕುಂಬಾರನ ಮನಿ ಯಾವ ಕಡಿಗದ |
ಕಪ್ಪುರದ ತಿಪ್ಪಿ ಎಡ ಬಲ | ಸೋ ||೧||

ಕಪ್ಪ-ಉರದ ತಿಪ್ಪಿ ಎಡ ಬಲ ಮಾಡಿಕೊಂಡು |
ಜಾಣ ಕುಂಬಾರನ ಮನಿಗ್ಹೋದ | ಸೋ ||೨||

ಮುಂಜಾಳಿ ಕುಂಬಾರಣ್ಣಾ ಮಸರ ಬೋಸುಂಡಾನ |
ಹಾರ‍್ಯಾರಿ ಕೆಸರ ತುಳದಾನ | ಸೋ ||೩||

ಹಾರಿ ಹಾರೀ ಕೆಸರ ತುಳದು ತಾ ಮಾಡ್ಯಾನ |
ಸಾರ‍್ಯಾರ ಹುರುವ ಒಂದೈಯರಾಣಿ | ಸೋ ||೪||

ಕಡಗದ ಕೈಯಕ್ಕಿ ಕೊಡವಿ ಕುಂಬಾರವ್ವ |
ಕೊಡದ ಮ್ಯಾಲ್ಯಾನ ಬರದಾಳ | ಸೋ ||೫||

ಕೊಡದನೆ ಮ್ಯಾಲ್ಯಾನ ಬರದಾಳ ನಮ್ಮೂರ |
ಬಾಳಿ ಬನದಾನೊಂದರಗಿಣಿಯ | ಸೋ ||೬||

ಸಂಡಿಗೆ ಕಡಿಯುವ ಹಾಡು

ಶಂಡೀಗಿ ಕಡದಾರಲ್ಲ । ದೊಡ್ಡ ಶರಣ್ಯಾರು ನೆರದಾರಲ್ಲ ।
ಒಡ್ಡಿ ಬಾಜೆಂತ್ರೀಲಿ ಪುರವಂತನಾಡಸ್ತ ಏಸೀರಿಲ್ಬೊಂಟಾರಲ್ಲ ॥ ೧ ॥

ಹಡದೀಯ ಹಾಸ್ಯಾರಲ್ಲ । ವ್ಯಾಲ ಮದುಮಕ್ಕಳ ನಡಿಸ್ಯಾರಲ್ಲ ।
ಖನ್ನಿ ಪಾರ್ವತಿದೇವಿಗಿ ಎಣ್ಣಿ ಪತ್ತಸಲುಡಿಸಿ ಸೋಬಾನ ಪಾಡ್ಯಾರಲ್ಲ ॥ ೨ ॥

ಗಡಗಡ ಗದ್ದವುರುಸ್ತ । ನಮ ಶಿವಗ ಬಿದರೀನ ಮಳಿ ಆದಾವ ।
ಬರುವ ಅಬ್ಬರಣಿ ತೆಳಗ ಸರುವರಿಗಿ ಗಿರಿರಾಜಾ ಸರುವೆಲ್ಲ
ನನಗೆಂದಾನ ॥ ೩ ॥

ಗಡಗಡ ಗದ್ದವುರಸ್ತ । ನಮ ಶಿವಗ ಬಿದರೀನ ಮಳಿ ಆದಾವ ।
ಆಡೀದ ವಾಕ್ಯಕ ಮದವಿ ಸಮುರಮದಿಂದ ಬೀಡೀಕಿ
ಮನಿ ಕೊಟ್ಟಾರ ॥ ೪ ॥

ನೂಲು ಸುತ್ತುವ ಹಾಡು

ಸಣ್ಣ ಖಂಡಿಕ್ಹಿಡಿದು ಕನ್ನಿ ತಾ ಬರತಾಳಽಽ ।
ಚೆನ್ನಮಲ್ಲೈನ ನೆನಽವೂತ ॥
ಚೆನ್ನಮಲ್ಲೈನ ನೆನವೂತೀ ಕಳಸಕಽಽ ।
ಛೆಂದಾಗಿ ನೂಲಾ ತೊಡಽಽಸವ್ವಾ ॥ ೧ ॥

ಹಸರ ಖೀಡಿಕ್ಹಿಡಿದು ಕುಸುಮಲ್ಲಿ ತಾ ಬರತಾಳಽಽ ।
ಬಸವೇಸುರನಿಂಗನ ನೆನವೂತ ॥

ಬಸವೇಸುರನಿಂಗನ ನೆನವೂತೀ ಕಳಸಾಕss |
ಹಸನಾಗಿ ಸೂಲಾ ತೊಡsssಸವ್ವಾ || ೨ ||

ಆ ನಾಡದ ಬಡಗ್ಯಾ ಮಾಡsಬಲ್ಲದ ಮಣಿಯಃss |
ಮಾಡುತ ಮಾಣಿsಕ ಜಡsದಾರ ||
ಮಾಡುತ ಮಾಣಿsಕ ಜಡಸಿ ತಂದ ಮಣಿಯss |
ಯಾವಲ್ಲಿ ಇಡವೂನ ಹಡದವ್ವಾ || ೩ ||

ಆ ನಾಡದ ಬಡಗ್ಯಾ ಮಾಡsಬಲ್ಲದ ಮಣಿಯss |
ಕೆತ್ತೂತ ಮುತ್ತಾ ಜಡsದಾರ ||
ಕೆತ್ತೂತ ಮುತ್ತಾ ಜಡಸಿ ತಂದಾ ಮಣಿಯss |
ಯಾವಲ್ಲಿ ಇಡವೂನ ಹಡದವ್ವಾ || ೪ ||

ಅಲ್ಲಂಬ್ಯರಿವ್ಯಾಗ ಗಿಲ್ಲಂಬು ಮಗಿನ್ಹಾಕಿ |
ನಿಲ್ಲದಲೆ ನೀರ ಬೆರsಸ್ಯಾರ ||
ನಿಲ್ಲದಲೆ ನೀರ ಬೆರಸ್ಯಾರ ತಂಗೆವನss |
ಫಿಲ್ಲ್ಯಾದ ಕಾಲ ಕೆಸರಾಗೆ || ೫ ||

ಅಡಿಕೆ ಆಡುವ ಹಾಡು

ಐದು ಅಕ್ಷರದಿಂದ ತೆಯದು ಗಂಧಾsದಿಂದ |
ಮಲ್ಲಿಗ್ಹೂವಿನs ಕ್ರಮsದಿಂದ ||
ಮಲ್ಲಿಗ್ಹೂವಿsನ ಕ್ರಮದಿಂದ ತಂಗೆವು ತನ್ನ |
ರಾಯರ ಶ್ರೀಪಾದಾs ತೊಳsದಾಳ || ೧ ||

ರಾಯರ ಮಗಳ ಬಂsದು ಪಾದಪೂಜೆ ಮಾಡಟಗೆ |
ಪಾದಲಿ ಕಂಡಾಳs ಪದಮವ ||

ಪಾದಲಿ ಕಂಡಾಳ ಪದುಮದ ರಾಯರ ನಿಂಗ ।
ಆನಿ ಏರಂಥಾಸ ಬಲs ಬಂದ ॥ ೨ ॥

ಶಿಟ್ಟಿವರ ಮಗಳ ಬಂದು ಬಟ್ಟ್ವ ಪೂಜಿ ಮಾಡಟಿಗೆ ।
ಬಟ್ಟಲಿ ಕಂಡಾಳ ಪದುಮವ ॥
ಬಟ್ಟಲಿ ಕಂಡಾಳ ಪದುಮದ ರಾಯರ ನಿಂಗ ।
ಮಂಚ ಏರಂಥಾಸ ಬಲs ಬಂದ ॥ ೩ ॥

*　　*　　*　　*

ಹತ್ತೂರ ರಾಜ್ಯ ನಿಮ್ಮಪ್ಪ ಆಳಿದರೇನ ।
ಒಂಕಿಗಿ ನಮ ಕಾಲs ತೊಳsದೆಲ್ಲ ॥
ಒಂಕಿಗಿ ನಿಮ ಕಾಲ ನಾವ್ಯಾಕ ತೊಳಿಯುನು ಧೊರಿಯ ।
ಪ್ರೇಮ ಬಲ್ಲವರs ಗುಣಕಾಗಿ ॥ ೪ ॥

ಎಂಟೂರ ರಾಜ್ಯ ನಿಮ್ಮಣ್ಣ ಆಳಿದರೇನ ।
ಸರಗಿಗಿ ನಮ ಕಾಲs ತೊಳsದೆಲ್ಲ ॥
ಸರಗಿಗಿ ನಿಮ ಕಾಲ ನಾವ್ಯಾಕ ತೊಳಿಯುನು ಧೊರಿಯ ।
ಚಿತ್ತ ಬಲ್ಲವರs ಗುಣsಕಾಗಿ ॥ ೫ ॥

ಆರೂರ ರಾಜ್ಯ ನಿಮ ತಮ್ಮ ಆಳಿದರೇನ ।
ನತ್ತಿಗಿ ನಮ ಕಾಲs ತೊಳsದೆಲ್ಲ ॥
ನತ್ತಿಗಿ ನಿಮ ಕಾಲ ನಾವ್ಯಾಕ ತೊಳಿಯುನು ಧೊರಿಯೆ ।
ಮುತ್ತೈದಿತನs ಪಡsದೇವ ॥ ೬ ॥

*　　*　　*　　*

ಬಾಳಿಯ ಕಾಯಾಂಗ ಬಾಗಿ ಬಂದಳ ಬಾಲಿ ।
ಭಾಗ ಕೊಡ ರಾಯಾs ಎಡsದಲ್ಲಿ ॥
ಭಾಗ ಕೊಡು ರಾಯ ಎಡದಲಿ ಸಾವಿರದ ।
ಮಾಣಿಕ್ಯೇರವರs ಮಗsಳೀಗಿ ॥ ೭ ॥

ನಿಃಂಬಿ ಕಾಯ್ಯಾಽಃಗ ತುಃಂಬಿ ಬಂದಳ ಬಾಲಿ |
ಇಃಂಬ ಕೊಡು ರಾಯಾಽ ಎಡಽದಲ್ಲಿ ||
ಇಃಂಬ ಕೊಡು ರಃಽಯು ಎಡದಲ್ಲಿ ಸಾವಿರದ |
ಒಜ್ಜಿರ್ಬ್ಯೀರವರಽ ಮಗಽಳಿಂಗಿ || ೮ ||

* * * *

ರಾಜರಾಜರು ಕೂಽಡಿ ರಾಜೆಲ್ಲ ಹುಡುಕಿದರ |
ಮತ್ತೆಲ್ಲ ತಃಂದ್ಯೋಽ ಚೆಲಽವೀಂನ ||
ಮತ್ತೆಲ್ಲಿ ತಂದ್ಯೋಃ ಚೆಲವೀಃನ ಹಲಸಃಂಗಿ |
ಆಗರವಾಗಿತ್ತ್ಯೋಂದರಽಗಿಣಿಯ || ೯ ||

ಶೆಟ್ಟ್ಯ ಶೆಟ್ಟ್ಯರು ಕೂಽಡಿ ದಿಕ್ಕೆಲ್ಲಾ ಹುಡುಕಿದರ |
ಮತ್ತೆಲ್ಲ ತಃಂದ್ಯೋಽ ಚೆಲಽವಿನ ||
ಮತ್ತೆಲ್ಲಿ ತಂದ್ಯೋ ಚೆಲವೀಃನ ಹಲಸಃಂಗಿ |
ಜಾಳಿ ಬನದಾಸೂಃದರಽಗಿಣಿಯ || ೧೦ ||

ಭೂಮದ ಹಾಡು

ಹಂದವೂರದಾಗ ಛಂದಽ ಛಂದಮೊಲಿ ಹೂಡಿ |
ಗಂದದ ಚೆಕ್ಕಿ ಪುಟೂ ಮಾಡಿ | ಸೋಃ ||
ನಂದೀ ಮನಾರಿ ಸೋಃ || ೧ ||

ಗಂಧುವದ ಚೆಕ್ಕಿ ಪುಡಿಮಾಡಿ ಮದುಮಗನ |
ಅಕ್ಕ ಮಾಡ್ಯಾಳೊಂದಡಽಗೀಯ | ಸೋಃ ||
ನಂದೀ ಮನಾರಿ ಸೋಃ || ೨ ||

ಹೇಂದವ್ರೂರದಾಗ ಥಂದs ಥಂದದೊಲಿ ಹೊಡಿ |
ಕಪ್ಪೂರದ ಚಿಕ್ಕಿ ಪುಟಮಾಡಿ | ಸೋ ||
ನಂದೀ ಮನಾರಿ ಸೋ || ೩ ||

ಕಪ್ಪೂವ್ರರದ ಚಿಕ್ಕಿ ಪುಟಮಾಡಿ ಮದುಮಗನ |
ತಾಯಿ ಮಾಡ್ಯಾಳೊಂದಡsಗೀಯ | ಸೋ ||
ನಂದೀ ಮನಾರಿ ಸೋ || ೪ ||

ಹಸನುಳ್ಳ ಕಣಕೀಗಿ ಬಿಸಿನೀರ ಥಳಿಕೊಟ್ಟು |
ಎಸಳ ಯಾಲಕ್ಕೀ ಪುಡೀ ಬೆಲ್ಲs | ಸೋ ||
ನಂದೀ ಮನಾರಿ ಸೋ || ೫ ||

ಎಸಳ ಯಾಲಕ್ಕಿ ಪುಡಿ ಬೆಲ್ಲs ಥಿಜ್ಜಕದ |
ಬಿಸಿ ಹೋಳ್ಗಿ ಭೂಮಾಕ ಬರsಬೇಕ | ಸೋ ||
ನಂದೀ ಮನಾರಿ ಸೋ || ೬ ||

ಸಣ್ಣುಳ್ಳ ಕಣಕೀಗಿ ಧಣ್ಣೀರಾ ಥಳಿಕೊಟ್ಟು |
ಸಣ್ಣ ಯಾಲಕ್ಕೀ ಪುಡೀ ಬೆಲ್ಲs | ಸೋ ||
ನಂದೀ ಮನಾರಿ ಸೋ || ೭ ||

ಸಣ್ಣ ಯಾಲಕ್ಕಿ ಪುಡಿ ಬೆಲ್ಲs ಹುರಣದ |
ಎಣ್ಣೋಳ್ಗಿ ಭೂಮಾಕ ಬರsಬೇಕ | ಸೋ ||
ನಂದೀ ಮನಾರಿ ಸೋ || ೮ ||

ಹೊತ್ತsಕ ಕರಕsಕ ಕೆಚ್ಚೆಗ್ಗಳಾದಾsವ |
ಹತ್ತು ಮಾಸsದ ಪರsಡೀಯ | ಸೋ ||
ನಂದೀ ಮನಾರಿ ಸೋ || ೯ ||

ಹತ್ತು ಮಾಸsದ ಪರಡೀಯ ಪಾಯಸಾ |
ಮತ್ತೊಬ್ಬ ಜಾಣಿ ಎಡೀ ಮಾಡs | ಸೋ ||
ನಂದೀ ಮನಾರಿ ಸೋ || ೧೦ ||

ಮುತ್ತೊಬ್ಬ ಜಾಣಿ ಎಡಿ ಮಾಡಽ ತಂಗೆವ್ವಾ |
ಮುತ್ತಿನ ಕಂಕಽಣ ತಿರಽವೂತ | ಸೋಃ ||
ನಂದೀಃ ಮನಾರಿ ಸೋಃ || ೧೧ ||

ಆರಾಕ ತೂರಾಕ ನೀಃರೆಗ್ಗಳಾದಾವಽ |
ಆರ ಮಾನದಽ ಪರಡೀಃಯ | ಸೋಃ ||
ನಂದೀಃ ಮನಾರಿ ಸೋಃ || ೧೨ ||

ಆರ ಮಾನದಽ ಪರಡೀಃಯ ಪಾಯಸ |
ಮ್ಯಾಲೊಬ್ಬ ಜಾಣಿ ಎಡೀಃ ಮಾಡಽ | ಸೋಃ ||
ನಂದೀಃ ಮನಾರಿ ಸೋಃ || ೧೩ ||

ಮ್ಯಾಲೊಬ್ಬ ಜಾಣೀಃ ಎಡಿ ಮಾಡಽ ತಃಗೆವ್ವಾ |
ಹವಳದ ಕಂಕಣಾ ತಿರವೂತ ಸೋಃ ||
ನಃದೀಃ ಮನಾರಿ ಸೋಃ || ೧೪ ||

ಮದುಮಗನ ಭೂಮಾಕಽ ಮತ್ತ್ಯಾನು ಬರಬೇಃಕ |
ಇಪ್ಪತ್ತೊಂದಡಕೀಃ ಬಿಳೀಃ ಎಲಿಯ | ಸೋಃ ||
ನಂದೀಃ ಮನಾರಿ ಸೋಃ || ೧೫ ||

ಇಪ್ಪಂತ್ತೊಃಡಕಿ ಬಿಳಿಯೆಲಿ ಕುಬಸಿನ ಗಳಿಗಿ |
ಬಾಲನ ಭೂಮಾಕ ಬರಽಬೇಃಕಽ | ಸೋಃ ||
ನಃದೀಃ ಮನಾರಿ ಸೋಃ || ೧೬ ||

ಬನದಾಗ ಬಿತ್ತೂದು ಬನದಾಗ ಬೆಳಿಯೂದು |
ಬನದಾಗ ಚಾಲೀಃ ಎರಽಗೂದುಽ ಸೋಃ ||
ನಃದೀಃ ಮನಾರಿ ಸೋಃ || ೧೭ ||

ಬನದಾಗ ಚಾಲಿ ಎರಗೂವ ಬಿದುರೀಃನ |
ಬುಟ್ಟಿ ಭೂಮಾಕಽ ಬರಽಬೇಃಕಽ | ಸೋಃ ||
ನಂದೀಃ ಮನಾರಿ ಸೋಃ || ೧೮ ||

ಹಾಳಾಗ ಬಿತ್ತೂದು ಹಾಳಾಗ ಬೆಳವೂದು |
ಹಾಳಾಗಿಂಬಾಗಿ ಇರುವೂದ | ಸೋ ||
ನಂದೀ ಮನಾರಿ ಸೋ || ೧೯ ||

ಹಾಳಾಗಿಂಬಾಗಿ ಇರವೂವ ನಿಂಬೀಯ |
ಹೋಳ ಭೂಪಾಕ ಬರುಬೇಕ | ಸೋ ||
ನಂದೀ ಮನಾರಿ ಸೋ || ೨೦ ||

ಮಡ್ಡ್ಯಾಗ ಬಿತ್ತೂದು ಮಡ್ಡ್ಯಾಗ ಬೆಳವೂದು |
ತಂದರ ಮನಿಗಿ ಬರುವೂದ | ಸೋ ||
ನಂದೀ ಮನಾರಿ ಸೋ || ೨೧ ||

ತಂದೂವರ ಮನಿಗಿ ಬರುವ ಮುಕಣೀಯ |
ಹಪ್ಪಳ ಭೂಪಾಕ ಬರುಬೇಕ | ಸೋ ||
ನಂದೀ ಮನಾರಿ ಸೋ || ೨೨ ||

ಎರಿಯಾಗ ಬಿತ್ತೂದು ಎರಿಯಾಗ ಬೆಳವೂದು |
ತಂದರ ಮನೀಗೀ ಬರುವೂದ | ಸೋ ||
ನಂದೀ ಮನಾರಿ ಸೋ || ೨೩ ||

ತಂದೂವರ ಮನಿಗಿ ಬರವೂವ ಕಡಲೀಯ |
ಶಂಡಿಗಿ ಭೂಮಾಕ ಬರುಬೇಕ | ಸೋ ||
ನಂದೀ ಮನಾರಿ ಸೋ || ೨೪ ||

ಮೆಂತಿಖಿಡ್ಡೀ ಹಾಕಿ ಅತ್ತೀ ತುಪ್ಪವ ಕಾಸ |
ಇಪ್ಪತ್ತೊಂದೋಂಣೀ ಎಸೆದಾವ | ಸೋ ||
ನಂದೀ ಮನಾರಿ ಸೋ || ೨೫ ||

ಇಪ್ಪತ್ತೊಂದೋಂಣಿ ಎಸೆದಾವ ಈ ತುಪ್ಪಾ |
ಬಾಲನ ಭೂಪಾಕ ಬರಬೇಕ | ಸೋ ||
ನಂದೀ ಮನಾರಿ ಸೋ || ೨೬ ||

ಶಾವೀಗಿ ಸೈದಾನ ಹಾವಿನುಪ್ಪಿನಕಾಯಿ |
ಮ್ಯಾಲ ಕುರಡೀಯs ಇಡಪ್ರಾಸದ | ಸೋ ||
ಸಂದೀ ಮಸಾರಿ ಸೋ || ೨೭ ||

ಮದುಮಗನ ಭೂಮಾಕ ಮತ್ತ್ಯಾರು ಬರಬೇಕ |
ಅಪ್ಪಾದಾಗಪ್ಪಾ ಹಿರೀಯಪ್ಪಾ | ಸೋ ||
ಸಂದೀ ಮಸಾರಿ ಸೋ || ೨೮ ||

ಅಪ್ಪಾದಾಗಪ್ಪಾ ಹಿರಿಯಪ್ಪಾ ತಾ ಬಂದು |
ಮುಚ್ಚಿಟ್ಟ ಭೂಮಾ ತೆರುವ್ಯಾನ | ಸೋ ||
ಸಂದೀ ಮಸಾರಿ ಸೋ || ೨೯ ||

ಮದುಮಗನ ಭೂಮಾಕ ಮತ್ತ್ಯಾರು ಬರಬೇಕ |
ಅಣ್ಣಾದಾಗಣ್ಣಾ ಹಿರಿಯಣ್ಣಾ | ಸೋ |
ಸಂದೀ ಮಸಾರಿ ಸೋ || ೩೦ ||

ಅಣ್ಣಾದಾಗಣ್ಣಾ ಹಿರಿಯಣ್ಣಾ ತಾ ಬಂದು |
ಹೊನ್ನಿಟ್ಟ ಭೂಮಾ ತೆರುವ್ಯಾನ | ಸೋ ||
ಸಂದೀ ಮಸಾರಿ ಸೋ || ೩೧ ||

ಮದುಮಗನ ಭೂಮಾಕ ಮತ್ತ್ಯಾರು ಬರಬೇಕ |
ಅವ್ವಾದಾಗವ್ವಾ ಹಿರೀಯವ್ವಾ | ಸೋ ||
ಸಂದೀ ಮಸಾರಿ ಸೋ || ೩೨ ||

ಅವ್ವಾದಾಗ ಅವ್ವಾ ಹಿರಿಯವ್ವಾ ತಾ ಬಂದು |
ಉಂಗ್ರಿಟ್ಟ ಭೂಮಾ ತೆರನ್ಯಾಳ | ಸೋ ||
ಸಂದೀ ಮಸಾರಿ ಸೋ || ೩೩ ||

ಯಾವಣ್ಣಾ ಸೋತಾನ ಯಾವಣ್ಣಾ ಗೆದ್ದಾನ |
ಯಾವಣ್ಣಾ ನೀರಾ ಮುಗಿದಾನ | ಸೋ ||
ಸಂದೀ ಮಸಾರಿ ಸೋ || ೩೪ ||

ಭೀಮಣ್ಣ ಸೋತಾನ ಕಾಮಣ್ಣ ಗೆದ್ದಾನ।
ನಮ್ಮಣ್ಣ ನೀರ ಮುಗಸದಾನ। ಸೋ॥
ಸಂದೀ ಮನಾರಿ ಸೋ ॥ ೩೫ ॥

ಬೀಗರ ಹಾಡು

ಸರಕ್ಕ ಸರಿತಲ್ಲಿ ಬೀಗರ ಸುರಪ್ಪ ತಿಳಿತಲ್ಲಿ ॥ ಪ ॥

ಆನೀ ಬರತಾವಂತ ಆರಸ ಭಣವೀ ಕೊಂಡ।
ಆನೆಲ್ಲಿ ನಿಮ್ಮ ದಳವೆಲ್ಲಿ। ಸರಕ್ಕ ॥ ೧ ॥

ಆನೆಲ್ಲಿ ನಿಮ್ಮ ದಳವೆಲ್ಲಿ ಬೀಗಾ।
ಬೋಳ್ಹೋರಿ ಮ್ಯಾಲ ಬರತಾರ। ಸರಕ್ಕ ॥ ೨ ॥

ಒಂಟೀ ಬರತಾವಂತ ಎಂಟಸ ಭಣವೀ ಕೊಂಡ।
ಒಂಟೆಲ್ಲಿ ನಿಮ್ಮ ದಳವೆಲ್ಲಿ। ಸರಕ್ಕ ॥ ೩ ॥

ಒಂಟೆಲ್ಲಿ ನಿಮ್ಮ ದಳವೆಲ್ಲಿ ಬೀಗಾ।
ಕುಂಟ್ಹೋರಿ ಮ್ಯಾಲ ಬರತಾರ। ಸರಕ್ಕ ॥ ೪ ॥

ಬೀಗೂತೊಳ್ಳಿವಳಂತ ದೇವರಮನಿ ಕೊಟ್ಟ।
ದೇವಸರ ಕದ್ದಾಳ ಬಗಲಾಗ। ಸರಕ್ಕ ॥ ೫ ॥

ಬೀಗೂತೊಳ್ಳಿವಳಂತ ಅಡಗೀಯ ಮನಿ ಕೊಟ್ಟ।
ಹೋಳೀಗಿ ಘಳಿಗಿ ಬಗಲಾಗ। ಸರಕ್ಕ ॥ ೬ ॥

ಹೋಳೀಗಿ ಘಳಿಗಿ ಬಗಲಾಗ ಅವರಣ್ಣಾ।
ನೀಡ್ಲಿಕ್ಕಿಲ್ಲಂದು ಕಸಗೊಂಡ। ಸರಕ್ಕ ॥ ೭ ॥

ಬೀಗೂತೊಳ್ಳೀಕಂತ ಅಡಗೀಯ ಮನಿ ಕೊಟ್ಟ |
ಬಾನಾದ ದುರುಡಿ ಬಗಲಾಗ | ಸರಕ್ಕ || ೮ ||

ಬಾನೂಅದs ದುರುಡಿ ಬಗಲಾಗ ಅವರಣ್ಣಾ |
ನೀಡ್ಲಿಕ್ಕಿಲ್ಲಂತ ಕಸಗೊಂಡ | ಸರಕ್ಕ || ೯ ||

ಎಲ್ಲಾರು ಕಟ್ಟ್ಯಾರ ಮಲ್ಲೀಗ್ಹೂವಿನ ದಂಡಿ |
ಬೀಗೂತಿ ಕಟ್ಟ್ಯಾಳ ಹುಲ್ಹೊರಿಯ | ಸರಕ್ಕ || ೧೦ ||

ಬೀಗೂತಿ ಕಟ್ಟ್ಯಾಳ ಹುಲ್ಹೊರಿ ಅವರಣ್ಣಾ |
ಕುದರೀಗಿಲ್ಲಂದು ಕಸಗೊಂಡ | ಸರಕ್ಕ || ೧೧ ||

ಎಲ್ಲಾರು ಕಟ್ಟ್ಯಾರ ಗುಳ್ಳಬ್ಯಾಳೀ ಮಣಿ |
ಬೀಗೂತಿ ಕಟ್ಟ್ಯಾಳ ಕೈಪಾಳಿ | ಸರಕ್ಕ || ೧೨ ||

ಬೀಗೂತಿ ಕಟ್ಟ್ಯಾಳ ಕೈವಾಳಿ ಅವರಣ್ಣಾ |
ಬಳಸಲಕಿಲ್ಲಂತ ಕಸಗೊಂಡ | ಸರಕ್ಕ || ೧೩ ||

ಒಂದ ಅಡಕೀ ಒಡೆದು ಒಂಬತ್ತು ಮದುವಿ ಮಾಡಿ |
ಇಂದೀನ ಖರ್ಚ ಬಲು ಖರ್ಚ | ಸರಕ್ಕ || ೧೪ ||

ಇಂದೀನ ಖರ್ಚ ಬಲು ಖರ್ಚ ಬೀಗಾ |
ಖಂಬಸದ ತೆಕ್ಕಿ ಬಿಡವಲ್ಲ | ಸರಕ್ಕ || ೧೫ ||

ಒಂದs ಎಲಿs ಹರಿದು ಒಂಬತ್ತು ಮದಿಮಾಡಿ |
ನಿನ್ನೀನ ಖರ್ಚ ಬಲು ಖರ್ಚ | ಸರಕ್ಕ || ೧೬ ||

ನಿನ್ನೀನ ಖರ್ಚ ಬಲು ಖರ್ಚ ಬೀಗಾ |
ಹಂದsರ ತೆಕ್ಕಿ ಬಿಡವಲ್ಲ | ಸರಕ್ಕ || ೧೭ ||

ಹಂದಾವೂರದಾಗ ಮಂದಿ ಬಂದು ಎಟ್ಟೊತ್ತಾಯ್ತು |
ಕಂಬಳಿಲ್ಲೀನ ಇವರಲ್ಲಿ | ಸರಕ್ಕ || ೧೮ ||

ಕಂಬಳಿಲ್ಲೇನ ಇವರಲಿ ಬೀಸುತಿ |
ಕಂಬ್ಳಿಗ್ಹೋಗ್ಯಾಳ ಮನಿ ಮನಿ | ಸರಕ್ಕ ||೧೯||

ಹಂದರಽವಾಗ ಮಂದಿ ಬಂದೆಟ್ಹೊತ್ತಾಯ್ತು |
ಕೂಕಂ ಇಲ್ಲೇನ ಇವರಲ್ಲ | ಸರಕ್ಕ ||೨೦||

ಕೂಕಂ ಇಲ್ಲೇನ ಇವರಲಿ ಬೀಗುತಿ |
ಕೂಕಮ್ಮ್ಗ್ಹೋಗ್ಯಾಳ ಅಂಗಡೀಗಿ | ಸರಕ್ಕ ||೨೧||

ಅಚ್ಚೇಕ ಹೊಲಗೇರಿ ಇಚ್ಚೇಕ ಮಾದರಗೇರಿ |
ನಟ್ಟನಡಬರಕ ಶಿವಪೂಜೆ | ಸರಕ್ಕ ||೨೨||

ನಟ್ಟಽನಡಬರಕ ಶಿವಪೂಜೆ ಆಗಟಿಗೆ |
ನಾಲತ್ತ ನಾಯಿ ಬೊಗಳ್ಯಾವ | ಸರಕ್ಕ ||೨೩||

ಕೂಸು ಒಪ್ಪಿಸುವ ಹಾಡು

ಒಂಭತ್ತು ತಿಂಗಳು ನಿನ್ನ ತುಂಬಿಕೊಂಡು ತಿರುಗೇನs |
ಹಂಬಲಿಸೀ ನಿನ್ನs ಪಡೆದೇನ | ಸೋ ||
ಹಂಬಲಿಸೀ ನಿನ್ನs ಹಡೆದೇನs ಚಿತ್ರದ
ಗೊಂಬಿ ನಿನಗೊಪ್ಪಿಸಿ ಕೊಡಲ್ಹ್ಯಾಂಗ | ಸೋ ||೧||

ಹತ್ತು ತಿಂಗಳು ನಿನ್ನs ಹೊತ್ತುಕೊಂಡು ತಿರುಗೇನs |
ಮುತ್ತುs ಸುರುವಿದರs ಬರಿ ಉಡಿಯs | ಸೋ ||
ಮುತ್ತು ಸುರುವಿದರ ಬರಿ ಉಡಿಯs ನನ ಮಗಳ |
ಅತ್ತೇರಿಗೊಪ್ಪಿಸಿ ಕೊಡಲ್ಹ್ಯಾಂಗs | ಸೋ ||೨||

ಹರಿಯಾಗೆದ್ದವ್ವಗಳು ಹಾಲಾ ಬಾನುಣ್ಣೋಳು |
ತೂಗ ಮಂಚದಲಿ ಮಲಗೂಳ | ಸೋ

ತೂಗ ಮಂಚದಲಿ ಮಲಗೂಳ ನಮ್ಮಗಳು ।
ನಗುನಗುತ ಮನೆಯ ಬೆಳಗೂಳ । ಸೋ ॥ ೩ ॥

ಮುಂಜಾನೆದ್ದಮ್ಮಗಳು ತುಪ್ಪಾ ಬಾನುಣ್ಣೂಳು ।
ಪಟ್ಟೆಮಂಚದಲಿ ಮಲಗೂಳ । ಸೋ ॥
ಪಟ್ಟೆಮಂಚದಲಿ ಮಲಗೂಳ ನಮ್ಮಗಳು ।
ಕಟ್ಟೊತ ಕತೆಯ ಹೇಳೂಳ । ಸೋ ॥ ೪ ॥

ತೊಟ್ಟೀಲ ತೂಗಂದ್ರ ಸಿಟ್ಟೀಲೆ ಕೂಡೂಳಽ ।
ಬಟ್ಟಽಲ ಬೆಳಗಾಕ ಅರಿಯಾಳ । ಸೋ ॥
ಬಟ್ಟಲ ಬೆಳಗಾಕಽ ಅರಿಯಾದ ಮಗಳನ್ನಽ ।
ಕೊಟ್ಟೇನು ಮಾವನ ಕೈಯೊಳಗ । ಸೋ ॥ ೫ ॥

ಮಸರೂ ಅನ್ನಾ ಕಲಸೀ ತುಸುಸಽ ಉಣ್ಣಾಂತ್ಹೇಳಿ ।
ರಾಸೀಯ ಉಣಸೀ ಸಲಹಿಂದೆ । ಸೋ ॥
ರಾಸೀಯ ಉಣಸಿ ಸಲಹಿಂದೆ ನನ ಮಗಳ ।
ಕೂಸಽ ನನ ಮನಿಗೆ ಎರವಾದೆ । ಸೋ ॥ ೬ ॥

ಕುಂಬಳ ಕಾಯೀ ಒಯ್ದು ಕುಡಗೋಲ್ಗೆ ಕೊಟ್ಟಂಗೆ ।
ಇಂದ ನಮ್ಮಗಳ ಕೊಡತೀವ । ಸೋ
ಇಂದ ನಮ್ಮಗಳ ಕೊಡತೀವ ಪಾರ್ವಽತಿ ।
ಕಂದನ ಸರಿಮಾಡಿ ಸಲಹವ್ವಾ । ಸೋ ॥ ೭ ॥

ನಿಂಬೀಯಽನೇ ಹಣ್ಣಾ ನೆಂಬಿ ಗಿಣಿ ಒಯ್ದಾಂಗ ।
ಇಂದ ನಮ್ಮಗಳ ಕೊಡತೀವ । ಸೋ ॥
ಇಂದ ನಮ್ಮಗಳ ಕೊಡತೀವ ಪಾರ್ವಽತಿ ।
ಕಂದನ ಸರಿಮಾಡಿ ಸಲಹವ್ವಾ । ಸೋ ॥ ೮ ॥

ಒಂದರಬಿ ಹಾಸೀದ ಒಂದರಬಿ ಹೊಚ್ಚೀದ ।
ಇಂದರನ ಮಾಡಿ ಸಲಹೀದ । ಸೋ ॥

ಇಂದರನ ಮಾಡಿ ಸಲಹಿ ಸಾಕಿದ ಮಗಳ ।
ಇಂದೀಗಿ ನಮಗ ಎರವಾದ್ಯಾ । ಸೋ ॥ ೯ ॥

ಆರರಬಿ ಹಾಸಿದ್ದೆ ಆರರಬಿ ಹೊಚ್ಚಿದ್ದೆ ।
ಆರೊರಸ ಮಗಳ ಸಲಹೀದ । ಸೋ ॥
ಆರೊರಸ ಮಗಳ ಸಲಹೀದ ಪಾರ್ವತಿ ।
ಇಂದೀಗೆ ನಮಗ ಎರವಾದ್ಯಾ । ಸೋ ॥ ೧೦ ॥

ಎಕ್ಕೀಯ ಗಿಡದಾಗ ಹಕ್ಕೀ ಬೋರ್ಯಾಡಿದಾಂಗs ।
ಅಕ್ಕ ನೀಲವ್ವನ ಬಳಗಾವು । ಸೋ ॥
ಅಕ್ಕs ನೀಲವ್ವನ ಬಳಗsದ ಕಣ್ಣೀರು ।
ಒಕ್ಕುಂದ್ಹೊಳಿಯಾಗೀ ಹರಿದಾವs । ಸೋ ॥ ೧೧ ॥

ಪಣ್ಣೀಯ ಕೊಡಕ ಸಣ್ಣರಿವಿ ಕವಿದ್ಹಾಂಗ ।
ಕನ್ನೆ ಕಂದವ್ವನ ಬಳಗಾದ । ಸೋ ॥
ಕನ್ನೆ ಕಂದವ್ವನ ಬಳಗಾದ ಕಣ್ಣಾನ ನೀರಾ ।
ಸಣ್ಣ ಮುತ್ತಾಗಿ ಸುರಿದಾವ । ಸೋ ॥ ೧೨ ॥

ತುಪ್ಪsದ ಕೊಡಕ ಕಟ್ಟೆರಿವಿ ಕವಿದಾಂಗ ।
ಮಿತ್ರಿ ಕಂದವ್ವನ ಬಳಗಾದ ॥ ಸೋ ॥
ಮಿತ್ರಿ ಕಂದವ್ವನ ಬಳಗಾದ ಕಣ್ಣಾನ ನೀರಾ ।
ಉತ್ರಿ ಮಳಿಯಾಗಿ ಸುರಿದಾವ ॥ ಸೋ ॥ ೧೩ ॥

ಕಣಗೀಲ ಗಿಡದಾಗ ಗಿಣಿ ಹಿಂಡು ಕುಂತಾಂಗs ।
ಸಣ್ಣ ನೀಲವ್ವನs ಬಳಗಾವು । ಸೋ ॥
ಸಣ್ಣ ನೀಲವ್ವನ ಬಳಗದ ಕಣ್ಣೀರು ।
ಹನ್ನೊಂದ್ಹೊಳಿಯಾಗೀ ಹರಿದಾವ ॥ ಸೋ ॥ ೧೪ ॥

ಕಪ್ಪುರ ಗುಡ್ಡಕ ಬೆಂಕಿs ತಪ್ಪದಲೇ ಕೊಟ್ಹಾಂಗವ- ।
ರಪ್ಪನ ಹೊಟ್ಟಿ ತಳಮಳಿಸಿ । ಸೋ ॥

ಅಪ್ಪನ ಹೊಟ್ಟಿs ತಳಮಳಿಸಿ ಮಗಳ ನಿನ್ನ ।
ಒಪ್ಪೀಸಿ ನಾವು ಕೊಡತೇವ ॥ ಸೋ ॥ ೧೫ ॥

ಸುಡುವ ಬೆಂಕಿಗೆ ಎಣ್ಣೀ ಕೊಡವ ಸುರುವಿದ್ಹಾಂಗ ।
ಹಡದವ್ವನ್ಹೊಟ್ಟಿ ತಳಮಳಿಸಿ । ಸೋ ॥
ಹಡದವ್ವನ್ಹೊಟ್ಟಿ ತಳಮಳಿಸಿ ಮಗಳೆ ನಿನ್ನಾ ।
ಕೊಡತೇವೊಪ್ಪೀಸಿ ಇವರೀಗಿ ॥ ಸೋ ॥ ೧೬ ॥

ಸುಣ್ಣದ ಭಟ್ಟ್ಯಾಗ ಧಣ್ಣೀರಾ ಹೊಯ್ದ್ಹಾಂಗs ।
ಅಣ್ಣಾನ ಹೊಟ್ಟಿ ಹೊಯ್ದ್ಹಾಡೆ । ಸೋ ॥
ಅಣ್ಣಾನ ಹೊಟ್ಟಿ ಹೊಯ್ದ್ಹಾಡೆ 'ನನ ತಂಗಿ ।
ನನ್ನ ಮನಿಗಿಂದs ಎರವಾದೆ' ॥ ಸೋ ॥ ೧೭ ॥

ಸಣ್ಣs ತಮ್ಮಾಗಿದ್ರ ತಣ್ಣsಗ ಇರತಿದ್ದೆ ।
ಮಾನ್ಯೆದ್ಹೊಲದಾಗs ಸರಿಪಾಲು । ಸೋ ॥
ಮಾನ್ಯೆದ್ಹೊಲದಾಗs ಸರಿಪಾಲು ತಕ್ಕೊಂಡು ।
ಚಿನ್ನಾ ನನ್ನ ಹಂತೇಲಿ ಇರತಿದ್ದೀ ॥ ಸೋ ॥ ೧೮ ॥

ಒಮ್ಮನ ಮದ್ದಿಗೆ ಬೆಂಕಿ ಒಮ್ಮಿಲೇ ಕೊಟ್ಹಾಂಗs ।
ತಮ್ಮನs ಹೊಟ್ಟೀ ತಳಮಳಿಸೆ । ಸೋ ॥
ತಮ್ಮನ ಹೊಟ್ಟೀ ತಳಮಳಿಸೆ 'ಅಕ್ಕಾ ನನಗ ।
ರಮ್ಮೀಸಿ ಹಣ್ಣು ಕೊಡುತಿದ್ದೀ' । ಸೋ ॥ ೧೯ ॥

ಹಿರಿಯ ಅಣ್ಣಾಗಿದ್ರ ಸರಿಯಾಗಿರುsತಿದ್ದೆ ।
ಎರಿಯ ಹೊಲದಾಗs ಸರಿಪಾಲು । ಸೋ ॥
ಎರಿಯ ಹೊಲದಾಗs ಸರಿಪಾಲು ತಕ್ಕೊಂಡು ॥
ಧೊರಿಯೇ ನನ್ಹಂತೇಲಿರತಿದ್ದೀ । ಸೋ ॥ ೨೦ ॥

ಅತ್ತೀನ ಕರಿರೆವ್ವಾ ಅತಿಗೀನ ಕರಿರೆವ್ವಾ ।
ನಾದಿನಿನ ಕರಿರೆವ್ವಾ ಹೊರೀಯಾಕ । ಸೋ ॥

ಸಾದಿನಿನ ಕರಿರೆವ್ವಾ ಹೊರಿಯಾಕ ಅವರೀಗೆ ।
ಪ್ರೀತಿಯ ಮಗಳನ್ನು ಕೊಡರೆವ್ವಾ । ಸೋ ॥ ೨೧ ॥

ನಮ್ಮ ಮಗಳಲ್ಲವ್ವಾ ನಿಮ್ಮ ಮಗಳೀಕೆಂದು ।
ಛಂದಾಗಿ ಮಗಳನ್ನ ಸಲಹವ್ವಾ । ಸೋ ॥
ಛಂದಾಗಿ ಮಗಳನ್ನ ಸಲಹವ್ವಾ ಅನ್ನೂತ ।
ಅತ್ತೆನ್ನ ಕಯ್ಯಾಗ ಕೊಡರೆವ್ವಾ । ಸೋ ॥ ೨೨ ॥

ಹೆಣ್ಣವ ನಿಮಗಾಗಿ ಬಣ್ಣವ ನಮಗಾಗಿ ।
ಎಣ್ಣೋಳಿಗಿ ತುಪ್ಪ ನಭೆಗಾಗಿ ॥
ಎಣ್ಣೋಳಿಗಿ ತುಪ್ಪ ನಭೆಯ ಸಾಕ್ಷಿನ ಹೇಳಿ ।
ಇಂದ ನಮ್ಮಗಳ ಕೊಡತೀವ ॥ ೨೩ ॥

ಹಂದರ್ದಂದರ ಸಾಕ್ಷಿ ಹಂದರ ತಳವಲ ಸಾಕ್ಷಿss ।
ಹಂದರದಾಗಿರುವs ದೈವ ಸಾಕ್ಷಿ ॥
ಹಂದರದಾಗಿರುವ ದೈವ ಸಾಕ್ಷಿನ ಹೇಳಿ ।
ಇಂದ ನಮ್ಮಗಳ ಕೊಡತೀವ ॥ ೨೪ ॥

ಎಣ್ಣಿ ನೀಡಲಿ ಬ್ಯಾಡ ನೆತ್ತಿ ಖಸಿಯಲಿ ಬ್ಯಾಡಾs ।
ಅನ್ನಿಗರ ಮಗಳಂದನಬ್ಯಾಡ ॥
ಅನ್ನಿಗರ ಮಗಳೆಂದನಬ್ಯಾಡ ತಂಗೆವ್ವಾ ।
ಬಾಲsನ ಸರಿಯ ಬಗಿಯವ್ವಾ ॥ ೨೫ ॥

ತುಪ್ಪ ನೀಡಲಿ ಬ್ಯಾಡ ನೆತ್ತಿ ಖಸಿಯಲಿ ಬ್ಯಾಡ ।
ಎಂಥವರ ಮಗಳಂತ ಕರಿಬ್ಯಾಡ ॥
ಎಂಥವರ ಮಗಳಂತ ಕರಿಬ್ಯಾಡ ತಂಗೆವ್ವಾss ।
ಪುತ್ರನ ಸರಿಯ ಬಗಿರೆವ್ವಾ ॥ ೨೬ ॥

ಹೆಣ್ಣ ಇವರಿಗಾದ್ಯಾ ಹೊನ್ನs ಇವರಿಗಾದ್ಯಾ ।
ಎಣ್ಣೋಳಿಗಿ ತುಪ್ಪಾ ಜನಕಾದ್ಯಾ । ಸೋ ॥

ಎಣ್ಣೋಳಿಗಿ ತುಪ್ಪಾ ಜನಕಾಗಿ ಗಂಡಿನ ತಂದಿ |
ಸಣ್ಣ ನಗೀ ನಗತಾ ನಡದಾನು || ಸೋ: || ೨೭ ||
ಸಣ್ಣ ನಗೀನಗತಾ ನಡದಾನು ಬಂಕಸಾಧಾ |
ಹೆಣ್ಣೊಲ್ಲ ಇನ್ನ ಜಲಮಾಕು | ಸೋ: || ೨೮ ||

ಸೋಬಾನದ ಹಾಡುಗಳು

" ಮನಸ ಜೈನರ ಮಡದಿ "

ಮನಸಸ ಜೈನರ ಮಡದೀ ಬಾಽ
ಘನಮನಸಿನ ಗಂಬಿರಳ ಬಾಽ
ಘನಮನಸೆಂಬೊ ಗರತ್ಯಾರು ಮೆಚ್ಚಿ
ನೀಲಽ ಬಾಽಽ ನೀಲಽ ಸೀಲಽಽ ಬಾಽಽ
ಸೋಂಗಿನ ಗೊಂಬೆ ನೀ ಬಾರ ಹಸಿಯ ಜಗಽಽಲಿಂಗೇ ಸೋ ॥ ೧ ॥

ಅನಂದರಾಯರ ಇಗತೀ ಬಾ
ಆದಿಪುರುಷರ ಸತಿಯಳು ಬಾ
ಅದರ ಮ್ಯಾಲ ಪೂರ್ವಾ ನೀಮ್ಯಾಲ ಗುರುಳಿ
ಜೂಜ ಬಾಽ ಬಾ ಬಾ ಮೇತ್ರಿ ಬಾಽಽ
ಪುಣ್ಯಫಲ ಮೇತ್ರಿ ನೀ ಬಾರಽ ಹಸಿಯ ಜಗಽಽಲಿಂಗೇ ಸೋ ॥ ೨ ॥

ನಾಗೀಂದ್ರಸರಗಲ್ಲವು ಬಾ
ಅರಗಲ್ಲದ ರೂಪವು ಬಾ
ಹೊಂಯಿತು ಸರ್ವಾ
ಎಡವಲಿ ಕುಳಿತ
ಕಲ್ಪ ಬಾಽ ಬಾ ಬಾ ಫಣಿಯವು ಬಾ
ಸೋಗಿನ ಗೊಂಬೆ ನೀ ಬಾರ ಹಸಿಯ ಜಗಽಽಲೀಗೇ ಸೋ ॥ ೩ ॥

ಮಂದಗಮನೆ ಮೋವನ್ನೇ ಬಾ
ಗಂಧ ಕಸ್ತೂರಿ ಪರಿಮಳ ಬಾ
ನನ್ನಾಣೆ ಬಾಽ ಕಟ್ಟಾಣೆ ಬಾ
ಧನ ಧನಿಯಳು ಬಾಽ
ಕೂಕಮದಾಗಿನ ಭರಣೆ ಬಾರೊಂದ್ಹಸೀ ಜಗಽಽಲೀಗೇ ಸೋ ॥ ೪ ॥

ಮಾಣಿಕದಾಗಿನ ಏಣವ್ರು ಬಾ
ಜೋಡ ಮುತ್ತಿನ ಜಾಣೇ ಬಾ
ಚಂದ್ರನ ಸೊಸಿಯೇ ಬಾ
ಇಂದ್ರನ ಸತಿಯಳು ಬಾ
ಭಂಗರದಾಗಿನ ಭರಣಿ ಬಾರೊಂದ್ಹಸಿಯ ಜಗsಲೀಗೇ ಸೋ || ೫ ||

ಮಂಗಳ ಮಹಿಮನ ರಾಣೀ ಬಾ
ಶೃಂಗಾರದ ಮದ್ದಾನೇ ಬಾ
ಕುಂಬಕುಚಗಳು ಸಲಸಲಿದಾಡುತ
ರಂಬೀ ಬಾ ದೇಶದ ಗೊಂಬಿ ಬಾ
ಅಂಗೈನಿಂಗ ನೀ ಬಾರೇ ಹಸಿಯ ಜಗsಲೀಗೇ ಸೋ || ೬ ||

" ಹಿಂಬಳಿ ಮುಂಬಳಿ "

ಹಿಂಬಳಿ ಮುಂಬಳಿ ಗಂಧದ ಗೀರಾ
ಹೊಂದಿಸಿ ಇಟ್ಟ್ಯಾಳ ಛಂದ ಗಿರಾಕಿ
ಜಾತ ಮಲ್ಲಿಗಿ ಜಾಳಿಗಿ ದಂಡಿ
ಮಾನ್ಯಾಡು ತುರುಬ ಒನಪಿಲಿ ಕಟ್ಟಿ
ಖನ್ನಿ ಕೋಮಲಿ ಹಸೀಗೇಳs ಸೋ || ೧ ||

ನೀರೆಯ ಬಾವುಲಿ ಲಿಗಿಲಿಗಿನಾಡುತ
ಕಾಲುಂಗ್ರ ಪಿಲ್ಲ್ಯಾ ಝುಗಝುಗ ಹೊಳವುತ
ಹೊನ್ನಾ-ಭರಣಾ ಹರಡಿಗಿ ಮಲಕs
ಹೊನ್ನ ಪುತ್ತಳಿ ರುಳಿ ಸರಿಗಿಟಗೊಂಡು
ಕೋಗಿಲ ಮದ್ದಾನೇ ಹಸಿಗೇಳs ಸೋ || ೨ ||

ಇದುರಿನ ಮನಿಯ ಬಿದರೊಂಕೆವರ
ಮನ್ನುಸಿದಾರ ಮನಿ ಹೊಕ್ಕವರ

ಹೆತ್ತು ಮಾದಿಲಿ ಪಂತಿಲಿ ಕೂಡ್ರೋ
ಚಿತ್ತಬಲ್ಲಬೋ ಶಿವಶಂಕರಗ
ಚಿತ್ರಾಂಗದರಸಾ ಹಸೀಗೇಳೋ ಸೋ ॥ ೩ ॥

ನಿಲಗುದರೆಂಬೋ ತೇಜಿಯನೇರಿ
ಮದನಾರಿ ಬಂದು ಬಾಗಿಲ್ಗಿ ನಿಂತs
ವಾರಿಗಿ ಗೆಳೆದ್ಯಾರು ಒಡಗೊಂಡು ಕರದರ
ಬಾ ಎನ್ನ ಮಡsದೀ ಹಸಿಗೇಳs ಸೋ ॥ ೪ ॥

ಇಂಜನ ಮಳಿಯ ಗಂಧದ ಗೀರ
ಇಂದ್ನವು ತಂಗೆಮನ ಗಂಡನ ನದರs
ಇಂದ್ರನ ಖಳಿಯುಳ ಚಂದ್ರನ ಮಗಳ
ಇಂದ ಮನ್ನಸರೇ ಶುಬsದಿಂದ ಸೋ ॥ ೫ ॥

" ರನ್ನ ದುಡುಗುಣಿ "

ರನ್ನದುಡುಗುಣಿ ಚಿನ್ನದ ಕೊಂಡಿ
ಹೊನ್ನಿನಾ ಡಾಬಾ ಇಟ್ಟೆದಳs ।
ಎಣಕಿನಿಲ್ಲದೆ ಮಾಣಿಕಸsರ
ಎದಿಬದಿ ತಾನು ಹಾಕುವಳs ।
ಕಡಿಯ ಕಂಕಣ ಕಮಳದ ಮುಖಿಯ
ಹೊಳಿವ ಮುತ್ತಿನ ವಾಲಿಗಳs ।
ಜಯ ಜಯ ಮಂಗಳs । ಜಯ ಜಯ ಮಂಗಳs ।
ಸುಂದರಿ ಸಾಂಬನಿಗೇ । ಜಯ ಜಯ ಮಂಗಳs ॥ ೧ ॥

ಕಸೂತಿ ಕುಬಸಾ ಕೈಯಲಿ ಕನ್ನಡಿ
ನೆರsಳ ನೋಡಿ ಹಿಗ್ಗುವಳs ।
ಬಸವೇಸೂರನ ಎಡದಲಿ ಕುಂತು

ಹಸ್ಯಾಮಾಡಿ ತಾ ನಗುವಳ |
ಕಡಿಯ ಕಂಕಣ ಕಮಳದ ಮುಖಿಯ
ಹೊಳಿವ ಮುತ್ತಿನ ವಾಲಿಗಳ !
ಜಯ ಜಯ ಮಂಗಳ | ಜಯ ಜಯ ಮಂಗಳ |
ಸುಂದರಿ ಸಾಂಬನಿಗೇ | ಜಯ ಜಯ ಮಂಗಳ || ೨ ||

ಮುಗಿನಾಗ ಹೊಳಿವ ಮುತ್ತಿನ ಮೂಗುತಿ
ಮಿಗಿಲಾದ ಆಭರಣಿಟ್ಟಿದಳ |
ಅಚ್ಚರಂಗದ ಶಾಲನುಟ್ಟು
ಅನಂತ ಕೋಟಿ ರೂಪವಳ |
ಕಡಿಯ ಕಂಕಣ ಕಮಳದ ಮುಖಿಯ
ಹೊಳಿವ ಮುತ್ತಿನ ವಾಲಿಗಳ |
ಜಯ ಜಯ ಮಂಗಳ | ಜಯ ಜಯ ಮಂಗಳ |
ಸುಂದರಿ ಸಾಂಬನಿಗೇ | ಜಯ ಜಯ ಮಂಗಳ || ೩ ||

ದುಂಡಗೈಯವಳು ದಿಮಿದಿಮಿಗಾರಳು
ದುಂಡಮುತ್ತಿನ ವಾರಳ |
ಹಿಂಡ ಗೆಳದ್ಯಾರು ಕಂಡುಸಿ ಕರದರ
ಹೆಣೂಲ ಭಂಗಾರ ಹಾಕುವಳ |
ಕಡಿಯ ಕಂಕಣ ಕಮಳದ ಮುಖಿಯ
ಹೊಳಿವ ಮುತ್ತಿನ ವಾಲಿಗಳ |
ಜಯ ಜಯ ಮಂಗಳ | ಜಯ ಜಯ ಮಂಗಳ |
ಸುಂದರಿ ಸಾಂಬನಿಗೇ | ಜಯ ಜಯ ಮಂಗಳ || ೪ ||

ಧನೂರ ಬಣ್ಣಾ ಶಾಲ ಕೈಯಲಿ
ಐದು ಅಂಕುಶಾ ಹಿಡಿದವಳ
ಜಯ ಜಯ ಮಂಗಳ | ಜಯ ಜಯ ಮಂಗಳ |
ಸುಂದರಿ ಸಾಂಬನಿಗೇ | ಜಯ ಜಯ ಮಂಗಳ || ೫ ||

" ಬಾಲಿ ತಾ ಮೈನೆರದು "

ಬಾಲಿ ತಾ ಮೈನೆರದು ಬಾಗಿಲದಾಗ ನಿಂತಾಳ ।
ಬಾಳೀಲಿ ಹಂಗ ಮಕ ಬಾಡೀ । ಸೋ ॥ ೧ ॥

ಬಾಳೀಲಿ ಹಂಗ ಮಕ ಬಾಡಿ ಅವರವ್ವಾ ।
ಬಾ ಬಾಲಿನಂದ ಕರದಾಳ । ಸೋ ॥ ೨ ॥

ರಂಬಿ ತಾ ಮೈಯನೆರದ ಅಂಗಳದಾಗ ನಿಂತಾಳ ।
ನಿಂಬೆಲಿ ಹಾಂಗ ಮಕ ಬಾಡೀ । ಸೋ ॥ ೩ ॥

ನಿಂಬಿಹಣ್ಣು ಎಲೀ ಹಂಗ ಮುಗ ಬಾಡಿ ಅವರವ್ವಾ ।
ಬಾ ರಂಬಿನಂದು ಕರದಾಳ । ಸೋ ॥ ೪ ॥

ಓದೂವ ಸಾಲ್ಯಾಗ ಮೂವತ್ತು ಕುಂತಾರ ।
ಸಸಿ ಹೋಗಿ ಕಾಲಾ ಹಿಡದಾಳ । ಸೋ ॥ ೫ ॥

ಸಸಿ ಹೋಗಿ ಕಾಲಾ ಹಿಡಿದು ತಾ ಕೇಳ್ಯಾಳ ।
ಗೊಂಬಿಲ್ಲರಿ ನಮ್ಮ ಎಡಕಬಲಕ । ಸೋ ॥ ೬ ॥

ಬಡಗ್ಯಾರ ಕರಸ್ಯಾರ ಹಿಡಿ ಹೊನ್ನ ಕುಡಸ್ಯಾರ ।
ಚಂದನದ ಗೊಂಬಿ ಕೆತ್ತಸ್ಯಾರ । ಸೋ ॥ ೭ ॥

ವಡ್ಡರನ ಕರಸ್ಯಾರ ಹಿಡಿ ಹೊನ್ನ ಕೊಡಸ್ಯಾರ ।
ಅಂಗಳದಾಗ ಭಾವಿ ತೊಡಸ್ಯಾರ । ಸೋ ॥ ೮ ॥

ಅಂಗಳದಾಗಿನ ಭಾವಿ ತೋಡಸ್ಯಾರ ತಂಗೆವ್ವಾ ।
ಇಲ್ಲೇ ಹೊತ್ತಿಯನ್ನು ಹೋಲಿನೀರ । ಸೋ ॥ ೯ ॥

ನೀರ ಮಡಕ ಬಿಟ್ಟು ಹಾಲ ಮಡಕ ಹೋಗಿ ।
ಹಸನಾಗಿ ಒಗಿರಿ ಮಡೀಗೋಳ । ಸೋ ॥ ೧೦ ॥

ಹಸನಾಗಿ ಒಗಿರಿ ಮಡಿಗೋಳ ಈ ಮನಿಗಿ |
ದಸಿಮಕದಳಿಯ ಬರುತಾನ | ಸೋ || ೧೨ ||

"ಹಣಿಯೆಂಬೊ ಭಾಂವಕ"

ಹಣಿಯೆಂಬೊ ಭಾಂವಕ ಹಣಿಯಂದ ಪಂಡಿಯ |
ಮಗ್ಗಿ ತಿರುವಂದ ಮಲಕೀಲಿ | ಸೋ ಎನ್ನೀರೆ || ೧ ||

ಹುಬ್ಬಂಬು ಭಾಂವಕ ತಿಮ್ಹೊಂದ ದಂಡಿಯ |
ಗೊನಿಯ ತಿರುವಂದ ಮಲಕೀಲಿ | ಸೋ ... || ೨ ||

ಕಡಗಡನ ಇದನ್ಯಾರ ಕಡಗಣ್ಣಿಲಿ ನೋಡ್ಯಾರ |
ಕೊಡವಿಗಿ ತಮಗ ಪರನಂದ | ಸೋ ... || ೩ ||

ದ್ವಾರ್ಯಾಗೋಳಡಿನ್ಯಾರ ಪಾರಿಯ ನೋಡ್ಯಾರ |
ನಾರಿಗಿ ತಮಗ ಪರನಂದ | ಸೋ .. || ೪ ||

ಹಸಿಯ ಜಗಲಿಯ ಮ್ಯಾಲ ಒಯ್ದಿಟ್ಟಿರ ಭಾಸಿಂಗ |
ತಂಗೆವ್ವಾ ಹೋಗಿ ತಗತಾರ | ಸೋ ... || ೫ ||

ತಂಗಿಯವ್ವಾ ಹೋಗಿ ತಗತಾರ ಭಾಸಿಂಗ |
ನಂದಿ ಸೋಪನದ ನಸಲಿಗಿ | ಸೋ ... || ೬ ||

ದಂಡಿ ತಂದಣ್ಣಾಗ ಕುಂಡ್ರು ಗದ್ದಿಗ್ಗಾಕಿ |
ಗುಂಡ ಗದ್ದ್ಯಾಣದ ಹೋಲ ಕೊಟ್ಟ | ಸೋ ... || ೭ ||

ಗುಂಡಕನೆ ಗದ್ದ್ಯಾಣದ ಹೋಲ ಕೊಟ್ಟ ತಮ್ಮಾಗ |
ದಂಡಿ ತಂದಣಗ ಉಣಕೊಟ್ಟ | ಸೋ .... || ೮ ||

“ಹಸುಮಗಳ ನೀಲಮ್ಮ”

ಹಸುಮಗಳ ನೀಲಮ್ಮ ಬಸವಗ ಶರಣೆನ್ನ ।
ನಸಲಿ ಮಾರಗದ ವಡಿಯಾಗ । ಈ ಶರಣವು ಮಾಡಿ ।
ಹಸಿಗಿ ಬಾಗನ್ನಿ ಗರುಡಽವ ॥ ೧ ॥

ಹಕ್ಕಿ ಹಸಿಗೊಯ್ಯ ಕೋಗಿಲ ಪತ್ತಽಲೊಯ್ಯ ।
ಅಕ್ಕ ನಾಗಮ್ಮ ಕತೀ ನಡಿಸ । ಈ ಸೋಬಾನಾ ।
ಸಾಗನೂರವರ ಮನಿಯಾಗ ॥ ೨ ॥

ಅರಸರ ಹೆಂಡಽರ್ಯಾ ಅರವತ್ತಿನ ರಾಣ್ಯಾರ್ಯಾ ।
ನೀಲವಽರಣ ಬಳಿಯವರ್ಯಾ । ನಮ್ಮವ್ವಗಳಿರ್ಯಾ ।
ಬೇಗ ಸೋಬನಕ ಬರಽಬೇಕ ॥ ೩ ॥

ಗೌಡರ ಹೆಂಡರ್ಯಾ ಅರವತ್ತಿನ ರಾಣ್ಯಾರ್ಯಾ ।
ನೀಲವಽರಣದ ಬಳಿಯವರ್ಯಾ । ನಮ್ಮಕ್ಕಗಳಿರ್ಯಾ ।
ಬೇಗ ಸೋಬನಕ ಬರಽಬೇಕ ॥ ೪ ॥

ಹಂದಽರ ಮ್ಯಾಲಲ್ಲಿ ಜೋಡೆಡ್ಡು ಗಿಣಿ ಕೂತು ।
ಪೆಂಕನಲ್ಲಾಡಿ ನಗತಾವ । ಅವು ಮಾತಾಡ್ಯಾವ ।
ಅಕ್ಕ ಭಾವಾಗ ವರನಂದ ॥ ೫ ॥

ಕುಂಬೀಯನೆ ಮ್ಯಾಲ ಜೋಡೆಡ್ಡ ಗಿಣಿ ಕುಂತ ।
ಕಂಗನಲ್ಲಾಡಿ ನಗತಾವ । ಅವು ಮಾತಾಡ್ಯಾವ ।
ತಂಗಿ ಮೈದುನಗ ವರನಂದ ॥ ೬ ॥

ಇಟ್ಟು ಹಾಡನೆಲ್ಲ ಒತ್ತಿ ಭರಣವ ತುಂಬಿ ।
ವಜ್ಜರದ ಕೀಲಿ ಜಡಽದೇವ । ಈ ನಮ್ಮಽ ಹಾಡೆ ।
ಸೋಬನಿದ್ದಲ್ಲಿ ತಗಽದೇವ ॥ ೭ ॥

ಇತರ ವಿಧಾನಗಳು

ಕುಬಸಾ ಮಾಡೂ ಹಾಡು

ಒಂದಂಬು ತಿಂಗಳಿಗಿ ಒಂದೇನ ಬಯಸ್ಯಾಳ ।
ಅಂಗೈಯಲುವ್ವಾ ಎಳೆಹುಣಸಿ ॥ ೧ ॥

ಎರಡಂಬು ತಿಂಗಳಿಗಿ ಎರಡೇನ ಬಯಸ್ಯಾಳ ।
ಎರಡೆಲಿಗೊಂಡ ಎಳೆಮಾವ ॥ ೨ ॥

ಮೂರಂಬು ತಿಂಗಳಿಗಿ ಮೂರೇನ ಬಯಸ್ಯಾಳ ।
ಮೂಡಕಲ ದಿಕ್ಕಿಕನ ಮಗಿಮಾವ ॥ ೩ ॥

ನಾಕಂಬು ತಿಂಗಳಿಗಿ ನಾಕೇನ ಬಯಸ್ಯಾಳ ।
ಕಾಕೀಯ ಹಣ್ಣು ಕೈತುಂಬಾ ॥ ೪ ॥

ಐದಂಬು ತಿಂಗಳಿಗಿ ಐದೇನ ಬಯಸ್ಯಾಳ ।
ಕೊಯ್ದು ಮಲ್ಲೀಗಿ ಸನಿದಂಡಿ ॥ ೫ ॥

ಆರೆಂಬು ತಿಂಗಳಿಗಿ ಆರೇನ ಬಯಸ್ಯಾಳ ।
ಆರಾಕಿದ ಬಾನ ಕೆನಿ-ಮಸರ ॥ ೬ ॥

ಏಳಂಬು ತಿಂಗಳಿಗಿ ಏಳೇನ ಬಯಸ್ಯಾಳ ।
ಹೇಳ್ಳಿ ಕಳುವ್ಯಾಳ ತವರಿಗಿ ॥ ೭ ॥

ಎಂಟೆಂಬು ತಿಂಗಳಿಗಿ ಎಂಟೇನ ಬಯಸ್ಯಾಳ ।
ಕಂಟಲ್ಯಾಲಕ್ಕಿ ಕೊಡ ತುಪ್ಪ ॥ ೮ ॥

ಒಂಬತ್ತು ತಿಂಗಳಿಗಿ ತುಂಬ್ಯಾವ ನವಮಾಸ ।
ಸಂದು ಸಂದೆಲ್ಲ ಕಿರಿಬ್ಯಾನಿ ॥ ೯ ॥

ವ್ಯಾಳ್ಯವ್ಯಾಳ್ಯಕೆ ಬ್ಯಾನಿ ತಾಳ ಬಾರಿಸಿದಂಗ ।
ತಾಳಲಾರೆನೆ ನಿಲ್ಲಲಾರೆನವ್ವಾ । ತಾಯವ್ವನಿರಬೇಕು ಒನ್ಮ್ಯಕ ॥ ೧೦ ॥

ಹೊತ್ತು ಹೊತ್ತಿಲೆ ಬ್ಯಾನಿ ಕತ್ತೀಲೆ ಕಡ್ದಂತೆ |
ಹೆತ್ತವ್ವನಿರಬೇಕ ಜನ್ಮಕ || ೧೧ ||

ಹತ್ತಂಬು ತಿಂಗಳಿಗಿ ಹೆತ್ತಾಳ ಹಸಗೂಸ |
ಸುತ್ತೆಲ್ಲ ನೆರದಾರ ಸುಮಂಗಲೇರು || ೧೨ ||

ಬಯಕೆಯ ಹಾಡು

ಕಸಕಸಿ ಕೊಬ್ಬರಿ ಹಸನುಳ್ಳ ಜಿಲಿಬಿಲಿ |
ಬಿಸಿಯ ಹೂರಣಗಡಬ ಬಿಳಿಯ ಬೆಲ್ಲಽಽ |
ರಸಬಾಳಿ ಖಬ್ಬ ಸುಲಿದು ಮುಂದಿಟ್ಟರ |
ಇಸಮಾಡಿ ಒಂದ ತುತ್ತ ತಿಂದೇನ ತಾಯಿ |
ಬಂಕಿ ಕಾಡತಾವ ತಾಯಿ ಪರಿಪರಿಯಿಂದ
ಬಂಕಿ ಕಾಡತಾವ || ೧ ||

ಆಕಳ ಹಾಲಾಗ ದುಮ್ರಸ ಮಾಡ |
ಪರಡಿ ಸವತೀಬೀಜ ಪಾಯಸ ಮಾಡ |
ಯಾಲಕ್ಕಾಯ ಪತ್ತುರಿ ಜಾಜಿಕಾಯಿ ಮೊದಲುಮಾಡಿ |
ಇಷ್ಟ ಸಾಹಿತನೆಲ್ಲ ಹದಮಾಡ ತಾಯಿ |
ಬಂಕಿ ಕಾಡತಾವ || ೨ ||

ಗಂಗಾಳ ಝರಗಿ ಝಳಝಳ ಬೆಳಗ |
ತೇಂಬೀಗಿ ತುಂಬಿ ಬದಿಯಲ್ಲಿ ಇಡಽ |
ಡೊಣ್ಣಿ ತುಂಬ ತುಪ್ಪ ತಂದು ಮುಂದಿಟ್ಟರ |
ಬಟ್ಟಿದ್ದಿ ಬಾಯಾಗ ಇಟ್ಟೇನ ತಾಯಿ |
ಬಂಕಿ ಕಾಡತಾವ || ೩ ||

ಎಳ್ಳ ಹಚ್ಚಿದ ರೊಟ್ಟಿ ಎಣ್ಣಿ ಬದನೀಕಾಯಿ।
ಮಸರ ಕಲಸಿದ ಬುತ್ತಿ ಬಿಸಿಯ ಬಾನ।
ಅಲ್ಲ, ಮಾಗುಣಿ ಬೇರ, ಬೆಲ್ಲ, ಬೆಳವಲದ್ದ ಣ್ಣ।
ಮನ ಬೇಡಿ ನನ ಜೀವ ಬಗಸ್ಯಾದ ತಾಯಿ।
ಬಂಕಿ ಕಾಡತಾವ ॥ ೪ ॥

ಹೋಳಿಹುಣ್ಣಿವಿ ಸುತ್ತ ತನುಗಾಳಿ ಬೀಸ್ಯಾವ।
ಮಾಳೀಗಿ ಏರಿ ಬೆಳಖಿಂಡಿ ಮುಚ್ಚ।
ಬಣ್ಣಾಕ್ಕದ ಹಚ್ಚಡ ಬಿಗಿಬಿಗಿದು ಹೊಚ್ಚಿದರ।
ಕಣ್ತುಂಬ ಒಂದು ನಿದ್ದಿ ಮಾಡೇನ ತಾಯಿ।
ಬಂಕಿ ಕಾಡತಾವ ॥ ೫ ॥

ಕುಂತsರ ಆಕಡಿಕಿ ನಿಂತsರ ತೂಕಡಿಕಿ।
ತಾಳಲಾರೆನೆ ತಾಯಿ ತೋಳಾರೆ ತಾರ।
ಮಂಚಕ ಒಪ್ಪುತ ಹಾಸೀಗಿ ಮಾಡ।
ಮಂಚಕ ಎನ್ನ ಎಳದ್ಹಾಕ ತಾಯಿ।
ಬಂಕಿ ಕಾಡತಾವ ॥ ೬ ॥

ಉಡಿತುಂಬುವ ಹಾಡು

ಬಾಳೆsಯ ಬನ ಚೆಲುವs।
ಬಾಳೆsಯ ಗೊನಿ ಚೆಲುವs।
ಬಾಳ್ಯಾಗ ಇರುವ ಗಿsಣಿ ಚೆಲುವss। ಸೋಬಾನಮ ॥
ಬಾಳಿಯಾಗss ಇರುವ ಗಿಣಿ ಚೆಲುವ ತಮ್ಮನ
ಬಾಗsಲ ಮಾಟ ಕರಚೆಲುವ। ಸೋ.... ॥ ೧ ॥

ನಿಂಬೀಯ ಬನ ಚೆಲುವ |
ನಿಂಬೀಯ ಗೊನಿ ಚೆಲುವ |
ನಿಂಬ್ಯಾಗ ಇರುವ ಗಿಣಿ ಚೆಲುವ | ಸೋ ...
ನಿಂಬಿಯಾಗ ಇರುವ ಗಿಣಿ ಚೆಲುವ ತಮ್ಮನ
ಕಂಬದ ಮಾಟ ಕರಚೆಲುವ | ಸೋ || ೨ ||

ನಿಂಬೀಯ ಬನದಾಗ ಚಂದರನ ಕಾವಲ |
ಬಂದವರ್ಯಾರ ಒಳಹೊರಗ | ಸೋ....
ಬಂದುವವರ್ಯಾರ ಒಳಹೊರಗ ತಂಗೆವನ
ಅಪ್ಪದವರಲ್ಲ ಪರಮಂದಿ | ಸೋ || ೩ ||

ಬಾಳೀಯ ಬನದಾಗ ಭಾವನ ಕಾವಲ
ಬಂದವರ್ಯಾರ ಒಳಹೊರಗ | ಸೋ ....
ಬಂದುವವರ್ಯಾರ ಒಳಹೊರಗ ತಂಗೆವನ
ಅಪ್ಪದವರಲ್ಲ ಪರಮಂದಿ | ಸೋ || ೪ ||

ಅತ್ತಿಕಾಯೀ ತಂದು ಅತ್ತೆ ಉಡಿಯಲಿ ತುಂಬಿ |
ಅತ್ತ್ಯೆದ್ದು ಹರಕಿ ಕುಡತಾಳ | ಸೋ....
ಅತ್ತೆಯೆದ್ದು ಹರಕಿ ಕುಡತಾಳ ತಂಗೆವಗ
ಹತ್ತು ಮಕ್ಕಳ ಹಡೆಯೆಂದು | ಸೋ || ೫ ||

ಮಾವಿನ ಕಾಯಿ ತಂದು ಮಾವ ಉಡಿಯಲಿ ತುಂಬಿ |
ಮಾಯದ ಮಕ್ಕಳ ಹಡೆಯೆಂದು | ಸೋ....
ಮಾಯದ ಮಕ್ಕಳ ಹಡೆಯೆಂದು ತಂಗೆವಗ |
ಮಾವ ಬಂದ್ಹರಕಿ ಕೊಡತಾನ | ಸೋ || ೬ ||

ಬಾಳಿಕಾಯೀ ತಂದು ಭಾವ ಉಡಿಯಲಿ ತುಂಬಿ |
ಭಾವ ಎದ್ದು ಹರಕಿ ಕೊಡತಾನ | ಸೋ....
ಭಾವ ಎದ್ದು ಹರಕಿ ಕೊಡತಾನ ತಂಗೆವ್ವಾ |
ಭಾಳ ಮಕ್ಕಳ ಹಡೆಯವ್ವಾ | ಸೋ || ೭ ||

ಅತ್ತಿಂದ ಬಂದಾವ ಮುತ್ತಿನೆರಡಾರೂತಿ
ಉಪ್ಪರಗಿ ಗಗನ ತುಳುಕೂತ। ಸೋ. ......
ಉಪ್ಪುವರಗಿS ಗಗನ ತುಳುಕೂತ ತಂಗೆವ್ವನ।
ಅತ್ತೆಯಾರೂತಿ ಬೆಳಗ್ಯಾಳ। ಸೋ ॥ ೮ ॥

ಬೇನೆತಿನ್ನುವ ಹಾಡು

ಹುಟ್ಟಿದಂದಿಂಗಿ ಮೊದಲS ಹೊಟ್ಟಿಬ್ಯಾನೆಂಬೂದರಿಯ।
ಹೊಟ್ಟಿ ಕುಟ್ಟಂದಾವಲ್ಲSS
ಎದ್ದ್ಯಾSSವೇಳವ್ವಾ ಬ್ಯಾನಿ ತಾಳಲಾರೇನ ಬ್ಯಾನಿ ॥ ೧ ॥
ನಡ ಟೊಂಕ ಕೊಡಲೀಲಿ ಕಡದಂತ ತಡಬ್ಯಾನಿ।
ಬದಿಲಿ ಕುಂತವ್ವಗಳಿರ್ಯಾ ಹಡಿ ಹಡೀ ಅಂದಾರಲ್ಲ।
ಎದ್ದ್ಯಾSSವೇ.. . . . ॥ ೨ ॥
ಹೊತ್ತ ಹೊತ್ತೀನ ಬ್ಯಾನಿ ಕತ್ತೀಲಿ ಕಡದಂಗ।
ಹೆತ್ತವ್ವ ಬಾರ ಬದಿಯಲ್ಲಿ।
ಎದ್ದ್ಯಾSSವೇ........ ॥ ೩ ॥
ತಾಸ ತಾಸೀನ ಬ್ಯಾನಿ ತಾಳ ಬಾರಿಸಿದಂಗ।
ತಾಯವ್ವ ಬಾರ ಬದಿಯಲ್ಲಿ।
ಎದ್ದ್ಯಾSSವೇ.... ... ॥ ೪ ॥
ಆಡಗೀಯ ಮನಿಯಾಗ ಕಡಗ ಕಾಲಿನ ಮಂಚ।
ಬದಿಲಿ ಕುಂತವ್ವಗಳಿರ್ಯಾ ಹಡಿ ಹಡೀ ಅಂದಾರಲ್ಲ।
ಎದ್ದ್ಯಾSSವೇ....... ॥ ೫ ॥
ಧರಧರ ನಡಗೂತ ತೊಡಿಗೊಳು ಅದರೂತ।
ತುರುಬಿನ ಕೂದಲ ಬಾಯೊಳಗಿಡವೂತ।
ಎದ್ದ್ಯಾSSವೇ....... ॥ ೬ ॥

ಒಡಿಗಾಯಿ ಹಿಡಿಗಾಯಿ ಒಡೆಯ ತೆಂಗಿನ ಕಾಯಿ |
ಒಡೆಯ ಪರವೂತಮಲ್ಲ ಕಡಿಗಾದರು ಮಾಡ್ಯಾನಲ್ಲ |
ಎದ್ದಾSSವೇ ...... || ೭ ||

ತೊಟ್ಟಿಲಲ್ಲಿ ಹಾಕುವ ಹಾಡು

ಶಿಂದಿಂಗಿ ತಳದಳದಲ್ಲಿ ಸಂಗಮ್ಮನ ತಳ |
ಶಂಭೋ ಮಹದೇವ ಇಂದುದಯನಾಗೊ | ಜೋ ಜೋ ||

ಭಂಗಾರ ತೊಟ್ಟೀಲ ಥೊರಿತಾಯಿ ! ಕುಂದಲ |
ಸಿಂಗರದಾನ ಶ್ರೀಕೃಷ್ಣಗ ಛಂದಾಗಿ ತೂಗಾರಿ | ಜೋ.... ||

ಕರೆದು ಬಂದೆವ್ರು ಓಣಿ ನೆರೆದು ಬಂದಿತು ಮಂದಿ |
ಬಂದು ನಿಂತಾರವ್ವ ಕನ್ನಿ ಮುತ್ತೈದ್ಯಾರು | ಜೋ.... ||

ಸಕ್ಕರಿ ಪಾಯಸ ಬಸಿದು ಬಟ್ಟಲ ತುಂಬಿ |
ತುತಮಾಡಿ ಉಣಿಸಿದರ ಬಿಕಿಬಿಕಿ ಅಳತಾನ | ಜೋ.... ||

ಸಾದ ಸಿರಿಗಂಧ ತಯದು ಬಟ್ಟಲ ತುಂಬಿ |
ತೀಡಿ ತೀಡಿ ಹಚ್ಚಿದರ ಕಾಡಿ ಕಾಡಿ ಅಳತಾನ | ಜೋ... ||

ನಾಗಬಂದೀನಂಗಿ ನಡುವಿನ ಮ್ಯಾಲ ತೊಡಸಿ |
ಆಡ್ಲಕ್ಕ ಹೋಗಂದ್ರ ಬೋರ್ಯಾಡಿ ಅಳತಾನ | ಜೋ.... ||

ಬಿಂದೂಲಿ ಇಡಸೀದ ಬಿಳಿಯಂಗಿ ತೊಡಸೀದ |
ಆಡಿ ಬಾ ಕಂದಂದ್ರ ಕಾಡಿ ಕಾಡಿ ಅಳತಾನ | ಜೋ.... ||

ನೀರಾಗ ನೆಳ ನೋಡಿ ಸೂರ್ಯ ಚಂದ್ರನ ಬೇಡಿ |
ಅದರಂಗ ತಾ ಬೇಡಿ ಬೋರ್ಯಾಡಿ ಅಳತಾನ | ಜೋ.... ||

ಹಳಿಮ್ಮಿ ನೂರೆಹಾಲ ತೊಟ್ಟಲದಾಗಿಟ್ಟೇದ |
ಆಡಿ ಬಂದ್ಕುಡಿಯಂದ್ರ ಕಾಡಿಕಾಡ್ಯಳತಾನ | ಜೋ.... ||

ಅತ್ತೆಮನೆಯ ಕಾಟ

ಅತ್ತೆಸೊಸೆಯರ ಜಗಳ

ಅತ್ತಿ ಸಸ್ತೆರ ಜಗಳಾ ಹತ್ತು ವರುಷವು ಆಗಿ।
ಬಿಚ್ಚಿ ಹೇಳ್ಯಾಳ ಮಾತ ತನ್ನ ಮಗನ ಮುಂದ। ಸೂಯಿ ॥ ೧ ॥

ಬಿಚ್ಚೀನೆ ಹೇಳ್ಯಾಳ ಮಗನ ಮುಂದ ಈವ ಮಾತಾ।
ಬಿಟ್ಟಬಿಡೊ ಮಗನೆ ನಿನ್ನ ಮಡದೀನ। ಸೂಯಿ ॥ ೨ ॥

ಬಿಟ್ಟ್ಯಾರ ಬಿಡಲಾಕ ಕಟ್ಟಿದ್ದ ಗಂಟಲ್ಲ।
ಹತ್ತು ಮಂದಿ ರೈತರು ಕೂಡಿ ಹಾಕೀದ ಗಂಟ। ಸೂಯಿ ॥ ೩ ॥

* * * *

ದೇವರ ಮನಿಯಾನ ಮಜ್ಜೀಗಿ ಮಾಡತ್ತೆವ್ವಾ।
ನಾ ಹೋಗಿ ಬರತ ನನ್ನ ತವರೀಗೆ। ಸೂಯಿ ॥ ೪ ॥

ಹ್ಯಾದ ಬಗ್ಗಿವ ಏನ ಇದ್ದ ಬಗ್ಗೀವ ಏನ।
ಹೋಗಿ ನಿನ್ಹಾಲಿ ನೀನು ಹರಿಕೊಳ್ಳ। ಸೂಯಿ ॥ ೫ ॥

ಮಂಚದ ಮ್ಯಾಲ ಕುಂತು ಎಲಿ ತಿನ್ನು ಮಾವಯ್ಯ।
ನಾ ಹೋಗಿ ಬರತ ನನ್ನ ತವರೀಗೆ। ಸೂಯಿ ॥ ೬ ॥

ಹ್ವಾದರ ಹೋಗವ್ವಾ ಜತ್ತನ್ಲೆ ಬಾರವ್ವಾ।
ತವರೊಳ್ಳೆವರಂತ ನೀನು ತಡೀಬ್ಯಾಡಾ। ಸೂಯಿ ॥ ೭ ॥

ಹಿಂಡ ಮುಂದ್ಯಾಗ ನಿಂತು ಚಂಡಾಡು ಭಾವಯ್ಯಾ।
ನಾ ಹೋಗಿ ಬರತ ನನ್ನ ತವರೀಗೆ। ಸೂಯಿ ॥ ೮ ॥

ಹ್ವಾದರ ಹೋಗವ್ವಾ ಜತ್ತನ್ಲೆ ಬಾರವ್ವಾ।
ತವರೊಳ್ಳೆವರಂತ ನೀನು ತಡೀಬ್ಯಾಡ। ಸೂಯಿ ॥ ೯ ॥

ಹಾದೀ ಹೊಲದವನ ಹಾಲಂತ ಗುಣದವನ |
ಹಾಡ್ಯಾಡಿ ಹಕ್ಕಿ ನೀನು ಹೊಡಿಯವನ | ಸೂಯಿ ॥ ೧೦ ॥

ಹಾಡೀಹಾಡೀ ಹಕ್ಕಿ ಹೊಡಿವಂಥ ಮನಿ ಪುರುಷ |
ನಾ ಹೋಗಿ ಬರತ ನನ್ನ ತವರೀಗೆ | ಸೂಯಿ ॥ ೧೧ ॥

* * * *

ಹೊರಿಹುಲ್ಲ ತಂದಾನ ಧಪ್ಪಂತ ಒಗದಾನ |
ಚಂದರ ಸಾಲ್ಯಾಗ ಇಲ್ಲ ಮನಿ ಮಡದಿ | ಸೂಯಿ ॥ ೧೨ ॥

ತುಪ್ಪಬಾನುಣ ಮಗನ ಮೇಲುಪ್ರಿ ಏರ ಮಗನ |
ಮಡದೆಂಬು ಶಬುದ ನೀನು ಮರಿ ಮಗನ | ಸೂಯಿ ॥ ೧೩ ॥

ತುಪ್ಪಾ ಬಾನಾ ಒಯ್ದು ತಿಪ್ಪೀಗಿ ಸುರುವವ್ವಾ |
ತುಪ್ಪಿನಂಥಕ್ಕಿ ನನ್ನ ಮನೀ ಮಡದಿ | ಸೂಯಿ ॥ ೧೪ ॥

ತುಪ್ಪೀನ ಅಂಥಕಿ ಮನಿ ಮಡದಿನ ಬಿಟಕೊಟ್ಟು |
ತಿಪ್ಪಿ ಸೋಬೂತಿ ನನ್ನ ಮಾಡಿದಿ ತಾಯಿ | ಸೂಯಿ ॥ ೧೫ ॥

ಹಾಲಾ ಬಾನುಣು ಮಗನೆ ಮೇಲುಪ್ರಿಗೇರು ಮಗನೆ |
ಮಡದೆಂಬು ಶಬದ ನೀನು ಮರಿ ಮಗನೆ | ಸೂಯಿ ॥ ೧೬ ॥

ಹಾಲಾ ಬಾನಾ ಒಯ್ದು ಹಾದೀಗಿ ಸುರವವ್ವಾ |
ಹಾಲಿನಂಥಕ್ಕಿ ನನ್ನ ಮನೀ ಮಡದಿ | ಸೂಯಿ ॥ ೧೭ ॥

ಹಾಲಿನಂಥಕ್ಕಿ ಮನಿ ಮಡದಿನ ಬಿಟಕೊಟ್ಟು |
ಹಾದಿ ಸೋಬೂತಿ ನನ್ನ ಮಾಡೀದಿ ತಾಯಿ | ಸೂಯಿ ॥ ೧೮ ॥

“ ಶಾಂವಕ್ಕಿ ಕುಟ್ಟಂದ್ರ ”

ಶಾಂವಕ್ಕಿ ಕುಟ್ಟಂದ್ರ ಶರಗ್ಯಾಸಿ ಮೆಲಗ್ಯಾಳ |
ಎಬಸಣ್ಣ ನಿನ್ನ ಮಡದೀನ | ಸೂವಯ್ಯಾ ॥ ೧ ॥

ಮಡದೀನ ಎಬಸಿದರ ಅರನಿದ್ದಿನಾದಾವ ।
ಎರಡೊಬ್ಬಿ ಮಾಡಿ ಥಳಸವ್ವಾ । ಸೂವಯ್ಯಾ ॥ ೨ ॥

ಎರಡೋಽಬ್ಬಿ ಮಾಡಿದರ ಕರಡಕ್ಕಿನಾದಾವ ।
ಕರಡಕ್ಕಿ ಜ್ವಾಳ ಸುರಿಯುಽವ । ಸೂವಯ್ಯಾ ॥ ೩ ॥

ಕುಟ್ಟಿದರ ಕುಟ್ಟವ್ವಾ ಕಿಟಕೀಟಿ ಹಚಬ್ಯಾಡಾ ।
ಬಂದ್ಹಾದಿ ಹಿಡಿದು ನಡಿ ತಂಗೀ । ಸೂವಯ್ಯಾ ॥ ೪ ॥

ಎತ್ತಾರಿ ತಾರಣ್ಣಾ ಮುಟ್ಟಾರಿ ಬಿಗಿಯಣ್ಣಾ ।
ಹೊಂತೂಟ್ಲೆ ನನ್ನ ಖಳವಣ್ಣಾ । ಸೂವಯ್ಯಾ ॥ ೫ ॥

ಎತ್ತಽ ನಮ್ಮಲ್ಲಿಲ್ಲ ಮುಟ್ಟಽ ನಮ್ಮಲ್ಲಿಲ್ಲ ।
ಬಂದಽ ದಾರಿ ಹಿಡಿದು ನಡಿ ತಂಗಿಽ । ಸೂವಯ್ಯಾ ॥ ೬ ॥

ತಂಗಿ ಹ್ವಾದ ಮರದೀನ ರಂಬೀಗಿ ಬ್ಯಾನಿ ಬಂದು ।
ಮನಿಯಾನ ಮಕ್ಕಳಿಗಿ ಉರಿ ಥೀಳಿಯುಽ । ಸೂವಯ್ಯಾ ॥ ೭ ॥

ಮನಿಯಾನ ಮಕ್ಕಳಿಗಿ ಉರಿ ಥೀಳೀ ಬಂದರ ।
ದೇವಽರ ಕೇಳಾಕ ನಡದಾನಽ । ಸೂವಯ್ಯಾ ॥ ೮ ॥

ಕೇಳೂಸಿ ನೋಡಿದರ ದೇವರಿಲ್ಲ ದಂಡರಿಲ್ಲ ।
ಮನಿಯಾನ ಹೆಣಮಗಳು ಉಸರಂದ । ಸೂವಯ್ಯಾ ॥ ೯ ॥

ಎತ್ತಾರಿ ತಗೊಂಡಾನಽ ಮುಟ್ಟಾರಿ ಬಿಗದಾನ ।
ತಂಗ್ಹ್ವಾದ ದಾರಿ ಹಿಡಿದಾಽನ ಸೂವಯ್ಯಾ ॥ ೧೦ ॥

ಎಂದಿಲ್ಲದಣ್ಣಯ್ಯಾ ಇಂದ್ಯಾಕ ಬಂದಾನ ।
ಕುಂಡಽರ ಕೊಡರಿ ಮಣಿ ಚವಕಿ । ಸೂವಯ್ಯಾ ॥ ೧೧ ॥

ಕುಂಡಽರ ಬಂದಿಲ್ಲ ನಿಂದಽರ ಬಂದಿಲ್ಲ ।
ಬರಬೇಕ ತಂಗಿ ಮದುವೀಗಿ । ಸೂವಯ್ಯಾ ॥ ೧೨ ॥

ಮಜ್ಜಿಗಿ ಮಾಡವರಿಲ್ಲ ಬೆಣ್ಣಿ ತೆಗೆಯುವರಿಲ್ಲ |
ಹ್ಯಾಂಗ ಬರಲೆಣ್ಣಾ ಮದವೀಗಿs | ಸೂವಯ್ಯಾ || ೧೩ ||

ಮಜ್ಜಿಗಿ ಮಾಡವರ ಕುಡತ ಬೆಣ್ಣಿ ತೆಗೆವರ ಕುಡತ |
ಬರಬೇಕ ತಂಗಿ ಮದವೀಗಿ | ಸೂವಯ್ಯಾ || ೧೪ ||

ಬ್ಯಾಸೀಗಿ ಬಿಸಲಣ್ಣಾ ಕೂಸೀನ ತಾಯಣ್ಣಾ |
ಹ್ಯಾಂಗ ಬರಲೆಣ್ಣಾ ಮದವೀಗಿs | ಸೂವಯ್ಯಾ || ೧೫ ||

ನಿನಗ ಪಲ್ಲಕಿ ಕುಡತ ಕೂಸಿಗಿ ಮೇಣೇ ಕುಡತ |
ಗಂಡsಗ ಕುಡತ ಮರಿಗುದರಿ | ಸೂವಯ್ಯಾ || ೧೬ ||

ಬಂದsರ ಬರುವೇನೋ ಬಾಗಿಲ್ದಾಗ ನಿಂತೇನೊ |
ಬಾಲಾಗ ಧಾರಿ ಎರೆದೇನೋ | ಸೂವಯ್ಯಾ * || ೧೭ ||

ಹತ್ತ ರೂಪಾಯಿ ಕೊಟ್ಟು ಸೀರೀಯ ತರಸೀದ |
ಉಟ್ಹೋಗ ತಂಗಿ ಜನದಾಗ | ಸೂವಯ್ಯಾ || ೧೮ ||

ಇsವು ಸೀರಿ ಒಯ್ದು ಮಡದೀಗಿ ಉಡಸಣ್ಣಾ |
ಹಾಡ್ಯಾಳೊ ನಿನ್ನ ಹರಸ್ಯಾಳೋ | ಸೂವಯ್ಯಾ || ೧೯ ||

ಹಾಡಿಯಾಳೊ ನಿನ್ನs ಹರಸ್ಯಾಳೊ ನಾಲುರದಾಗ |
ಬಾ ಅಣ್ಣಾsನಂದು ಕರದಾಳೋ | ಸೂವಯ್ಯಾ || ೨೦ ||

ಕಲ್ಲಬುರಗಿಗಿ ಹೋಗಿ ಕುಬ್ಬsಸ ತಂದೀದ |
ತೊಟಗೋ ಬಾ ತಂಗಿ ಜನದಾsಗs | ಸೂವಯ್ಯಾ || ೨೧ ||

ಅವು ಕುಬ್ಬಸನೊಯ್ದು ಮಡದೀಗಿ ತೊಡಿಸಣ್ಣಾ |
ಹಾಡ್ಯಾಳೊ ನಿನ್ನ ಹರಸ್ಯಾಳೋ | ಸೂವಯ್ಯಾ || ೨೨ ||

ಹಾಡಿಯಾsಳ ನಿನ್ನ ಹರಸ್ಯಾಳ ನಾಲುರದಾಗ |
ಬಾರಣ್ಣನೆಂದು ಕರದಾsಳs | ಸೂವಯ್ಯಾ || ೨೩ ||

ಪಂಡ್ರಾಪೂರಕ್ಹೋಗಿ ಕೂಕಮ ತಂದೀದ ।
ಹಚಗೊ ಬಾ ತಂಗಿ ಸಬೆದಾಽಗಽ । ಸೂವಯ್ಯಾ ॥ ೨೪ ॥

ಆಽವು ಕೂಕಮನೊಯ್ದು ಮಡದೀಗಿ ಹಚ್ಚಣ್ಣಾ ।
ಹಾಡ್ಯಾಳೊ ನಿನ್ನ ಹೆರಸ್ಯಾಳೋ । ಸೂವಯ್ಯಾ ॥ ೨೫ ॥

ಹಾಡಿಯಾಽಳಽ ನಿನ್ನ ಹೆರಸ್ಯಾಳ ನಾಲುರದಾಗ ।
ಬಾರಣ್ಣನೆಂದು ಕರದಾಳಽ । ಸೂವಯ್ಯಾ ॥ ೨೬ ॥

ನನ್ನಲ್ಲಿ ಹುಟ್ಟೀದಿ ನನ್ನಲ್ಲಿ ಬೆಳದೀದಿ ।
ಇಟ್ಟ ಮಾತೆಲ್ಲಿ ಕಲತೆವ್ವಾಽ । ಸೂವಯ್ಯಾ ॥ ೨೭ ॥

ಅಡವ್ಯಾಗ ಹುಟ್ಟೀದ ಅಡವ್ಯಾಗ ಬೆಳದೀದ ।
ಎಲಿಗೊಂಡ ಮಾತ ಕಲತೀನಽ । ಸೂವಯ್ಯಾ ॥ ೨೮ ॥

ಹುಟ್ಟಿದ ಮಲ್ಲಿಗಿಗೀಡ ಹುಟ್ಟಿದಂಗ ಇರುದಿಲ್ಲ ।
ದಿನಕೊಂದು ಪರಿಯ ಚಿಗವೂದಽ । ಸೂವಯ್ಯಾ ॥ ೨೯ ॥

ದಿನಽಕೊಂದು ಪರಿಯ ಚಿಗವೂ ಮಲ್ಲಿಗಿ ಹೂವ ।
ಮತ್ತೊಬ್ಬ ಜಾಣ ಮುಡಿಯೋದಽ । ಸೂವಯ್ಯಾ ॥ ೩೦ ॥

ಹಾಸ್ಯದ ಹಾಡುಗಳು

ನೂಲೊಲ್ಯಾಕ ಚೆನ್ನೀ ?

ಗಂಡ:— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೇಂಡತಿ:— ರಾಟಲಿಲ್ಲೋ ಜಾಣಾ !
ರಾಟಲಿಲ್ಲೋ ಜಾಣಾ !

ಕತೆಗಾರ.— ಮನಿಯಾನ ಬಂಡೀ ಮುರಿಸಿ
ಮನಿಯಾನ ಬಂಡೀ ಮುರಿಸಿ
ರಾಟೀ ಮಾಡಿಸಿ ಕೊಟ್ವಾ
ರಾಟೀ ಮಾಡಿಸಿ ಕೊಟ್ವಾ

ಗಂಡ:— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೇಂಡತಿ:— ಕದರಿಲ್ಲೊ ಜಾಣಾ !
ಕದರಿಲ್ಲೊ ಜಾಣಾ !

ಕತೆಗಾರ:— ಕೈಯಾನ ಗುದ್ದಲಿ ಮುರಿಸಿ
ಕೈಯಾನ ಗುದ್ದಲಿ ಮುರಿಸಿ
ಕದರ ಮಾಡಿಸಿಕೊಟ್ವಾ
ಕದರ ಮಾಡಿಸಿಕೊಟ್ವಾ

ಗಂಡ.— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೇಂಡತಿ:— ಚಿಲ್ಲಿಲ್ಲೊ ಜಾಣಾ !
ಚಿಲ್ಲಿಲ್ಲೊ ಜಾಣಾ !

ಕತೆಗಾರ:— ಮನಿಯಾನ ಕೋಣವು ಕಡಿಸಿ
ಮನಿಯಾನ ಕೋಣವು ಕಡಿಸಿ
ಚಿಲ್ಲು ಮಾಡಿಸಿಕೊಟ್ಟಾ
ಚಿಲ್ಲು ಮಾಡಿಸಿಕೊಟ್ಟಾ

ಗಂಡ:— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೆಂಡತಿ:— ಹಮ್ಮಿಗ್ಗಿಲ್ಲಲೊ ಜಾಣಾ !
ಹಮ್ಮಿಗ್ಗಿಲ್ಲಲೊ ಜಾಣಾ !

ಕತೆಗಾರ:— ನಡುವಿನ ಉಡದಾರ ಕಡಿದು
ನಡುವಿನ ಉಡದಾರ ಕಡಿದು
ಹಮ್ಮಿಗ್ಗಿ ಮಾಡಿಸಿಕೊಟ್ಟಾ
ಹಮ್ಮಿಗ್ಗಿ ಮಾಡಿಸಿಕೊಟ್ಟಾ

ಗಂಡ:— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೆಂಡತಿ:— ಕಟ್ಟಿ ಇಲ್ಲಲೋ ಜಾಣಾ
ಕಟ್ಟಿ ಇಲ್ಲಲೋ ಜಾಣಾ

ಕತೆಗಾರ:— ಊರಾನ ವಡ್ಡರ ಕರಿಸಿ
ಊರಾನ ವಡ್ಡರ ಕರಿಸಿ
ಕಟ್ಟಿ ಕಟ್ಟಿಸಿಕೊಟ್ಟಾ
ಕಟ್ಟಿ ಕಟ್ಟಿಸಿಕೊಟ್ಟಾ

ಗಂಡ:— ನೂಲಲ್ಯಾಕ ಚೆನ್ನೀ !
ನೂಲಲ್ಯಾಕ ಚೆನ್ನೀ !

ಹೆಂಡತಿ:— ಗೆಳತ್ಯಾರಿಲ್ಲೊ ಜಾಣಾ !
ಗೆಳತ್ಯಾರಿಲ್ಲೊ ಜಾಣಾ !

ಕತೆಗಾರ:— ಓಣ್ಯಾಗಿನವರ ಕರಸಿ
ಓಣ್ಯಾಗಿನವರ ಕರಸಿ
ಗೆಳತ್ಯಾರ ಕೂಡಿಸಿಕೊಟ್ಟಾ
ಗೆಳತ್ಯಾರ ಕೂಡಿಸಿಕೊಟ್ಟಾ

ಗಂಡ:— ನೂಲಲ್ಯಾಕ ಚೆನ್ನೀ!
ನೂಲಲ್ಯಾಕ ಚೆನ್ನೀ!

ಹೆಂಡತಿ:— ಗುಗ್ಗರಿಲ್ಲೊ ಜಾಣಾ!
ಗುಗ್ಗರಿಲ್ಲೊ ಜಾಣಾ!

ಕತೆಗಾರ.— ಗೋದಿ ಕಡ್ಲಿ ತರಸಿ
ಗೋದಿ ಕಡ್ಲಿ ತರಸಿ
ಗುಗ್ಗರಿ ಹಾಕಿಸಿಕೊಟ್ಟಾ
ಗುಗ್ಗರಿ ಹಾಕಿಸಿಕೊಟ್ಟಾ

ಗಂಡ:— ನೂಲಲ್ಯಾಕ ಚೆನ್ನೀ!
ನೂಲಲ್ಯಾಕ ಚೆನ್ನೀ!

ಹೆಂಡತಿ.— ನನಗ ಬರೂದಿಲ್ಲೋ ಜಾಣಾ!
ನನಗ ಬರೂದಿಲ್ಲೋ ಜಾಣಾ!

ಕಿವುಡರ ಹಾಡು

ಬು… …ನ್ಯಾಲ ಬುತ್ತೀ ಬುತ್ತಿ ಒಯ್ಯು ಜಾಣೆ |
ನಮ ಗಂಗನಳ್ಳಿ ಹಾದ್ಯೊಂದ್ಯಾಪ ಕಡಿಗಾದ | ಕೋಲಣ್ಣಾ
ಕೋಲ ॥೧॥

ನಮ್ಮತ್ತಿ ಕಟ್ಟ್ಯಾಳ ಒಂದು ಅರದ ರೊಟ್ಟಿ ।
ಹಾದ್ಯಾಗ ನಾ ಎಲ್ಲಿ ಬಿಚ್ಚಿಕೊಡಲೆಪ್ಪಾ । ಕೋ॰ ॥ ೨ ॥

ನಿನ್ನ ರೊಟ್ಟಿ ನಿನಗಿರಲಿ ನಿನ್ನ ಬುತ್ತಿ ನಿನಗಿರಲಿ ।
ನಮ ಗಂಗನಳ್ಳಿ ಹಾದ್ಯೊಂದ್ಯಾವ್ರ ಕಡಿಗಾದ । ಕೋ॰ ॥ ೩ ॥

ಏ ಗಂಡಾ ಏ ಪುರುಷಾ ಹಾದ್ಯಾಗ ನನಗೊಬ್ಬ ।
ರೊಟ್ಟಿ ಬೇಡುತಿದ್ದಾ । ಕೋ॰ ॥ ೪ ॥

ಏ ಭಾರ್ಗಿ ಏ ಮೂಳಾ ನಾಕು ಮೂಲಿ ಬೆಳಿಯಲಿ ।
ಕಿಂವ್ಯಾಗ್ವಾಲಿ ಬುಗುಡಿ ಮಾಡಸೇನಂದಾ । ಕೋ॰ ॥ ೫ ॥

ಏ ಅತ್ತಿ ಏ ಮಾವಾ ಹೊಲದಾಗ ನನ ಗಂಡಾ ।
ಮಲಿಯಾರಿ ಮೂಗಾರಿ ಕೊಯ್ದೇನಂದಾ । ಕೋ॰ ॥ ೬ ॥

ಒಳಗೀನಕ್ಕೆಂತಾ ಆದಾಳ್ಯಾದಾsಳಂದ ನೆರಮನಿ ।
ಕುಂಬಾರ್ಗ ನನಗ ಹಾದರಿಟ್ಯಾsಳ । ಕೋ॰ ॥ ೭ ॥

ಅವ್ರಾಣಿ ಅಪ್ರಾಣಿ ದೇವರಾಣಿ ದಿಂಡರಾಣಿ ।
ತೊಗರೀಯ ಗುಗ್ಗರಿ ತಿಂದಿಲ್ಲ ಅತ್ತಿ । ಕೋ॰ ॥ ೮ ॥

ಜೀನನ ಹಾಡು

ಇಂದsಎಳ್ಳಾಮಾಸಿ ಬಂತಲ್ಲ ಜೀನಾ ॥
ಅದ್ದsನ ಬೀಸs ಗಿದ್ದsನ ಕುಟ್ಟಿ ।
ಕುಳ್ಳ್ಯಾಗ ಅಡುವ ಕೋಲೀಲೆ ಮುಗಚ ॥
ಎಲ್ಲಾರ ಥೆರಗಾ ಹೊಂಟತಲ್ಲೊ ಜೀನಾ ।
ನಮ್ಮ ದ್ಯಾವರ ಥೆರಗಾ ಹೊಂಡಬೇಕೊ ಜೀನಾ ॥

ಅವರೆಲ್ಲಾ ಹಿಂದs ನಾವೆಲ್ಲಾ ಹಿಂದs ||
ಅಂಟsದ ತೆಳಗ ಇಟ್ಟಾನೊ ಜೀನಾ |
ಅಂಟsಕ ತೆಲಿಕೊಟ್ಟು ಮಲಗ್ಯಾನೊ ಜೀನಾ ||

ಮುಕ್ಕ ಮಗಿ ನೀರಾ ಕಾಗಿ ಕುಡಿತಲ್ಲ |
ಕುಕ್ಕ್ಯಾಗಿನ ಸುಚ್ಚ ಹದ್ದ ಒಯಿತಲ್ಲ |
ಇನ್ನ್ಯಾನ ಉಳ್ಳೀ ಇನ್ನ್ಯಾನ ತಿಲ್ಲೀ ||

* * * *

ಉದ ಉದ ಅಂತ ಹೋಗಿ ನಿಂತಾ'ಳೆಲ್ಲ' |
ಉವ ಉದ ಅಂದರ ನೀಡಾsಣೆಲ್ಲ ||

ಓಡ್ಯಾಡಿ ಪುಂಡಿ ಕಟಗಿ ಕಿತ್ತ್ಯಾನೊ ಜೀನಾ |
ಎಲ್ಲವನ ಬೆನ್ನ ಬೆನ್ನ ಶಳದಾನೊ ಜೀನಾ ||

ಹೊಡಿಬ್ಯಾಡೊ ಜೀನಾ ಹೊಡಿಬ್ಯಾಡೊ ಜೀನಾ |
ಬಂದ ಹಾದಿ ಕೂಡಿ ಹೋಗತೇನೊ ಜೀನಾ ||

ಜ್ವಾಳsದ ಹೊಲಕ ಹೋಗ್ಯಾಳ ಎಲ್ಲ |
ಕಣ್ಣಾನ ಕಾಡೀಗಿ ಉದರ್‍ಸ್ಯಾಳೆಲ್ಲ ||
ಹತ್ತಿಯ ಹೊಲಕ ಹೋದಾಳೆಲ್ಲಾ |
ಕೈಮ್ಯಾಲಿನ ಗಂಧಾ ಉದರ್‍ಸ್ಯಾಳೆಲ್ಲಾ ||
ಗೋದೀಯ ಹೊಲಕ ಹೋದಾಳೆಲ್ಲಾ |
ಉಡಿಯಾನ ಭಂಡಾರ ಉದರ್‍ಸ್ಯಾಳೆಲ್ಲಾ ||
ಕಡ್ಲೀಯ ಹೊಲಕ ಹೋದಾಳೆಲ್ಲಾ |
ಹಣಿಮ್ಯಾಲಿನ ಕೂಕಮ್ಮ ಉದರ್‍ಸ್ಯಾಳೆಲ್ಲಾ ||

* * * *

ಜ್ವಾಳsದ ಹೊಲಕ ಹ್ವಾದಾsನೊ ಜೀನಾ |
ಹತ್ತ್ ಖಂಡಗ ಜ್ವಾಳೆಲ್ಲಾ ಬತ್ತಗಾಡೀಗಿ ||

ಹತ್ತೀಯ ಹೊಲಕ ಹ್ವಾದಾsನೊ ಜೀನಾ ।
ಹತ್ತ್ ಖಂಡಗ ಹತ್ತೆಲ್ಲಾ ಬಂಜಿಯಾಯೀತಲ್ಲಾ ॥

ಗೋದೀಯ ಹೊಲಕ ಹ್ವಾದಾsನೊ ಜೀನಾ ।
ಹತ್ತ್ ಖಂಡ್ಗ ಗೋದೆಲ್ಲಾ ಜೊಳ್ಳಹಾಯಿತಲ್ಲ ॥

ಕಡ್ಲೀಯ ಹೊಲಕ ಹ್ವಾದಾsನೊ ಜೀನಾ ।
ಹತ್ತ್ ಖಂಡಗ್ಕಡ್ಲೆಲ್ಲಾ ಕೊಳ್ಳಿಹಾಯಿತಲ್ಲ ॥

*   *   *   *

ಕಂಬ್ಳೀಯ ಮುಸಕಾ ಹೊಡದಾನೊ ಜೀನಾ ।
ಜಗಲೀಗಿ ತಲಿಕೊಟ್ಟು ಮಲಗ್ಯಾನೊ ಜೀನಾ ॥

ಉಣ್ಣೀಲೊ ಜೀನಾ ತಿನ್ನೀಲೊ ಜೀನಾ ।
ಇನ್ನೇನ ಉಳ್ಳೀ ಇನ್ನೇನ ತಿಲ್ಲಿ ॥

ಹತ್ತ್ ಖಂಡಗ ಜ್ವಾಳೆಲ್ಲಾ ಬತ್ತ್ಗಾಡೀಗೆ ।
ಹತ್ತ್ ಖಂಡಗ ಹತ್ತೆಲ್ಲಾ ಬಂಜಿಯಾಯೀತಲ್ಲ ॥

ಹತ್ತ್ ಖಂಡಗ ಗೋದೆಲ್ಲಾ ಸೊಳ್ಳಹಾಯಿತಲ್ಲ ।
ಹತ್ತ್ ಖಂಡಗ ಕಡ್ಲೆಲ್ಲಾ ಕೊಳ್ಳಹಾಯ್ತಲ್ಲ ॥

ಮಂಗ್ಯಾನ ಹಾಡು

ಹುಬ್ಬಳ್ಳಿ ಶಾರ್‌ದೋಳು ಮಂಗ್ಯಾ ಬಾಜಾರದೊಳು ।
ಮಾಡಿದ್ದ ಆಟವ ನೋಡಿದ್ದೇನ
ಅಂಜಿ ಅಡ್ರಾಸಿ ಮುಂದಕ ಹೋಗಿದ್ದೇನ
ಹಂತಿಲಿದ್ದ ಮಂದೀನೆಲ್ಲ ದೂಡಿದ್ದೆನs ತಂಗಿ
ಛಪ್ಪರದಾಸ ಸಪ್ಪಳ ಕೇಳಿ ಛಪ್ಪನೆ ಓಡಿ ಬಂದು

ಚರ್‍ರಸೆ ಹರದಿತ್ತ ಛಂದಗೇಡಿ ಮಂಗ್ಯಾ। ಮಲ್ಲೀಗೆ
ದುಂಡಮಲ್ಲಿಗೆ ॥ ೧ ॥

ಅಂಗೂಡಿ ನ್ಯಾಕಳೀಗಿ ಅಳತಿಲ್ದೆ ಕೆಡಸಿತ್ತ
ರೊಕ್ಕಾದ ಚೀಲೊಂದಮುಚಿತ್ತವ್ವಾ
ತೆಕ್ಕಮಿಕ್ಕಿಲೆಡಬಲ ನೋಡಿದ್ದೆವ
ಗಂಡಗ ಲೆಕ್ಕವು ಏನಂತ ಹೇಳಲೆವ್ವಾ ತಂಗಿ
ದುಕ್ಕಾವ ಮಾಡೂತ ಸನಿಯಾಕ ಹ್ವಾದಾರ
ಚಿಕ್ಕಂದನಾಡೀತ ಛಂದಗೇಡಿ ಮಂಗ್ಯಾ। ಮಲ್ಲಿಂಗೆ....॥ ೨ ॥

ಅಕ್ಕಿಯ ಅಂಗಡ್ಯೊಂದು ಅಳವ ಮಾಡಿತ್ತವ್ವ
ಬಾಳಿ ಹಣ್ಣಿಗಿ ಬಾಯಿ ಹಾಕಿತ್ತವ್ವಾ
ಮಾವೀನ ಹಣ್ಣೊಂದು ಅಮುಚಿತ್ತವ್ವಾ
ಕಡ್ಲಿ ಕರದಂಟ ಕೈಯಾಗ ಹಿಡಿದಿತ್ತವ್ವಾ
ಅದು ಎಂಥ ಮಿಕ ನೋಡ ಇದು ಎಂಥ ಸುಖ ನೋಡ।
ಹುಬ್ಬಳ್ಳಿ ಶಾರಾ ಮಾಡ್ಯಾವ ಹಾಳಾ। ಮಲ್ಲೀಗೆ.... ॥ ೩ ॥

ಸಣ್ಣಾಸ ಹುಡಗರ ಕೈಯಾಗ ಬೆಣ್ಣೀ ರೊಟ್ಟಿ ಕೊಟ್ಟು
ಅವ್ವಾ ಅಣ್ಣಾನಂದು ಖಳವಿದ್ದೆವ
ರಾಮಣಗ ಮಾಸಲ ಹಿಡಿದಿದ್ದೆವ
ಬೆಣ್ಣಿ ರೊಟ್ಟಿ ಕಣ್ಣಿಲಿ ಕಂಡು ಕಸಗೊಂಡು ಓಡ್ಹೋಗಿ
ಮರನೇರಿ ನಿಂತಾವ ಮಾನ್ಗೇಡಿ ಮಂಗ್ಯಾ।
ಮಲ್ಲೀಗೆ.... ॥ ೪ ॥

ಅಡಗೀಯ ಮನೆಯೊಳು ಗಡನೇರಿ ನಾ ಹ್ವಾದ।
ತುಡಿಗೀಲಿ ಹಾಲ್ಕುಡಿದು ಹಾರೀ ಹ್ವಾದೀತವ್ವಾ
ಅಡಕಲ ಗಡಿಗಿ ವಡದ್ಹಾಳಮಾಡಿತವ್ವಾ
ಕಾಳಕಡಿಗೋಳು ಕೂಡಿಸಿಬಿಟ್ಟಿತ್ತವ್ವಾ
ತುಟ್ಟೀಯ ಕಾಲ್ದೊಳು ಎಷ್ಟಂತ ಹೇಳಸಲಿ

ಕೆಟ್ಟ ಮಂಗ್ಯಾನ ಸುಟ್ಟು ಮಣ್ಣಾಗಿಡಬಾರ್ದೆ ।
ಮಲ್ಲೀಗೆ.... ॥ ೫ ॥

ಹಪ್ಪಽಳ ಶಂಡೀಗಿ ಒಪ್ಪುಳ್ಳ ಉಗರಽತ ಭಪ್ಪರ ಮಾಲೊಣ
ಹಾಕಿದ್ದೇವ ।
ನೆರಮನಿ ತಿಪ್ಪವ್ವ ನೋಡಂತ ಹೇಳಿದ್ದೇನ ।
ಒಳಗ ತುಪ್ಪಽವ ಕಾಸಾಕ ಹೋಗಿದ್ದೇನ
ಸಪ್ಪಳಿಲ್ದೆ ಮಂಗ್ಯಾ ಬಂದು ಹಪ್ಪಽಳ ತಿಂದ್ಹೋಯ್ತು
ಭಪ್ಪರ ಖೆಡಿವ್ಹೋಯ್ತು ಚಂಡಾಳಿ ಮಂಗ್ಯಾ। ಮಲ್ಲೀಗೆ....॥ ೬ ॥

ಪಂಚಮಿ ಬಂತೆಂದ ಹಂಚಿಟ್ಟಳ್ಯಾ ಹುರಿದ
ಮುಂಚೆ ತಂಬಿಟ್ಟಾವ ಮಾಡಿದ್ದೇನ
ಎಳ್ಳುಂಡೀಯ ಸಾಹಿತ್ಯ ಮಾಡ್ದೇನ
ಗೋದಿ ಅಳ್ಳಿಟ್ಟಗಾಽಣವ ಕಾಸಿದ್ದೇನ
ಕಡ್ಲ್ಯುಂಡಿ ಕಟ್ಟಿಕೇರಿ ನೆಲಿನ ಮ್ಯಾಲ ಇಟ್ಟದ್ದ
ಬೆಳಿಖಿಂಡ್ಯಾಗ್ಹಾಸಿ ಎಳಕೊಂಡ್ವ್ಯಾದಾಽವ ।
ಮಲ್ಲೀಗೆ.... ॥ ೭ ॥

ಹಬ್ಬ ಬಂದೈಽತೆಂತ ಹೆಗ್ಗಲಿ ಹೂರಣಕಿಟ್ಟು
ಉಬ್ಬಿಲಿ ಹೂರಣಗಡಬ ಮಾಡಿದ್ದೆನ
ಉಂಡ ಉಲ್ಲಾಸಾಗಿ ಕುಂತಿದ್ದೆನ
ಕಂಡಮಂದಿನೆಲ್ಲಾ ನೋಡ್ಲ ಕ್ಹೋಗಿದ್ದೇನ
ಹಿಂಡ್‌ಮಂಗ್ಯಾ ಕೂಡಿಕೊಂಡು ಹಿತ್ತಲದಾಗ ಹಾದೀ ಮಾಡಿ
ಇದ್ದಾ ಸ್ಹೂರಣಗಡಬ ಎಳಕೊಂಡ್ಹೋದಾವ ।
ಮಲ್ಲೀಗೆ.... ॥೮॥

ವಾರಿಂಗಿ ಗೆಳೆದಾರು ನೂಲಕ್ಕ ಬಂದಾರ
ನಡುವ ನನ್ನ ಹಾಸ ಇಟ್ಟದ್ದೆನವ್ವಾ
ಛುಕಡಿ ಕವಪ್ ಬಿದ್ದಾರೆ ತರಪ್ಪಾದೆಸವ್ವಾ

ಹೊಯ್ದಂತ ಏಳ್ಬಂಜ ಕೊರಳಿಗಿ ಹಾಯ್ಕೊಂಡು
ಮರನೇರಿ ಕುಂತಾದ ನೋಡ ನೀಲವ್ವಾ।
ಮಲ್ಲೀಗೆ.... ॥ ೯ ॥

ಊರಾಗ ಗೌಡರ ಮದವಿ ಆಗತಾದ
ಸನಾಯಿ ಸಂಬಳ ತರಸಿದ್ದರವರು
ತೇಗಿಟ್ಟು ಎಲಿಅಡಕಿ ಮೆಲಿತಿದ್ದರವರು
ಬಡಿವಂಥ ಸಂಬಾಳ ಕೊರಳಿಗಿ ಹಾಯ್ಕೊಂಡು
ಮರನೇರಿ ಕುಂತಾದ ನೋಡ ಗಂಗವ್ವಾ। ಮಲ್ಲೀಗೆ....॥೧೦॥

ಹಿಂಡಕೋಳುದು ಬಿಟ್ಟು ಹಾಲ ಕಾಸುದು ಬಿಟ್ಟು
ತೆಪ್ಪಿದಂತ ಸುಡಿಗೋಳು ಒಳಕೂವಳ
ಅಕಿ ಯಾಕಿಯಾಕಿಯಾಕ ಹೇಳುವಳ
ಹತ್ತೇಟ ಸುಡಿಗೋಳ ನೆಪ್ಪಿಟ್ಟು ಕಲಸ್ಯಾಳ
ಅಕಿ ಹಲಸೀಗಿ ಹರದಿ ನಿಂಗವ್ವಾ। ಮಲ್ಲೀಗೆ.... ॥ ೧೧ ॥

ಟೀಕೆ-ಟಿಪ್ಪಣಿಗಳು

ದೇವತಾಸ್ತುತಿ

ಸಾಹಿತ್ಯಕ್ಕೆ ನಮ್ಮ ಗ್ರಹಿಕೆ ಅಥವಾ ಶ್ರದ್ಧೆ ಅನುಕೂಲವಾಗಿದ್ದರೆ ಮಾತ್ರ ರಸೋತ್ಪತ್ತಿಯಾಗಬಲ್ಲುದು. ಶ್ರದ್ಧೆ ಮತ್ತು ರುಚಿ ಇವು ಒಂದನ್ನೊಂದು ಅತಿಶಯವಾಗಿ ಅವಲಂಬಿಸಿವೆ. ಆದುದರಿಂದ ಯಾವುದೊಂದು ಹೊಸ ಸಾಹಿತ್ಯವನ್ನು ಅವಲೋಕಿಸಬೇಕಾದರೆ ನಾವು ನಮ್ಮ ಪೂರ್ವ ಗ್ರಹಿಕೆಗಳನ್ನು ಆದೊಂದು ಗಳಿಗೆಯ ಮಟ್ಟಿಗೆ ಬದಿಗಿರಿಸಿ, ಸಾಹಿತಿಯ ಹೃದಯದಲ್ಲಿ ಹೊಕ್ಕು ಅವನೇ ನಾವಾಗಿ ಅವನ ದೃಷ್ಟಿಯಿಂದ ಆತನ ಕೃತಿಯನ್ನು ನಿರೀಕ್ಷಿಸಬೇಕಾಗುವುದು ಎಂದರೆ ಮಾತ್ರ ರಸಾಸ್ವಾದನವು ಲಭಿಸಬಲ್ಲುದು.

ಈ ಮೊದಲನೆಯ ವಿಭಾಗದೊಳಗಿನ ವಿವಿಧ ದೇವತಾಸ್ತೋತ್ರಗಳು ತರ್ಕದ ನೆರಳು ಮುಟ್ಟದ ಸರಳ ಸ್ವಭಾವದ ಸಾಮಾನ್ಯ ನಾರಿಯರ ಹೃದಯದಿಂದ ಹೊರಹೊಮ್ಮಿದವುಗಳು. ನಾವು ಅವರ ದೃಷ್ಟಿಯಿಂದ ಇವುಗಳನ್ನು ಹಾಡಿಕೊಂಡರೆ ಅವರಂತೆ ಒಂದು ಗಳಿಗೆ ನಾವೂ ಅನಿರ್ವಚನೀಯ ಭಕ್ತಿಭರದಿಂದ ಬಾಗದಿರಲಾರೆವು.

ಇದೀಗಿನದು ಸಮನ್ವಯ ಯುಗವು. ವಿಭೇದದಲ್ಲಿ ಅಭೇದವನ್ನು ಕಂಡುಕೊಳ್ಳುವುದಕ್ಕೆ ಈಗ ಮಾನವರ ಮನವು ಹಾತೊರೆಯುತ್ತಿದೆ. ಇದನ್ನು ನಾವು ಕಂಡುಕೊಳ್ಳುವುದಕ್ಕೆ ಎರಡೆಂದರೆ ಎರಡೇ ಸ್ಥಾನಗಳಿವೆಯೆಂದು ಹೇಳಬಹುದು. ಒಂದು ಋಷಿಜೀವನ, ಇನ್ನೊಂದು ಸಾಮಾನ್ಯ ಜೀವನ. ಐಕ್ಯವಿರುವುದು ಇವೆರಡೇ ಕಡೆಯಲ್ಲಿ. ವರ್ತಮಾನಕಾಲದಲ್ಲಿ ಋಷಿಜೀವನವು ಇನ್ನೂ ಈಗ ಎಲ್ಲೋ ರೂಪುಗೊಳ್ಳುತ್ತಾ ಇದೆ. ಆದುದರಿಂದ ಅದು ಬಹುಜನರ ಅವಲೋಕನಕ್ಕೆ ಸಿಗುವುದು ಸದ್ಯಕ್ಕೆ ಬಹು ದುರ್ಲಭ. ಆದ್ದರಿಂದ ಹೃದಯ ಪ್ರಧಾನರಾದ ಸಾಮಾನ್ಯ ಸರಲಜೀವಿಗಳಲ್ಲಿ ಜೀವನದ ಆ ದಿವ್ಯ ಸೂತ್ರವನ್ನು ನಾವು ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಮಹರ್ಷಿ "ಟಾಲ್‌ಸ್ಟಾಯ"ರ 'ಆತ್ಮನಿವೇದನ' ಎಂಬ ಪುಸ್ತಕದಲ್ಲಿ ಈ ಮಾತಿನ ಸಮ

ರ್ಥನವು ಸಂಪೂರ್ಣವಾಗಿ ಇದೆ. ಹೀಗೆಂದರೆ ನಾವೆಲ್ಲರೂ ಈಗ ಸಾಮಾನ್ಯ ರಾಗಬೇಕೆಂದು ನನ್ನ ಅರ್ಥವಲ್ಲ. "ಶಿಶುಗಳಂತಾಗದೆ ನಿಮಗೆ ದೇವನ ಸನ್ನಿಧಿಯಲ್ಲಿ ಸ್ಥಳವು ಸಿಕ್ಕದು" ಎಂದು ಉಸುರಿದ ಪುರಾತನ ಮಹಾಪುರುಷರ ವಾಣಿಯ ಅರ್ಥದ ಕಡೆಗೆ ನಮ್ಮ ಲಕ್ಷ್ಯವು ಹೊರಳಬೇಕೆಂಬುದಿಷ್ಟೇ ನನ್ನ ಇಚ್ಛೆ.

ಅರ್ಥವಿಲ್ಲದೆ ಹಳೆಯದೆಲ್ಲಾ ಒಳ್ಳೇದೆನ್ನುವವರು ಕೆಲವರು. ಹಳೆಯದೆಲ್ಲಾ ಜೊಳ್ಳು ಎನ್ನುವವರು ಇನ್ನು ಕೆಲವರು. ಒಮ್ಮೆ ಜೊಳ್ಳೆಂದು ಒಗೆದು ಮರಳಿ ಬಹುಕಾಲದ ಮನಸದಿಂದ ಮತ್ತೆ ಹಳೆಯದನ್ನು ಬಲವಾಗಿ ಅಂಟಿಕೊಳ್ಳುವವರು ಬೇರೆ ಕೆಲವರು. ಆದರೆ ನಾವೀಗ ಈ ಮೂರು ಮೆಟ್ಟಲುಗಳನ್ನು ದಾಟಿ ಹಳೆಯದರೊಳಗಿನ ಸತ್ಯದ ಬೀಜಗಳನ್ನು ಆರಿಸಿಕೊಂಡು ಪುನಃ ಹೊಸ ಭೂಮಿಯಲ್ಲಿ ಬಿತ್ತಿ ಹೊಸ ಬೆಳೆಯನ್ನು ಮಾಡಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ನಾವು ಈ ಹಾಡುಗಳೊಳಗಿನ ಐಕ್ಯದ ಸತ್ಯ ಬೀಜವನ್ನು ಆರಿಸಿಕೊಂಡು ಮುಂದಿನ ಹೊಸ ಸಂಸ್ಕೃತಿಯ ಸಾಗುವಳಿಯ ಕಡೆಗೆ ಹೊರಳಬೇಕಾಗಿದೆ.

ಸಾಮಾನ್ಯ ಜನರ ಹೃದಯದಲ್ಲಿ ಜಾತಿಭೇದ, ದೇವತಾಭೇದಗಳ ಕಲ್ಪನೆಯು ಇಲ್ಲವೆ ಇಲ್ಲವೆಂದರೂ ನಡೆಯುವುದು. ಅವರು ಭೇದವನ್ನು ಜನರೂಢಿ ಇಲ್ಲವೆ ಹಿರಿಯರ ಆಜ್ಞೆಯಿಂದು ಪಾಲಿಸುವರೇ ವಿನಾ ಅಂತಃಕರಣದಲ್ಲಿ ಅದಕ್ಕೆ ಅವರು ಸ್ಥಳವನ್ನೇ ಕೊಟ್ಟಿರುವುದಿಲ್ಲ. ಆ ಸ್ವಾಭಾವಿಕ ಐಕ್ಯಕ್ಕೆ ಎರವಾದವರೆಂದರೆ ಹೆಚ್ಚಿನವರೆನಿಸಿಕೊಳ್ಳುವವರೆ.

ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಶಿಷ್ಟ ದೇವತಾಸ್ಥಾನವು ಪ್ರಖ್ಯಾತವಾಗಿರುತ್ತದಷ್ಟೆ. ಆಯಾ ಪ್ರದೇಶದೊಳಗಿನ ಬಹು ಸಾಮಾನ್ಯರೆಲ್ಲ ಯಾವ ಭೇದವನ್ನೂ ಎಣಿಸದೆ ಆ ಪವಿತ್ರಸ್ಥಾನದ ಮಹಿಮೆಯನ್ನು ಕೊಂಡಾಡುವುದರಲ್ಲಿ ಮಗ್ನರಾಗಿರುತ್ತಾರೆ. ಇಂತಹ ಬೇರೆ ಬೇರೆ ಪ್ರದೇಶಗಳ ನಾಲ್ಕೈದು ಹಾಡುಗಳನ್ನು ನಾವಿಲ್ಲಿ ಸಂಗ್ರಹಿಸಿದ್ದೇವೆ. ಅವುಗಳಲ್ಲಿ ಪ್ರತಿಯೊಂದೂ ಅಷ್ಟೇ ಓಜಸ್ಸುಳ್ಳವಾಗಿವೆ.

ಗಣಪತಿಯ ಸ್ತೋತ್ರ

ಈ ಹಾಡಿನ ಮೊದಲನೆಯ ನುಡಿಯಲ್ಲಿ ಪೂಜೆಯ ಪರಿಯೂ ಮುಂದಿನ ಮೂರು ನುಡಿಗಳಲ್ಲಿ ನೈವೇದ್ಯದ ವಿಸ್ತಾರವೂ ವರ್ಣಿಸಲ್ಪಟ್ಟಿವೆ. ಕೊನೆಯ ನುಡಿಯು ಸಾಂಪ್ರದಾಯಿಕವಾಗಿದೆ.

ಛಂದಸ್ಸು:— ಐದೈದು ಮಾತ್ರೆಯ ಗಣಗಳಿವೆ. ಮೊದಲನೆಯ ನುಡಿಯಲ್ಲಿ ಒಂದು ದೊಡ್ಡ ಚರಣವು ಹೆಚ್ಚಿಗೆ ಬಿದ್ದಿದೆ.

ಶಬ್ದಪ್ರಯೋಗಗಳು:— ಸಾಜ=ಶೃಂಗಾರ. ಸೆಳೆಮಂಚ=ತೂಗುಮಣೆ. ಸೋಬಸ್ತ=ಶೋಭಿಸುತ್ತ. ಏರಸ್ತ=ಏರಿಸುತ್ತೇನೆ. ಥೊರಿಪೂಜಿ=ವೈಭವದ ಪೂಜೆ. ಸೆಂಡಗಿ, ಹಪ್ಪಳ, ಶಾಂವಗಿ, ಚಿಗುಳಿ ಇವು ಭೋಜನದ ಪದಾರ್ಥಗಳು. ಚಿನ್ನಾಲ್ ಮತ್ತು ಬಚ್ಚೀವ ಎಂಬವುಗಳೂ ಅವೇ. ಆದರೆ ಇವೆರಡರ ಸರಿಯಾದ ಕಲ್ಪನೆ ಮಾತ್ರ ಬರುವಂತಿಲ್ಲ.

"ಚಿಟುಬಾಳಿ ಅಗಲೋಳು ಗರಿ ಕಾಣೆನ" ಎಂದರೆ ಕಿರಿಬಾಳೆಯ ಎಲೆಯ ಮೇಲೆ ಎಡೆಬಡಿಸಿದ ಸಾಮಗ್ರಿಗಳು, ಎಲೆಯ ನಡುವಿನ ಗರಿ ಕಾಣದಷ್ಟು ತುಂಬಿದ್ದವೆಂದು ಅರ್ಥ.

ಈ ಹಾಡು ಪಾಂಚಾಲ ಜಾತಿಯವರಲ್ಲಿ ಪ್ರಚಾರವುಳ್ಳದ್ದಾಗಿರುವುದರಿಂದ ಅವರ ಆರಾಧ್ಯದೈವತವಾದ ಕಾಲೀದೇವಿಯ ಉಲ್ಲೇಖವು ಕೊನೆಯ ನುಡಿಯಲ್ಲಿದೆ.

ಸೊಲ್ಲಾಪುರದ ಸಿದ್ಧರಾಮೇಶ್ವರ ಸ್ತೋತ್ರ

ಮೊದಲನೆಯ ನುಡಿಯಲ್ಲಿ ಭಕ್ತಳು ಬೆಳಗಿನ ಕುರುಹುಗಳನ್ನು ಕಾಣುತ್ತಾಳೆ. ಎರಡನೆಯ ಮತ್ತು ಮೂರನೆಯ ನುಡಿಗಳಲ್ಲಿ ಅವಳು ಪೂಜೆಗಾಗಿ ಅತ್ತಿಯ ಹಣ್ಣುಗಳನ್ನೂ ಆಲದ ಎಲೆಗಳನ್ನೂ ದೊರಕಿಸುವುದಕ್ಕೆ ತಾನು ಪಟ್ಟ ಶ್ರಮವನ್ನು ಬಣ್ಣಿಸಿರುವಳಲ್ಲದೆ ದೇವರ ಅಲಂಕಾರಗಳನ್ನೂ ಸೂಚಿಸಿದ್ದಾಳೆ. ನಾಲ್ಕನೆಯ ನುಡಿಯಲ್ಲಿ ವಿಧವಿಧದ ಪೂಜೆ, ಐದನೆಯದರಲ್ಲಿ ಗಂಧದ

ಶೃಂಗಾರ, ಆರನೆಯದರಲ್ಲಿ ಹೂವಿನ ಶೃಂಗಾರ, ಏಳನೆಯದರಲ್ಲಿ ನೈವೇದ್ಯ ಇವುಗಳ ವರ್ಣನೆಯಿದೆ. ಎಂಟನೆಯದರಲ್ಲಿ ವಾದ್ಯಘೋಷ, ಒಂಬತ್ತನೆಯದರಲ್ಲಿ ಭಕ್ತೆಯರ ಗಡಣ ಮುಂತಾದ ವಿಷಯಗಳಿವೆ. ಮುಂದಿನ ಮೂರು ನುಡಿಗಳಲ್ಲಿ ಸೊಲ್ಲಾಪುರ ಜಾತ್ರೆಯ ಕಾಲದ ಮೂರು ದಿನಗಳ ವಿವಿಧ ಉತ್ಸವಗಳ ವರ್ಣನೆಯಿದೆ. ಕೊನೆಯ ಎರಡು ನುಡಿಗಳಲ್ಲಿ ಸಿದ್ಧರಾಮೇಶ್ವರನ ಹಾಗೂ ಅವನ ಆರಾಧ್ಯದೈವತಗಳ ಬೇರೆ ಬೇರೆ ಗುಡಿಗಳ ಉಲ್ಲೇಖವಿದೆ

ಛಂದಸ್ಸು:—ಮೂರು ಮೂರು ಮಾತ್ರೆಯ ಗಣಗಳಿವೆ ಆದರೆ ಪ್ರತಿಯೊಂದು ಚರಣದ ಸಮಸ್ಥಾನದ ಗಣಗಳನ್ನು ನಾಲ್ಕು ಮಾತ್ರೆಗಳಾಗಿ ಉಚ್ಚರಿಸುವಂತೆ ತೋರುತ್ತದೆ

ಶಬ್ದಪ್ರಯೋಗಗಳು:—ಹೆಡಿಯಂಗ=ಹೆಡೆಯಂತೆ ಆಡ್ಯಾವ=ಆಡಿದವು ವಸ್ತ್ರ=ಆಭರಣ ಆಲಪರದು-ಆತುರಪಟ್ಟು ಕಟ್ಟ್ಯಾರ=ಕಟ್ಟಿಹರು ಏರ್ಯಾವ=ಏರಿಹವು ನೇವುದಿ=ನೈವೇದ್ಯ. ಚಿಗಳಿ=ಎಳ್ಳುಬೆಲ್ಲದ ಮುದ್ದೆ. ಬಾಜಿ=ವಾದ್ಯ ಹರದ್ಯಾರು=ನಾರಿಯರು. ಆದರೆ ಹರದಿ ಎಂಬ ಶಬ್ದಕ್ಕೆ ವಾಸ್ತವಿಕವಾಗಿ ವ್ಯಾಪಾರಗಿತ್ತಿ ಎಂದು ಅರ್ಥವಾಗುತ್ತದೆ. ನಾವು ಈ ಶಬ್ದಕ್ಕೆ ಸುಂದರಿ ಇಲ್ಲವೆ ಮನ್ನಣೆಯವಳು ಎಂದು ಅರ್ಥಮಾಡಿಕೊಳ್ಳಬಹುದು. ಸಮುತಿ-ಪುರಾಣ ಹೇಳುವ ಸಮಿತಿ. ಸಂಕರಾತರಿ=ಮಕರ ಸಂಕ್ರಾಂತಿ. ಭೋಗಿ=ಸಂಕ್ರಾಂತಿಯ ಮುನ್ನಾದಿನ ಕರಿ=ಸಂಕ್ರಾಂತಿಯ ಮರುದಿನ ನಾಚ=ನೃತ್ಯ. ಟೆಂಗ=ತೆಂಗು ಖಾರೀಕ=ಉತ್ತತ್ತಿ. ಕಮರತಳಿ=ಸೊಲ್ಲಾಪುರದ ಒಂದು ಕೆರೆ. ಗಂಗಿ=ಸಿದ್ಧರಾಮೇಶ್ವರನ ಗುಡಿಯ ಸುತ್ತುಮುತ್ತಲಿನ ಕೊಳ.

ಪಂಢರಪುರದ ವಿಠೋಬನ ಸ್ತೋತ್ರ

ಮೊದಲನೆಯ ನುಡಿಯಲ್ಲಿ ಮೂರ್ತಿಯ ಅಲಂಕಾರವರ್ಣನೆ, ಎರಡನೆಯದರಲ್ಲಿ ಗುಡಿಯೊಳಗಿನ ಭಜನೆಯ ಮೇಳದ ವರ್ಣನೆ, ಮೂರನೆಯದರಲ್ಲಿ ಕ್ಷೇತ್ರ ವರ್ಣನೆ, ನಾಲ್ಕನೆಯದರಲ್ಲಿ ಭಕ್ತೆಯ ಬಯಕೆ, ಹೀಗೆ ಕ್ರಮವಿದೆ.

ಛಂದಸ್ಸು:—ಮೂರು ಮೂರು ಮಾತ್ರೆಯ ಗಣಗಳಿವೆ. ಉತ್ಸಾಹ ರಗಳೆ.

ಶಬ್ದ ಪ್ರಯೋಗಗಳು:—ಇಟ್ಟಗಿ=ಇಟ್ಟಂಗಿ. ನಿಂತಾನ-ನಿಂತಿದ್ದಾನೆ. ಮಂದೀಲ=ಮುಂಡಾಸ. ಗೋಮು=ಪವಿತ್ರ?. ಟೊಂಕ=ಸೊಂಟ. ಹೃದಯದಲ್ಲಿ ಲಕ್ಷ್ಮಿ ಪೆಟ್ಟು=ದೇವರಾಯನ ಎದೆಗೆ ಆತನ ಸತಿಯಾದ ಶ್ರೀಲಕ್ಷ್ಮಿಯು ಬಲವಾದ ಏಟು ಕೊಟ್ಟಿದ್ದಾಳೆ ಎಂದು ಒಂದು ಪೌರಾಣಿಕ ಕಥೆ. ಮಾಳಿ=ಮಾಲೆ. ಬುಕ್ಕಿಟ್ಟು=ಕಪ್ಪು ಗಂಧದ ಪುಡಿ. ಔಂದೇಅಂಸ=ಅವನದೇ ವಂಶ. ಭಜನೆಗೋಳು=ಭಜನೆಗಳು. ಲಿಂಗಾಕಾರ=ಲಿಂಗದಾಕಾರ. ಟಿಳಕಬಟ್ಟು=ತಿಲಕದ ಬೊಟ್ಟು. ಪುಂಡಲೀಕ=ವಿಠ್ಠಲರಾಯನ ಒಬ್ಬ ಮಹಾಭಕ್ತ. ಬೌದ್ಧ್ಯರೂಪ=ವಿಠೋಬನು ಬೌದ್ಧಾವತಾರನೆಂದು ಜನರೂಢಿ.

ಎಡವೂರ ವೀರಭದ್ರನ ಸ್ತೋತ್ರ

ಮೊದಲನೆಯ ಪದ್ಯದಲ್ಲಿ ಛತ್ರಚಾಮರಾದಿಗಳ ವರ್ಣನೆ. ಎರಡನೆಯ ಮೂರನೆಯ ಪದ್ಯಗಳಲ್ಲಿ ಮೂರ್ತಿಯ ವಿಶಿಷ್ಟ ಶೃಂಗಾರ. ನಾಲ್ಕನೆಯದರಲ್ಲಿ ವಿವಿಧ ಪತ್ರಪುಷ್ಪಗಳ ವರ್ಣನೆ. ಐದನೆಯದರಲ್ಲಿ ವಾದ್ಯವಿವರಣೆ.

ಛಂದಸ್ಸು:— ಐದೈದು ಮಾತ್ರೆಯ ಗಣಗಳಿವೆ. ಇದು ಲಲಿತ ರಗಳೆ.

ಶಬ್ದ ಪ್ರಯೋಗಗಳು:— ಎಡವೂರ=ಬೆಳಗಾಂವಿ ಜಿಲ್ಹೆಯಲ್ಲಿಯ ಒಂದು ಊರು. ತಳ=ಸ್ಥಳ. ಗುಗ್ಗಳ= ಶೃಂಗರಿಸಿದ ಮಣ್ಣಿನ ಪಾತ್ರೆಯಲ್ಲಿ ಉರಿಯುವ ದೀವಟಿಗೆ. ಅಬತಾಗಿರಿ=ಒಂದು ಬಗೆಯ ಛತ್ತರಿಕೆ. ಶರಣಬಂದು=ನಮಿಸಿ ಬಂದು. ಕರಣ=ವಿವಿಧ ಶೃಂಗಾರ (?). ಪೂಜಿಗೋಳ ಬನ್ನಿ=ಪೂಜೆಮಾಡೋಣ ಬನ್ನಿರೆ. ಚಿಳ್ಳುಂಗ್ರ=ಕಾಲಬೆರಳಿನ ಒಂದು ಬಗೆಯ ಉಂಗುರ. ಕ್ವಾರ್ಮೀಶಿ=ಕೋರೆ ಮೀಸಿ. ಕರಿ=ಕಪ್ಪು. ನೆನದಾನ=ತಳವೂರಿ ನಿಂತಿದ್ದಾನೆ. ತುಂಗಭದ್ರಿ ಕಾಳಿ=ಉಪದೇವತೆಗಳು. ವಾಲಗ=ಉತ್ಸವದ ಓಲಗ. ಚಿಟ್ಟ=ಚಿಕ್ಕ. ಸಮುದುರದಾನ=ಸಮುದ್ರದೊಳಗಿನ. ಬೆಲ್ಲಪತ್ತುರಿ=ಬಿಲ್ವಪತ್ರ. ನೆಪೇರಿ=ತುತೂರಿ. ಸಾತರ ಮ್ಯಾಳ=ವೇಶ್ಯೆಯರ ಮೇಳ.

ಪ್ರ ಣ ಯಾ ಂ ತ ರ

ಪ್ರಣಯವು ಜೀವನದ ಒಂದು ಅತಿಮಹತ್ವದ ಭಾಗವಾಗಿದೆಯೆಂಬುದು ನಿರ್ವಿವಾದವಾದ ಮಾತು. ಈಚೆಗೆ ಜಗತ್ತು ಈ ವಿಷಯದಲ್ಲಿ ಬಹಳವಾಗಿ ಲಕ್ಷ್ಯವನ್ನು ಪೂರಯಿಸುತ್ತಿರುವುದು. ಈ ಬಗೆಗೆ ಈಗ ನಡೆದಿರುವ ಘನವಾದ ವಿಚಾರಪ್ರವಾಹವನ್ನು ನೋಡಿದರೆ ಪ್ರಣಯದ ಮೇಲಿನ ಇಂದಿನ ಕಟ್ಟುನಿಟ್ಟಾದ ಬಂಧನಗಳೆಷ್ಟೋ ಇನ್ನು ಮುಂದೆ ಸಡಿಲಬಹುದಾಗಿ ಕಂಡರೂ ಪ್ರಣಯಾಂತರದ ಕೋಪವು ಮಾಯವಾದೀತೋ ಇಲ್ಲವೋ ಎಂಬುದು ಸಂದೇಹದ ಮಾತೇ ಆಗಿದೆ. ಏಕೆಂದರೆ ಈ ಕೋಪವು ನಾವು ತಿಳಿದುಕೊಂಡಿರುವಂತೆ ಕೇವಲ ಸಾಮಾಜಿಕವಾಗಲಿ, ಬೌದ್ಧಿಕವಾಗಲಿ ಆಗಿರದೆ ಅದು ಜೀವದ ಅತ್ಯಂತ ಆಳವಾದ ಹೃದಯನೆಂಬ ಪ್ರದೇಶಕ್ಕೆ ಸಂಬಂಧಿಸಿದುದಾಗಿದೆ ಎಂದು ಎನಿಸುತ್ತದೆ. ಪ್ರಣಯದ ಮಾತಂತೂ ಒತ್ತಟ್ಟಿಗಿರಲಿ, ಆದರೆ ಗೆಳೆತನದ ಆಳವಾದ ಪ್ರೇಮದಲ್ಲಿ ಕೂಡ ಈ ಮಾತು ಅನುಭವಕ್ಕೆ ಬರುತ್ತದೆ. ತನ್ನ ಅಕ್ಕರತೆಯ ಗೆಳೆಯನು ಇನ್ನೊಬ್ಬನೊಡನೆ ತನಗಿಂತ ಹೆಚ್ಚಿನ ಪ್ರೀತಿಯನ್ನು ತೋರಿಸುತ್ತಿದ್ದಾನೆಂದು ಎನಿಸಿದರೆ, ಈತನ ಹೃದಯದಲ್ಲಿ ಅತುಲನೀಯವಾದ ಸಂಕಟವೇಳುವುದುಂಟು. ಹೀಗೆಂದ ಮೇಲೆ ಪ್ರೇಮದ್ದೇ ಇನ್ನೊಂದು ಸ್ವರೂಪವಾದ ಪ್ರಣಯಕ್ಕೆ ಈ ಮಾತು ಹೇಗೆ ಸಂಬಂಧಿಸದೆ ಇದ್ದೀತೆಂಬುದೇ ಇಂದು ಊಹಿಸಲಶಕ್ಯವಾಗಿದೆ.

ಇದೀಗ ನಾವು ಪ್ರಣಯಾಂತರವೆಂಬ ವಿಭಾಗದಲ್ಲಿ ಸಂಗ್ರಹಿಸಿದ ಹಾಡುಗಳು ಆರು. ಇವುಗಳಲ್ಲಿ ಕೊನೆಯದಾದ ಪಾರ್ವತಿಯ ಪರಿತಾಪದ ಹಾಡು ಮೇಲ್ಕಂಡ ನಮ್ಮ ಮಾತನ್ನು ಬಲವಾಗಿ ಸಮರ್ಥಿಸುವಂತಿದೆ. ತಮ್ಮ ಪ್ರಿಯ ವ್ಯಕ್ತಿಯು ಕೇವಲ ತಮ್ಮೊಬ್ಬರ ಪಾಲಿಗೇ ಸಂಪೂರ್ಣವಾಗಿ ಉಳಿದು ಇರಬೇಕೆಂಬ ಅಂತರಂಗದ ಆಸೆಯು ಬಹು ಪ್ರಬಲವಾಗಿರುತ್ತದೆ ಎಂಬುದು ಅನುಭವದ ಹೊರಗಿನ ಮಾತೇನೂ ಅಲ್ಲ.

ಪ್ರಣಯಾಂತರದ ಮುನಿಸಿಗೆ ಸಾಹಿತ್ಯ ಶಾಸ್ತ್ರದಲ್ಲಿ ಮತ್ತು ಬಂಗಾಲದ ಭಕ್ತಿಶಾಸ್ತ್ರದಲ್ಲಿ "ಮಾನ'ವೆಂದು ಹೆಸರಿಡಲಾಗಿದೆ. 'ಗೀತಗೋವಿಂದ'ದಲ್ಲಿ ಈ ಮಾತಿಗೆ ಸಾಕಷ್ಟು ಉದಾಹರಣೆಗಳಿವೆ.

ಪ್ರಣಯಾಂತರದ ಕುಶಲಪ್ರಶ್ನೋತ್ತರಗಳು ರಸಿಕರ ಚಿತ್ತವನ್ನು ರಂಜಿಸುವುದರಲ್ಲಿ ಮಿಗಿಲಾದವುಗಳು. ಪ್ರಣಯಿಗಳಲ್ಲಿ ಆರೋಪಿತವ್ಯಕ್ತಿಯು ತನ್ನ ಅವ್ಯಭಿಚಾರಿತ್ವವನ್ನು ಎಷ್ಟು ಸಮರ್ಥನಗೊಳಿಸಿದರೂ ಆರೋಪಕನಿಗೆ ನಿಸ್ಸಂದೇಹವುಂಟಾಗದಿರಲು ಕೊನೆಗೆ ಸತ್ಯವಂತಿಕೆಯ ಕೋಪ. ಆರೋಪಕ ವ್ಯಕ್ತಿಯ ಕೋಪವು ವಿಚ್ಛೇದಕರವಾದರೆ ಆರೋಪಿತ ವ್ಯಕ್ತಿಯ ರೋಷವು ಸಂಯೋಗಕರವಾಗಿರುತ್ತದೆ. ಶಾಕುಂತಳದಲ್ಲಿ ನಾಯಕನ ಸಂದೇಹಗಳಿಗೆಲ್ಲ ಉತ್ತರ ಹೇಳಿ ಬೇಸತ್ತ ನಾಯಿಕೆಯು ಕೊನೆಗೆ ಮುನಿಸಿನಿಂದ 'ಅನಾರ್ಯ' ಎಂದು ಸಂಬೋಧಿಸಿದಾಗಲೆ ಆತನಲ್ಲಿ ತುಸುವಾದರೂ ವಿವೇಕವು ಹುಟ್ಟುತ್ತದೆಯಲ್ಲವೇ?

ನಾನು ಮೊದಲಿಗೆ ಹೇಳಿದ ಕೋಪದ ಜಾತಿಯೂ ಇದೂ ಭಿನ್ನವಾಗಿವೆ. ಈ ಹಾಡುಗಳೊಳಗಿನ ರೋಷವು ರಸಪೋಷಕವಾಗಿದೆ.

'ನಾರಿ ರುಮ್ಮಾಲ ಸುತ್ತಿ'

ಮಗಳನ್ನು ತನ್ನ ತಮ್ಮನಿಗೆ ಮದುವೆಮಾಡಿಕೊಟ್ಟ ಒಬ್ಬ ಅಕ್ಕ ಹೇಳುವ ಹಾಡಿದು. ತಮ್ಮನು ತನ್ನ ಮಡದಿಯನ್ನು ಬಿಟ್ಟಿದ್ದಾನೆ. ಸೂಳಿಗೇರಿಯಲ್ಲಿ ಆತನು ಸುಳಿದಾಡುತ್ತಿರುವುದನ್ನು ನೋಡಿ ಅಕ್ಕನು ಆಡುವ ಮಾತುಗಳು ಮೊದಲಿನ ಎರಡು ನುಡಿಗಳಲ್ಲಿವೆ. ಮುಂದಿನ ಎರಡು ನುಡಿಗಳಲ್ಲಿ ತನ್ನ ಮಗಳ ಕೋಮಲತೆ ಮತ್ತು ಪವಿತ್ರತೆ ಇವುಗಳನ್ನು ಕೊಂಡಾಡಿ ಪರ್ಯಾದಿಂದ ಅವನ ದುರ್ದೈವವನ್ನು ಹಳಿಯುವಳು. ಆ ಮೇಲೆ ಅವಳಿಗೆ ಅಲ್ಲಿ ಆತನ ಸುಳಿದಾಟದ ಕಾರಣವು ಬೇರೆಯಾಗಿ ತೋರುವುದು. ಆತನು ತನ್ನ ಹೆಂಡತಿಯು ಕೆಟ್ಟಿರಬಹುದೇನೆಂದು ಪರೀಕ್ಷಿಸಲಿಕ್ಕೆ ಹಾಗೆ ಸುಳಿಯುತ್ತಿದ್ದಾನೆಂದು ಎನಿಸಿ, ಅವಳು ಮುಂದಿನ ಎರಡು ನುಡಿಗಳಲ್ಲಿ "ಬಿಟ್ಟವಳ ಮೇಲೆ

ಮತ್ತೆ ನಿನ್ನ ಲಕ್ಷ್ಯವೇಕೆ?" ಎಂದು ಅವನನ್ನು ಕುರಿತು ಆಡಿಕೊಳ್ಳುವಳು. ಅದರ ಮುಂದಿನ ಎರಡು ನುಡಿಗಳಲ್ಲಿ ಅವನಿಗೆ ಅಣಕವನ್ನಾಡಿ ತನ್ನ ಮಗಳ ಶುದ್ಧತೆಯನ್ನು ಬಿಂಕದಿಂದ ಪ್ರಶಂಸಿಸುವಳು. ಕೊನೆಯ ಎರಡು ನುಡಿಗಳಲ್ಲಿ ಅಕ್ಕರತೆಯಿಂದ ಜೋಪಾನ ಮಾಡಿದ ತನ್ನ ಮಗಳ ದುರವಸ್ಥೆಯಿಂದ ಪರಿತಾಪ ಪಡುವಳು.

ಛಂದಸ್ಸು:—ತ್ರಿಪದಿಯೇ.

ಶಬ್ದಪ್ರಯೋಗಗಳು:— ವಾರಿ=ಸೊಟ್ಟ. ಹ್ವಾರೆ=ಉದ್ಯೋಗ. ಕಟ್ಟಿ ಕಲ್ಲಾಗಿ ಇರಹೋಗು=ಸೂಳೆಯರ ಮನೆಯ ಮೆಟ್ಟಿಲುಗಳ ಕಲ್ಲಾಗಿ ಅವರ ಪಾದತಾಡನದ ಸುಖವನ್ನು ಉಣ್ಣು ಹೋಗು. ಅಲ್ಲಿಟ್ಟ ಇಲ್ಲಿಟ್ಟ=ಹೂವಿನಂತಹ ಮಗಳನ್ನು ಪರಿಪರಿಯಿಂದ ಎತ್ತಿ ಮುದ್ದಾಡಿ ಜೋಪಾನಮಾಡಿದೆನು ಕಲ್ಲ ಮ್ಯಾಲಿಟ್ಟ=ಕೊನೆಗೆ ದಾಂಪತ್ಯಧರ್ಮವೆಂಬ ಕಠಿನಪಾಷಾಣದ ಮೇಲೆ ಇರಿಸಿ ದೆನು. ಛಂದ=ಶೋಭೆ. ನಾರ್‍ಯಾರು=ನಾರಿಯರು. ಬಿಟ್ಟಕ್ಕಿ=ಬಿಡಲ್ಪಟ್ಟವಳು.

'ಹಣ್ಣ ಬಂದಾವ ಹಣ್ಣ'

ಹೆಂಡತಿಯನ್ನು ಅಗಲಿ ಬಹಳ ದಿನ ವ್ಯಾಪಾರಕ್ಕೆಂದು ಮಲ್ಲಾಡ ದೇಶಕ್ಕೆ ಹೋಗಿದ್ದ ಶೆಟ್ಟಿಯು ಮರಳಿ ಬಂದು ಬೇರೆ ವೇಷದಿಂದ ತನ್ನ ಮಡ ದಿಯ ಪಾತಿವ್ರತ್ಯವನ್ನು ಪರೀಕ್ಷಿಸುತ್ತಾನೆ. ಈ ಇಡೀ ಹಾಡಿನಲ್ಲಿ—ಒಂದು ನುಡಿಯಲ್ಲಿ ಅವನ ಕೌಶಲ್ಯದ ಪ್ರಶ್ನವೂ ಇನ್ನೊಂದು ನುಡಿಯಲ್ಲಿ ಅವಳ ಅದೇ ಬಗೆಯ ಉತ್ತರವೂ ಇವೆ.

ಛಂದಸ್ಸು:—ಸಾಂಗತ್ಯಕ್ಕೆ ಸಮೀಪವಾದುದು.

ಶಬ್ದಪ್ರಯೋಗಗಳು:— ಪಾಳ್ಯಾ=ದಂಡೆ. ಕೊಳತೇವು=ಕೊಂಡುಕೊ ಳ್ಳುತ್ತೇವೆ. ನಾಲೂರು=ನಾಲ್ವರು. ಭಾಂಯಿ=ಬಾವಿ. ಅರೂಟಗಿ=ಅರವಟ್ಟಿಗೆ. ಎಲಮ=ಏನೇ. ಇರಸನೆ ಮತ್ತು ಒಡೆದೂನೆ ಎಂಬಲ್ಲಿ 'ನೆ' ಎಂಬುದು ಪದ ಪೂರಣಕ್ಕಾಗಿ ಬಂದ ಅರ್ಥವಿಲ್ಲದ ಅಕ್ಷರವು. ಹೆಣ್ಣುಮಕ್ಕಳ ಹಾಡುಗಳ ಲ್ಲೆಲ್ಲಾ ಇದು ಬಹಳ ಕಡೆಗೆ ಬರುತ್ತದೆ. ಇದಕ್ಕೆ ಅರ್ಥಹಚ್ಚುವುದೇ ಆದರೆ

'ಶಿ' ಎಂಬ ಅಕ್ಷರದಂತೆ ಇದನ್ನು ತಿಳಿದುಕೊಳ್ಳಬಹುದು.

' ಸಬ್ಬಂಬು ರಾತೂರಿ '

ಹಿಂದಿನ ಹಾಡಿನಂತೆ ಇದರಲ್ಲಾದರೂ ಕ್ರಮದಿಂದ ಪ್ರಶ್ನೋತ್ತರಗಳಿವೆ. ಇಂಥದೊಂದು ಹಾಡು ಗೀತಗೋವಿಂದದಲ್ಲಿದೆ. ("ರಜನಿ ಜನಿತ ಗುರು ಜಾಗರ".) ರಸಿಕರಿಗೆ ಈ ಹಾಡಿನ ರಹಸ್ಯವು ಸ್ಪಷ್ಟವೇ ಇದೆ. ರೂಢ ಶಬ್ದಗಳ ಅರ್ಥವನ್ನು ಮಾತ್ರ ಇಲ್ಲಿ ಹೇಳಿದೆ.

ಛಂದಸ್ಸು:— ತ್ರಿಪದಿಗೆ ಸಮೀಪವಾದುದು.

ಶಬ್ದಪ್ರಯೋಗಗಳು:— ಸಬ್ಬಂಬು ರಾತೂರಿ = ಕಟ್ಟಿರುಳು. ಬೆಟ್ಟಂಬು ಬ್ಯಾಸೀಗಿ=ಕಡುಬೇಸಗೆ. ತನುಗಾಳಿ=ತನುವುಳ್ಳ ಗಾಳಿ ಅಥವಾ ತಂಗಾಳಿ. ಘಾಯ=ಗಾಯ. ಚ್ಯೂರು=ಚಿವುರು. ಹತ್ತು ವಾರ=ಹತ್ತು ಗಜ. ಸಗತಿ ಹೊಡಿ=ಸಾಮು ತೆಗೆ. ಕೃಷ್ಣರು=ಕೃಷ್ಣನಂಥ ಗೆಳೆಯರು (?). ಬಾಂಪಾಟ್ಲೆ=ಮುಖೋದ್ಗತವಾಗಿ.

ಕೊರವಂಜೀ ಹಾಡು

ಮಗನೊಬ್ಬನು ತನ್ನ ಮಡದಿಯನ್ನು ಬಿಟ್ಟು ಸೂಳೆಯೊಂದಿಗೆ ಬೇರೂರಲ್ಲಿದ್ದಾನೆ. ಆತನ ತಾಯಿಯು ಆತನೊಮ್ಮೆ ಬಂದಾಗ ತನ್ನ ಸೊಸೆಯ ರೂಪವನ್ನು ವರ್ಣಿಸಿ ಅವಳೊಡನೆ ಇರುವುದಕ್ಕೆ ಮನವೊಲಿಸಲೆಳಸುತ್ತಾಳೆ. ಆದರೆ ಆತನು ಇದಕ್ಕೆ ಒಪ್ಪುವುದಿಲ್ಲ. ಇದು ಮೊದಲಿನ ನಾಲ್ಕು ನುಡಿಗಳ ಸಾರಾಂಶ. ಆ ಮೇಲೆ ಅವಳು ಉಪಾಯವಿಲ್ಲದೆ ತನ್ನ ಅಕ್ಕರತೆಯ ಸೊಸೆಗೆ ತವರೂರಿಗೆ ಹೋಗಲು ಹೇಳುತ್ತಾಳೆ. ಅದಕ್ಕೆ ಅವಳು ಒಪ್ಪುವುದಿಲ್ಲ. ಕೊರವಂಜಿಯ ಬುಟ್ಟಿಯೊಂದನ್ನು ಕೊಡುಕೊಟ್ಟರೆ ತಾನು ಗಂಡನ ಸಮಾಚಾರವನ್ನು ನೋಡಿಕೊಂಡು ಬರುವೆನೆಂಬುದಾಗಿ ಹೇಳಿ ಹಾಗೆ ಮಾಡುತ್ತಾಳೆ. ಇಲ್ಲಿಗೆ ಮತ್ತೆ ಮೂರು ನುಡಿಗಳು ಮುಗಿದವು. ಮುಂದಿನ ೮ ನುಡಿಗಳಲ್ಲಿ ಅತ್ತೆ ಕೊಟ್ಟ ಮಾಣಿಕ ಹಚ್ಚಿದ ಬುಟ್ಟಿಯನ್ನು ತೆಗೆದುಕೊಂಡು ದನಕಾಯುವ

ಹುಡುಗರಿಗೆ ತನ್ನ ರಾಯರಿರುವ ರಾಜಪಟ್ಟಣದ ಹಾದಿಯನ್ನು ಕೇಳುವಳು. ಅವರು ಹೇಳಿದಂತೆ ಬೇರೆ ಬೇರೆ ಉಡುಪುಗಳನ್ನು ಉಟ್ಟುಕೊಂಡು ತನ್ನಂತಹ ಬಾಲೆಯರನ್ನೂ ಹರದೆಯರನ್ನೂ ಬಲಗೊಂಡು ಅಲ್ಲಿಗೆ ಹೋಗುವಳು. ಆ ಮೇಲೆ ಅವಳು ಭವಿಷ್ಯವನ್ನು ಹೇಳುವ ಕೊರವಂಜಿಯ ವೇಷದಿಂದ ಗಂಡನ ಹತ್ತರ ಹೋಗಿ—"ನಿನಗೆ ಸೂಳೆಯರ ಕೈಯಲ್ಲಿ ಮರಣವುಂಟೆ"ಂದು ಕಣಿ (ಶಕುನ) ಹೇಳುತ್ತಾಳೆ. ಅದಕ್ಕೆ ಅವನು "ವಶೀಕರಣ ವಿದ್ಯೆಯಿಂದ ತನ್ನ ಹೆಂಡತಿಯನ್ನು ತನಗೆ ಕೂಡಿಸೆ"ಂದು ಬಿನ್ನವಿಸುತ್ತಾನೆ. ಆಗ ಅವಳು ತನ್ನ ನಿಜರೂಪವನ್ನು ಪ್ರಕಟಿಸುತ್ತಾಳೆ. ಇಬ್ಬರೂ ಕೂಡಿ ತಮ್ಮ ಊರಿಗೆ ಹೊರಡುತ್ತಾರೆ. ಆಗ ಅವನ ಸೂಳೆಯು ತಾನೂ ಬರುವೆನೆಂದು ಬೆನ್ನುಹತ್ತಲು ಇವರು ಅವಳನ್ನು ಹಿಂದಕ್ಕೆ ನೂಕಿ ಮುಂದೆ ಹೊರಡುತ್ತಾರೆ. ಕೊನೆಗೆ ಮನೆಯ ಬಾಗಿಲಿಗೆ ಹೋಗಿ ಆ ಬಾಲೆಯು ತನ್ನ ಅತ್ತೆಗೆ—'ಸಂಭ್ರಮವನ್ನು ನೋಡುಬಾರೆ'ಂದು ಹೊರಕ್ಕೆ ಕರೆಯುತ್ತಾಳೆ. ಇಲ್ಲಿಗೆ ಹಾಡು ಮುಗಿಯುವುದು.

ಛಂದಸ್ಸು:— ತ್ರಿಪದಿಗೆ ಸಮೀಪವಾಗಿದೆ. ಆದರೆ ಅನ್ನುವ ಮಟು ಎರಡು ವಿಧವಾಗಿದೆ.

ಶಬ್ದಪ್ರಯೋಗಗಳು.— ಅಬರುಂಗ ಧೊರಿ=ಅಪ್ರಕಟದಂತೆ ನುಣುಪುವ್ಯೆಯುಳ್ಳ ರಾಜಪುರುಷ. ಛೆಲವಿ=ಸುಂದರಿ. ಮುಕದೋರು=ಮುಖ ತೋರಿಸು. ದಟ್ಟಿ=ಸೀರೆ, ದುಕೂಲ. ಸುಗಿಗಾರ=ಸಂಚಾರಿ. ನಿಂಬಿ=ಲಿಂಬಿ. ಕೊರವಂಜಿ=ಕುಂಚೀಕೊರವರ ಹೆಂಗಸು. ದ್ಯಾವರ್ಧೇಳು=ದೇವಾವೇಶದಿಂದ ಭವಿಷ್ಯ ಹೇಳುವಿಕೆ. ಕೈ ತಾ=ಅಂಗೈ ತೋರಿಸು. ಮಾಡಿಹೊಡಿ=ಮದ್ದುಹಾಕಿ ಕೊಲ್ಲು. ಗರದೀಲೆ=ಸಂಭ್ರಮದಿಂದ. ರಂಡಿ=ಸೂಳೆ. ಹೊಡಮಳ್ಳಿ=ಹಿಂತಿರುಗಿ. ಹೊಳ್ಳ್ಯ=ಹೊರಳು. ಚೆಪ್ಪಾಲಿ=ಹೆಣ್ಣುಮಕ್ಕಳು ಮೆಟ್ಟುವ ಕಾಲ್ಮರೆ.

- - - -

ಗಂಗೀ ಗೌರೀ ಹಾಡು

(೧)

ಶಿವನು ಗಂಗೆಯನ್ನು ತರುವುದಕ್ಕೆ ನಂದಿಯನ್ನೇರಿ ಹೊರಡುತ್ತಾನೆ.

(ನುಡಿ ೧-೨). ಹಳ್ಳದ ದಂಡೆಯ ಮೇಲೆ ಹೂಗಳನ್ನು ಎತ್ತುತ್ತಿದ್ದ ಗಂಗೆ ಯೊಡನೆ ಪರಿಪರಿಯಾಗಿ ಮಾತಾಡಿ ಕೊನೆಗೆ ಅವಳನ್ನು ತನ್ನ ಜಡೆಯಲ್ಲಿ ಕುಳ್ಳಿರಿಸಿಕೊಂಡು ಬರುತ್ತಾನೆ (೩-೧೧). ಇದನ್ನು ಒಂದು ಗಿಳಿಯು ಕಂಡು ಗೌರಿಗೆ ತಿಳಿಸಲು ಅವಳು ಸಿಟ್ಟಾಗಿ ತವರುಮನೆಗೆ ಹೋಗುತ್ತಾಳೆ. ಅಲ್ಲಿ ತವ ರವರು ಈಕೆಯನ್ನೆ ಜರೆಯುತ್ತಾರೆ. ಆದ್ದರಿಂದ ಅವಳು ತಿರುಗಿ ಶಿವನ ಅರ ಮನೆಗೆ ಬರುತ್ತಾಳೆ(೧೨-೨೧). ಆಗ ಶಿವನು ಒಂದೂರಿನಿಂದ ಯತಿಯ ವೇಷದಲ್ಲಿ ಬರುತ್ತಾನೆ. ಅವನು ಹಾಗೆ ಬಂದು ಗೌರಿಯನ್ನು ನೀರು ಬೇಡಲು, ಅವಳು ಒಂದು ಗಿಂಡಿಗೆ ಬದಲು ಎರಡು ಗಿಂಡಿಗಳನ್ನು ಕೊಡುತ್ತಾಳೆ. ಅದಕ್ಕೆ ಶಿವನು "ನಿನಗೆ ಪುರುಷರು ಇಬ್ಬರೇನೇ?" ಎಂದು ಚೇಷ್ಟೆಮಾಡುತ್ತಾನೆ. ಅವಳು ಅವನ ಜಡೆಯೊಳಗಿನ ಗಂಗೆಯ ಸಮಾಚಾರವನ್ನು ಬೈಲಿಗೆಳೆದು ಅವ ನಿಗೇ ಗೇಲಿಮಾಡುತ್ತಾಳೆ. ಊಟಕ್ಕೆ ಎಡೆಬಡಿಸುವಾಗಲೂ ಮಾತು ಇಲ್ಲಿಗೇ ಬಂದುಮುಟ್ಟುತ್ತದೆ. ಆಗ ಶಿವನು ಗಂಗೆಯನ್ನು ತಾನು ತಂದಿಲ್ಲವೆಂದು ಆಣೆಯನ್ನು ಮಾಡುವುದಕ್ಕೆ ಸಿದ್ಧನಾಗುತ್ತಾನೆ (೨೨-೩೧) ಗೌರಿಯು ಮತ್ತೊಂದು ಹಂಚಿಕೆಯನ್ನು ಮಾಡುತ್ತಾಳೆ. ಎಣ್ಣೆಯನ್ನು ತಕ್ಕೊಂಡು ಅವನ ಜಡೆಗಳಿಗೆ ಹೂಸಲು ಆರಂಭಿಸುತ್ತಾಳೆ. ಆಗ ಗಂಗೆಯು ಗೌರಿಗೆ ಗೊತ್ತಾಗದಂತೆ ಮೆಲ್ಲಗೆ ಸೊಂಟದ ಕಡೆಗೆ ಇಳಿಯುತ್ತಾಳೆ. ಗೌರವ್ವನು ಹಾಗೇ ಕೆಳಕೆಳಕ್ಕೆ ಬಂದಹಾಗೆ ಗಂಗೆಯೂ ಅದಕ್ಕಿಂತ ಕೆಳಗಡೆಗೆ ಸರಿಯುತ್ತ ಕೊನೆಗೆ ನೆಲಮುಟ್ಟಿ ಹೊಳೆಯಾಗಿ ಹರಿದುಹೋಗುತ್ತಾಳೆ (೩೨-೩೫). ಮರುದಿನ ಗೌರಿಯು ರಜಸ್ವಲೆಯಾಗಲು, ಮೈದೊಳೆಯಲು ನೀರಿಲ್ಲದಂತಾಗು ತ್ತದೆ. ಶಿವನು ಬೇಕೆಂತಲೇ ಚೇಷ್ಟೆಯಿಂದ ಎಣ್ಣೆಯ ಹಾಗೂ ತುಪ್ಪದ ಕೊಡಗಳನ್ನು ಸ್ನಾನಕ್ಕೆಂದು ಕಳಿಸುತ್ತಾನೆ. ಗೌರಿಯ ಗರ್ವಭಂಗವಾಗು ವುದು. ಗಂಗೆಯನ್ನು ಕರೆತಾರೆನ್ನುವಳು (೩೬-೪೧).

ಛಂದಸ್ಸು:— ತ್ರಿಪದಿಯೇ ಆಗಿದೆ.

ಶಬ್ದಪ್ರಯೋಗಗಳು:—ಕೊಂಬಣಸ ಮತ್ತು ಹುಲಗೆಜ್ಜೆ ಇವು ಎತ್ತಿನ ಆಭರಣಗಳು. ತರವೋ=ತರಲಿಕ್ಕೆ. ದಯಮಾಡು=ಕೊಡು. ನೆಂಬಿಗೆ=ನಂಬಿಗೆ. ರಂಭ್ಯಾಳ=ಮಡದಿ (ರಂಭೆ) ಇದ್ದಾಳೆ. ಮನಗು=ಮಲಗು. ಮಕ=ಮುಖ.

ಚಾವುಕೆ=ಪೀಠ. ಥಾಂವಕ್ಕ=ಸ್ಥಾನಕ್ಕೆ. ಮುಟ್ಟಾಗು=ರಜಸ್ವಲೆಯಾಗು. ಖಳ ವ್ಯಾನ=ಕಳಿಸಿದ್ದಾನೆ. ಮುಡಚಟ್ಟ=ಮೈಲಿಗೆ.

ಗಂಗೀ ಗೌರೀ ಹಾಡು

(೨)

ಇದೊಂದು ಭಾವಗೀತೆ ಲೆಕ್ಕದಂತೆ ಮುಂದಿನ ವಿಭಾಗದಲ್ಲಿ ಸೇರಿಸ ಬೇಕಿತ್ತು. ಆದರೆ ಈ ಹಾಡಿನ ವಿಷಯವು ಪ್ರಣಯಾಂತರದ ಪರಿತಾಪವನ್ನು ಸ್ಪಷ್ಟಗೊಳಿಸುವುದರಿಂದ ಈ ವಿಭಾಗದಲ್ಲಿಯೇ ಸೇರಿಸಬೇಕಾಯಿತು. ಇದರಲ್ಲಿ ಗಂಗೆಗೆ ಶಿವನೊಲಿದದ್ದಕ್ಕಾಗಿ ಗೌರಿಯು ಅನುತಾಪಗೊಳ್ಳುವಳು. ಹಿಂದೆ ಗಿರಿರಾಜನ ಮನೆಯಲ್ಲಿದ್ದಾಗ ಶಿವನ ಸಲುವಾಗಿ ಮಾಡಿದ ಘೋರತಪಶ್ಚರ್ಯ ವನ್ನೆಲ್ಲ ನೆನಪಿಗೆ ತಂದುಕೊಟ್ಟು ಶಿವನ ಎದುರಿಗೇ ಕನವರಿಸುತ್ತಾಳೆ.

ಅನ್ನೀಪುರ, ಬನ್ನೀಪುರ ಮುಂತಾದವುಗಳಿಂದ ತುಂಬಿದ ಕಟ್ಟಡವಿಯೊಳಗೆ ಹಿಂಸ್ರಪಶುಗಳ ಮಧ್ಯದಲ್ಲಿ ತಾನು ತಪಗೈದೆನೆಂದು ಮೊದಲನೆಯ ನುಡಿಯಲ್ಲಿ, ಸ್ವರ್ಗನಗರಿಯ ದಾರಿಯಲ್ಲಿ ಕಲ್ಲುಬಂಡೆಗಳ ಮೇಲೆ ಕುಳಿತು, ಬಗೆ ಬಗೆಯ ರಾಕ್ಷಸರ ತೊಂದರೆಯನ್ನು ಸಹಿಸಿ, ಹತ್ತಿಪ್ಪತ್ತು ಯುಗಗಳ ವರೆಗೆ ತಪಗೈದೆನೆಂದು ಎರಡನೆಯ ಮೂರನೆಯ ನುಡಿಗಳಲ್ಲಿ ಹೇಳುತ್ತಾಳೆ.

ಛಂದಸ್ಸು:—ಲಲಿತರಗಳೆ.

ಶಬ್ದಪ್ರಯೋಗಗಳು :— ಸಾರಂಗಸರದೂಳಿ = ಸಾರಂಗ ಮತ್ತು ಶಾರ್ದೂಲ ಎನ್ನಮೇಲಾಡಿ=ನನ್ನ ಮೇಲೆ ಮೇಲಾಟಮಾಡಿ, ಅಥವಾ ನನಗಿಂತ ಮಿಗಿಲೆಂದು. ಪಟ್ಟಣದ ದಾರಿ=ಕೈಲಾಸ ಪಟ್ಟಣದ ದಾರಿ. ಕತ್ತೀಯ ವರಿಯ ವರು=ಚರ್ಮದ ಚೀಲದಲ್ಲಿ ಮುಚ್ಚಿದ ಖಡ್ಗವನ್ನು ಧರಿಸಿದ ಅಮಾನುಷರು. ಗಾಂವದ=ಗಾವುದ. ಈ ಶಬ್ದವನ್ನು ಇಲ್ಲಿ 'ಯುಗ' ಎಂಬ ಅರ್ಥದಲ್ಲಿ ಉಪ ಯೋಗಿಸಿದೆ. ಸಾರಂಗ ದಾರಿ=ಸ್ವರ್ಗ ದಾರಿ. ತಪನಿದ್ದ=ತಪವಿದ್ದೆನು. ಭಣವಿ =ಸೊಪ್ಪಿನ ಬಣವೆ ಅಥವಾ ಒಟ್ಟಲು. ಕಿಚಗುಳ್ಳ=ಕಿಚ್ಚಿನ ಬೆರಣಿ, ಎಂದರೆ ಕೆಂಡ. ಒಗತನ=ದಾಂಪತ್ಯ. ಬರಕ್ಯಾದ=ಸುರುವಿದೆ.

ಭಾವಗೀತಗಳು

ಹೃದಯೋದ್ರೇಕಕ್ಕೆ ಕಾರಣವಾಗುವ ಯಾವುದೊಂದು ಒಂಟಿ ಸಂಗತಿಯನ್ನು ಕುರಿತು ಅದರ ಬೇರೆಬೇರೆ ಮಗ್ಗಲುಗಳನ್ನು ಒಂದೊಂದಾಗಿ ಬಣ್ಣಿಸುತ್ತ ಬಂದ ಹಾಗೆಲ್ಲ ಶ್ರೋತೃವಿನ ಅಂತರಂಗದಲ್ಲಿ ಭಾವಾವೇಗವು ಏಳುತ್ತದೆ. ಇಂತಹ ಹಾಡುಗಳಿಗೆ "ಭಾವಗೀತಗಳೆ"ಂದು ನಾಮಕರಣ ಮಾಡಲಾಗಿದೆ. ಈ ಹಾಡುಗಳಲ್ಲಿ ಒಂದೇ ಪಾತ್ರವು ತನ್ನ ಸ್ವಗತವನ್ನು ಕಲ್ಲು ಕರಗುವಂತೆ ಬಣ್ಣಿಸುತ್ತಿರುವುದುಂಟು.

ಕೂಸಿನ ಹಾಡು

ಜಾತ್ರೆಗೆ ಹೋದ ಒಬ್ಬ ಹೆಣ್ಣುಮಗಳು ಭಾವಿಯ ದಂಡೆಯ ಮೇಲೆ ನೀರು ಕುಡಿಯುವಾಗ ಜನರ ದಟ್ಟಣೆಯಲ್ಲಿ ಅವಳ ಕೂಸು ತಪ್ಪಿಸಿಕೊಂಡು ಬಿಟ್ಟಿದೆ. ಎಷ್ಟು ಹುಡುಕಿದರೂ ಸಿಗದಂತಾಗಲು ಅವಳು ನೆನೆನೆನೆಸಿ ಅಳುತ್ತಾಳೆ.

ಛಂದಸ್ಸು :—ತ್ರಿಪದಿಗೆ ಸಮೀಪವಾಗಿದೆ.

ಶಬ್ದ ಪ್ರಯೋಗಗಳು :—ಕುಂದಲ=ಕುಂದಣ. ಮುಂಡಲ=ಬರಿದಾದ ಸ್ಥಳ. ಹಲ್ಲಿ=ಚಿಕ್ಕ ರೊಟ್ಟಿ. ಇಡಸೀದ=ಇಡಿಸಿರುವೆನು. ತೆಲಿ=ತಲೆ. ಹ್ವಾದ=ಹೋದೆನು.

ಎತ್ತಿನ ಹಾಡು

ಎತ್ತಿನ ಕಡೆಯಿಂದ ಅಡವಿಯಲ್ಲಿ ಬೇಕುಬೇಕಾದಷ್ಟು ಕೆಲಸವನ್ನು ಮಾಡಿಸಿಕೊಂಡು ಅದರ ಸುಖದ ಕಡೆಗೆ ಮಾತ್ರ ಅಲಕ್ಷ್ಯವನ್ನು ಮಾಡಿದರೆ ಅದಕ್ಕೆ ಎಷ್ಟು ದುಃಖವಾಗಬೇಡ! ತಮ್ಮ ಕೆಲಸಗಳನ್ನು ಮುಂದಿಯ ಕಡೆ

ಯಿಂದ ಬೇಕಾದ ಹಾಗೆ ಮಾಡಿಸಿಕೊಂಡು, ಅವರ ಅನುವು-ಆಪತ್ತುಗಳ ಕಡೆಗೆ ನೋಡುವ ಪ್ರಸಂಗ ಬಂದಾಗ ಮೋರೆ ತಿರುವುವ ಸ್ವಭಾವವು ಬಹು ಜನರಲ್ಲಿರುತ್ತದೆ. ಅಂಥವರಿಗೆ ಚುಚ್ಚುವಂತೆ ಈ ಹಾಡು ಇದೆ. ಇದಲ್ಲದೆ ಒಕ್ಕಲಿಗರ ಮನೆಯಲ್ಲಿ ದನ-ಕರುಗಳ ನೀರು-ಮೇವುಗಳ ಚಿಂತೆಯು ಮನೆಯ ಒಡತಿಗೆ ಇಲ್ಲವೆಮೋಗಬಾರದೆಂಬುವದಕ್ಕೂ ಈ ಹಾಡು ಉಪಯುಕ್ತವಾಗಿದೆ ಯೆಂದು ತೋರುತ್ತದೆ.

ಛಂದಸ್ಸು :—ತ್ರಿಪದಿಯ ಜಾತಿಗೆ ಸೇರಿದ್ದು.

ಶಬ್ದ ಪ್ರಯೋಗಗಳು :— ಮಾಗಿ=ಮಾಗಿಯ ಕಾಲದ ಎಂದರೆ ಮಾರ್ಘಶೀರ್ಷ ಮಾಸದ ಸೇಗಿಲುಗೆಲಸ. ಮಾಯದಿಂದ=ಪ್ರೀತಿಯಿಂದ. ಧಂಟ=ದಂಟು. ತುಂಡೀನ=ಸೊಕ್ಕಿದ ಹಸನ್ನು. ಹೆಂಡಿ=ಸೆಗಣಿ. ಕುಳ್ಳ=ಬೆರಣಿ. ಪರಸಾದ= ಧೂಪದ ಬೂದಿ (ಪ್ರಸಾದ). ಬಾರಕೋಲ=ಚಬಕ.

ಮಳೀ ಹಾಡು

ಬಿತ್ತಿಗೆಯ ಕಾಲದಲ್ಲಿ ಮಳೆಯು ಬರುವುದಕ್ಕೆ ಬಹಳ ತಡವಾಗಹತ್ತಿ ದರೆ ಒಕ್ಕಲಿಗರಲ್ಲಿ ಹಾಹಾಕಾರವೇ ಎದ್ದುಹೋಗುತ್ತದೆ. ಪೂರ್ವಾ ಉತ್ತರಾ ಮಳೆಗಳು ಆಗಲೇಬೇಕು. ಅವು ತಪ್ಪಿದರೆ ರಂಬಾಟಕ್ಕೆ ಆರಂಭವೇ. ಹೀಗಿದ್ದು ಯಾವುದೋ ಒಂದು ವರುಷ ಸ್ವಾತಿಯ ಮಳೆಯ ವರೆಗೆ ಒಂದು ಹನಿ ಕೂಡ ಬೀಳಲಿಲ್ಲನಂತೆ. ಹೀಗೆ ಆದಾಗಲೆಲ್ಲ ಎಲ್ಲೆಲ್ಲಿಯೂ ಬರದ ಲಕ್ಷಣಗಳೇ ತೋರುತ್ತವೆ. ಇಂತಹ ಪ್ರಸಂಗದ ಒಂದು ಕರುಣಾಜನಕ ಚಿತ್ರವು ಈ ಹಾಡಿ ನಲ್ಲಿದೆ.

ಛಂದಸ್ಸು :—ತ್ರಿಪದಿಯ ಪೂರ್ವಾರ್ಧ.

ಶಬ್ದ ಪ್ರಯೋಗಗಳು :— ಗುಬ್ಬ್ಯಾರು=ಘೋಷಾ ಪದ್ಧತಿಯ ಹೆಣ್ಣು ಮಕ್ಕಳು (ಗುಬ್ಬಿಯಂತೆ ಯಾವಾಗಲೂ ಮನೆಯಲ್ಲಿಯೆ ಇರುವವರು.) ಅನ್ಯಾದ=ಅನ್ಯಾಯದ. ಬಂದಕೇರಿ=ಬಂದುಬಿಟ್ಟು. ಉಣಿಸ್ಯಾರ=ಉಣಿಸಿದರು. ಮುಚ್ಚ್ಯಾವ=ಮುಚ್ಚಿದವು.

ಕಥೆಯ ಹಾಡುಗಳು

ರಾಜ ರಾಣಿಯರ ಕಥೆಗಳು, ಜಕಣಿಯರ ಕಥೆಗಳು ಮುಂತಾದ ಜಾನಪದ ಕಥಾಸಾಹಿತ್ಯದ ಪರಿಚಯವಿಲ್ಲದವರಾರಾದರೂ ಉಂಟೆ ? ಅಂತಹ ಕಥೆಗಳೇ ಹೆಣ್ಣುಮಕ್ಕಳ ಹಾಡುಗಳಿಗೂ ವಿಷಯವಾಗಿ ಅವರ ಜೀವನದ ರಥಕ್ಕೆ ನೆರವುಗೋಲಿನಂತೆ ಸಹಾಯಕವಾಗಿರುತ್ತವೆ. ಕೆಲಸಬೊಗಸೆ ಮಾಡುವಾಗ ಅವರು ಇಂತಹ ಕಥಾಗೀತಗಳನ್ನು ಹಾಡುತ್ತ ತಮ್ಮ ದುಡಿತದ ಶ್ರಮವನ್ನು ಮರೆಯುವರು. ಅಲ್ಲದೆ ಅವರ ಜೀವನದ ಕಷ್ಟನಷ್ಟಗಳಿಗೆ ಎದೆಗೊಡುವ ಬಲವನ್ನು ಇವುಗಳೇ ಅವರಿಗೆ ಪೂರಯಿಸುವವು. ಸದ್ಯದ ಶ್ರಮವನ್ನು ಮರೆಯಿಸುವವು. ನಾಳಿನ ಚಿಂತೆಯನ್ನು ಬಯಲು ಮಾಡುವವು. ಅದಕ್ಕೆಂತಲೇ ಇಂತಹ ಜಡಪದ ಸಾಹಿತ್ಯಕ್ಕೆ ಜೀವನದ ಸಾಹಿತ್ಯವೆಂದು ಎನ್ನುವುದು. 'ಜೀವನಸಂಗೀತ' 'ಜೀವನಶ್ರುತಿ' ಮುಂತಾದ ಹೆಸರುಗಳೆಲ್ಲ ಇಂತಹ ಸಾಹಿತ್ಯಕ್ಕೇ ಸಲ್ಲತಕ್ಕವುಗಳು.

ಆಕಳ ಹಾಡು

ಇದು ಒಂದು ಆಶ್ರಮದೊಳಗಿದ ಆಕಳ ಹಾಡು. ಅಡವಿಯಲ್ಲಿ ಮೇಯಲಿಕ್ಕೆ ಹೋದಾಗ ಹುಲಿಯ ಕೈಗೆ ಸಿಕ್ಕು—"ಮಗುವಿಗೆ ಮೊಲೆಕೊಟ್ಟು ಬರುವೆನೆ"ಂದು ಆಣೆಯಿಟ್ಟುಕೊಂಡು, ವಚನಕೊಟ್ಟಂತೆ ತಿರುಗಿ ಅದು ಹುಲಿಯ ಬಾಯಿಗೆ ತುತ್ತಾಗಲು ಹೋದ ಕಥೆ ಇದರಲ್ಲಿದೆ. ಮೊದಲನೆಯ ನುಡಿಯಲ್ಲಿ 'ತಾಯಿಯು ತಣ್ಣಗಿದ್ದರೆ ಮಗುವಿನ ಬೆನ್ನ ಮೇಲೆ ಮಹಾದೇವ' ಎಂಬ ಮಾತಿನಲ್ಲಿ ಕಥಾಸೂಚನೆಯನ್ನು ಹೇಳಿದೆ. ಮುಂದಿನ ಎರಡು ನುಡಿಗಳಲ್ಲಿ ಹಾಡು ಕೇಳಲಿಕ್ಕೆ ಬಂದವರು ಮರಳಿಹೋಗಬಾರದೆಂದು ಶಾಪವಿದೆ. ಅದರ ಮುಂದಿನ ಎರಡು ನುಡಿಗಳಲ್ಲಿ ಈಯಃವ ಆಕಳಿಗೆ ಪರದೆಗಳನ್ನು ಮರೆಮಾಡಿದ

ವರ್ಣನೆಯಿದೆ. ಆ ಮೇಲಿನ ಎರಡು ನುಡಿಗಳಲ್ಲಿ ಹೆರಿಗೆಯ ವರ್ಣನೆ. ಅದರ ಮುಂದಿನ ಒಂದು ನುಡಿಯಲ್ಲಿ ಹೆರಿಗೆಯ ನಂತರದ ಕ್ರಿಯೆಯನ್ನು ಹೇಳಿದೆ. ಬಳಿಕ ನಾಲ್ಕು ನುಡಿಗಳಲ್ಲಿ ಆ ಆಕಳ ಹಾಲಿನ ಗಿಣ್ಣವನ್ನುಂಡು ನೆರೆಯ ಜನರೆಲ್ಲ ಹರಕೆಯನ್ನು ಕೊಟ್ಟ ಮಾತು ಹೇಳಿದೆ. ಮುಂದಿನ ನುಡಿಯಲ್ಲಿ ಆಶ್ರಮದ ಋಷಿಯು ಆಕಳಿಗೆ ಆರತಿಯೆತ್ತಿ ಅದನ್ನು ಅಡವಿಗೆ ಮೆಯಲು ಬಿಡುತ್ತಾನೆ. ಆ ಮೇಲಿನ ಐದುನುಡಿಗಳಲ್ಲಿ ಅಡವಿಗೆ ಹೋಗಿ ಮೇಯ್ದು ಹೊರಳಿ ಬರುವಾಗ ಹುಲಿಯ ಕೈಗೆ ಸಿಕ್ಕ ವಿಷಯವು ಹೇಳಿದೆ. ಮುಂದಿನ ಎರಡು ನುಡಿಗಳಲ್ಲಿ ಹುಲಿಗೆ ವಚನವನ್ನು ಕೊಡುತ್ತದೆ. ಆ ಮೇಲೆ ಎರಡು ನುಡಿಗಳಲ್ಲಿ ಆಕಳು ವಿಧಿಯನ್ನು ಹಳಿಯುತ್ತದೆ. ಅದರ ಮುಂದಿನ ಮೂರು ನುಡಿಗಳಲ್ಲಿ ಜೊತೆ ಆಕಳುಗಳಿಗೆ ತನ್ನ ಪರದೇಶಿ ಮಗನ ಮೇಲೆ ಲಕ್ಷ್ಯವಿರಲೆಂದು ಬಿನ್ನವಿಸಿ ಕೊಳ್ಳುತ್ತದೆ. ಮುಂದಿನ ಮೂರು ನುಡಿಗಳಲ್ಲಿ ತನ್ನ ಮಗುವಿಗೆ ಬುದ್ಧಿವಾದ ವನ್ನು ಹೇಳುತ್ತದೆ. ಕೊನೆಯ ನಾಲ್ಕು ನುಡಿಗಳಲ್ಲಿ ಕಥಾಪರಿಸಮಾಪ್ತಿ ಯಾಗುತ್ತದೆ.

ಶಬ್ದ ಪ್ರಯೋಗಗಳು :—ತಂಗಾಲಿ=ತಣ್ಣಗಿರಲಿ (?). ನಿರವೀರ=ನಿಲ ವಿನ (?) ಪಟ್ಟೋಳಿ ಗುಡಿ=ರೇಶಿಮೆಯ ಪರದೆ. ಬವಲಿ=ಕಪಿಲೆ (ಆಕಳು). ರೊಕ್ಕಸ್ತ=ಬೆಲೆಯುಳ್ಳ. ಉಚ್ಚ್ಯಾಯ=ಉತ್ಸವ. ದಡ್ಡಿ=ದನಗಳ ಹಕ್ಕೆ. ಗೌವ ಳರು=ದನಗಾಹಿಗಳು. ಬರದ ಬತ್ತಿಸಿದಂತಾ=ಚಿತ್ರದಂತೆ ಸುಂದರವಾದ. ಹಿಮ್ಮಲಿ=ಹಿಮ್ಮೊಲೆ. ಕೆಲಕೂತ=ತೂಗಾಡಿಸುತ್ತ. ಪರವಕ್ಷದಿಂದ=ಗಂಭೀರ ವಾಗಿ. ಬಳಲ್ದೇವಿ=ಬಳಲಿದವಳು. ಬಾವಂಜಿ=ಒಂದು ಬಗೆಯ ಗಿಡಗಂಟಿ. ಇದಿ=ವಿಧಿ. ಬಂದೀನು=ಬಂದೇನು. ತನವಿನಲ್ಲಿ=ತಂಪಿನಲ್ಲಿ. ಅರಬಕ್ಷಿ ಪರಬಕ್ಷಿ= ಬುದ್ಧಿ ಬಲಿಯದ. ಮಲೆಗೊಳ್ಳ=ವೊಲೆಗೊಡಿರಿ. ಛಾಯದಲೆ=ಒಪ್ಪಿನಿಂದ. ದಾವುಣಿ=ಗೋದಲೆ (ಮೇವಿನ ಹರಿ). ಕುಣಕಿ ಸಡಲ್ಯಾವ=ಕಟ್ಟುವ ಹಗ್ಗಕ್ಕೆ ಎರವಾದೀ, ಎಂದರೆ ಸತ್ತೀ ಎಂದರ್ಥ. ಅನ್ಯಾವನಾಡದೆ=ಮರುಮಾತು ಹೇಳದೆ. ಉಪ್ಪಾಸ=ಉಪವಾಸ.

ಎಳ್ಳಾಮಾಸೀ ಹಾಡು

ಒಬ್ಬ ಶ್ರೀಮಂತನಿಗೆ ಏಳು ಮಂದಿ ಸೊಸೆಯಂದಿರಿರುತ್ತಾರೆ. ಹಿರಿಸೊಸೆಯರಿಗೂ ಅತ್ತೆಗೂ ಬಹಳ ಹಿತವಿತ್ತು. ಅವರೆಲ್ಲರು ಕೂಡಿ ಚಿಕ್ಕ ಸೊಸೆಯನ್ನು ಒಂಟಿಯನ್ನಾಗಿ ಮಾಡಿ ಕಾಡುತ್ತಿದ್ದರು. ಮಾರ್ಗಶೀರ್ಷ ಮಾಸದ ಕೊನೆಗೆ ಬರುವ ಎಳ್ಳವಮಾಸಿಯ ಕಾಲಕ್ಕೆ ಜನರು ವನಭೋಜನಕ್ಕೆ ಹೋಗುವ ರೂಢಿಯುಂಟು. ಅಂದು ಮನೆಯವರೆಲ್ಲರು ಚಿಕ್ಕ ಸೊಸೆಗೆ ಮನೆಗೆಲಸವನ್ನು ನಿಯಮಿಸಿ ವನಭೋಜನಕ್ಕೆ ಹೋದರು. ಮನೆಯಲ್ಲಿ ಅವಳು ಆಕಳ ಕರುವನ್ನು ಬಿಚ್ಚಿ ಕಟ್ಟುವಷ್ಟರಲ್ಲಿ ಅದು ಕೊಸರಿಕೊಂಡು ಬೀದಿಗೆ ಹೋಯಿತು. ಅದನ್ನು ಬೆನ್ನಟ್ಟಿ ಹೋದಾಗ ಮತ್ತೊಬ್ಬ ಶ್ರೀಮಂತನ ಮಗನ ದೃಷ್ಟಿಯು ಅವಳ ಮೇಲೆ ಬಿತ್ತು. ಅವಳ ಚಿಂತೆಯಲ್ಲಿ ಅವನು, ತನ್ನ ಮನೆಗೆ ಹೋಗಿ ಮಲಗಿಕೊಂಡನು. ಅವನ ತಾಯಿ ಕೇಳಿದಾಗ ನಡೆದ ಸಂಗತಿಯನ್ನೆಲ್ಲ ಹೇಳಿದನು (ನುಡಿ ೧-೧೫). ಅವನ ತಾಯಿಯು ಆ ದಿನ ಸಂಜೆಗೆ ಆ ಹೆಣ್ಣಿನ ಮನೆಯ ಏಳೂ ಮಂದಿ ಸೊಸೆಯಂದಿರಿಗೆ ಮುತ್ತೈದೆತನದ ಊಟಕ್ಕೆ ನಿಮಂತ್ರಣವನ್ನು ಕೊಟ್ಟಳು. ಚಿಕ್ಕವಳ ಭೋಜನ ಪದಾರ್ಥದಲ್ಲಿ ಬೇಕೆಂತಲೇ ಒಂದು ನೊಣವನ್ನು ಹಾಕಿದ್ದರು. ಅದರಿಂದ ಅವಳಿಗೆ ವಾಂತಿಯಾಗಹತ್ತಿತು. ಆ ನೆವನದಿಂದ ಅವಳನ್ನು ಆ ರಾತ್ರಿಯ ಮಟ್ಟಿಗೆ ತಮ್ಮ ಮನೆಯಲ್ಲಿಟ್ಟುಕೊಂಡು ಉಳಿದವರನ್ನು ಅವರ ಮನೆಗೆ ಕಳಿಸುವರು (೧೬-೧೯). ನಡುರಾತ್ರಿಯಲ್ಲಿ ಆ ತರುಣನು ಆಕೆಯ ಮೈಮುಟ್ಟ ಹೋಗುವನು. ಆಗ ಅವಳು ಒಂದು ಹಂಚಿಕೆಯನ್ನು ಮಾಡುವಳು. ತನ್ನ ಕೊರಳೊಳಗಿನ ಆಭರಣವನ್ನು ಹರಿದೊಗೆದು ಅವುಗಳನ್ನೆಲ್ಲ ಪೋಣಿಸಿಕೊಡಲು ಹೇಳುವಳು. ಅವನು ಮುಂದೆ ಮುಂದೆ ಪೋಣಿಸುತ್ತಿದ್ದಾಗ ಅವಳು ಮರೆಮಾತಿಗೆ ಹಾಕಿ ಹಿಂದೆ ಹಿಂದೆ ಅವುಗಳನ್ನೆಲ್ಲ ಉಚ್ಚುತ್ತಬಂದಳು. ಇಷ್ಟೊತ್ತಿಗೆ ಬೆಳಗಾಯಿತು (೨೦-೨೪). ಆಗ ಲಘುಶಂಕೆಯ ನೆವನಮಾಡಿ ಬಾಗಿಲ ತೆರೆಯಹೇಳುವಳು. ಅವನು ತಿರುಗಿ ಬರುವುದಕ್ಕೆ ಆಣೆಮಾಡೆಂದನು. ಅವಳು ತನ್ನ ಸೀರೆಯ ಸೆರಗನ್ನೇ ಅವನ ಕೈಯಲ್ಲಿ ಕೊಟ್ಟು ಸಂಶಯಬಾರದಂತೆ ಮಾಡಿ, ಒಂದೊಂದು ನಿಲಗಿ (ನಿರಿಗೆ)

ಯನ್ನು ಉಚ್ಚುತ್ತ ಒಂದೊಂದು ಮೆಟ್ಟಿಲನ್ನು ಇಳಿದು ಕೊನೆಗೆ ಅಂಗಳದಲ್ಲಿದ್ದ ಎಮ್ಮೆಯ ಕೋಡಿಗೆ ಸೀರೆಯ ಮತ್ತೊಂದು ತುದಿಯನ್ನು ಸಿಕ್ಕಿಸಿ ಬತ್ತಲೆಯಾಗಿಯೇ ತನ್ನ ಮನೆಗೆ ಹೋದಳು (೨೫-೩೧). ನಸುಕಿನಲ್ಲಿ ಮನೆಗೆ ಹೋಗಿ ಬಾಗಿಲ ತೆರೆಯಿರೆಂದಾಗ ಅತ್ತೆಯು ಹೆದರಿಕೊಂಡಳು. ಆದರೆ ಮುಂದೆ ನಿಜಸಂಗತಿಯು ಗೊತ್ತಾಯಿತು (೩೨-೩೪). ಕೊನೆಯ ಎರಡು ನುಡಿಗಳಲ್ಲಿ "ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ" ಎಂಬ ಉಪಸಂಹಾರವಿದೆ. ಜನರೂಢಿಯ ಕಥೆಯಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ಭಾಗಗಳಿವೆ.

ಛಂದಸ್ಸು:— ಲಲಿತರಗಳೆಗೆ ಸಮೀಪವಾಗಿದೆ.

ಶಬ್ದ ಪ್ರಯೋಗಗಳು:—ಕಾಯಿಪಲ್ಲೆ=ತರಕಾರಿ. ಜ್ವಾಳ=ಜೋಳ. ಕಟ್ಟೆಟಿಗೆ=ಕಟ್ಟಿಗೆಪೆಟ್ಟಿಗೆಲ್ಲಿ. ನಣ=ನೋಣ. ಸಟ್ಟನರಪತ್ತ = ನಡುರಾತ್ರಿ. ಹಿಂದಕ-ಮುಂದಕ=ವಾಂತಿ. ದಿಕಪಾಲ=ಚಿಲ್ಲಾಪಿಲ್ಲಿ. ಕಾಲ್ಮಡಿ=ಮೂತ್ರ. ಪಾಟಣಗಿ=ಮೆಟ್ಟಿಲು.

- - -

ಅಕ್ಕ ಮಹಾದೇವಿಯ ಹಾಡು

ಹೆಣ್ಣುಮಕ್ಕಳು ಈ ಹಾಡಿಗೆ 'ಜೈನರ ಹಾಡು' ಎಂದು ಎನ್ನುತ್ತಾರೆ. ಆದರೆ ಇದರ ಕಥೆಯು ಅಕ್ಕ ಮಹಾದೇವಿಯ ಕಥೆಯೊಡನೆ ಬಹಳವಾಗಿ ಹೋಲುತ್ತಿರುವುದರಿಂದ ನಾವು ಇದಕ್ಕೆ ಮೇಲ್ಕಂಡ ಹೆಸರನ್ನು ಕೊಟ್ಟಿದ್ದೇವೆ. ನಮ್ಮ ಊಹೆಯು ಬಹಳ ಮಟ್ಟಿಗೆ ಸರಿಯಾಗಿದೆಯೆಂದು ತೋರುತ್ತದೆ. ಹಾಗಿದ್ದುದಾದರೆ ಈ ಹಾಡಿಗೆ ಐತಿಹಾಸಿಕ ಮಹತ್ವವು ಅತಿಶಯವಾಗಿ ಉಂಟು.

ಮಗಳು ಮತ್ತು ತಾಯಿ ಇವರಿಬ್ಬರ ಸಂವಾದವಿದು. ತಾಯಿಯ ತವರವರು ಜೈನರು. ಕೊಟ್ಟ ಮನೆ ಲಿಂಗವಂತರದು. ತಾಯಿಯು ತನ್ನ ಸೋದರನಿಗೆ ಮಗಳನ್ನು ಕೊಡಲೆಳಸುತ್ತಾಳೆ. ಅದಕ್ಕೆ ಅವಳು ಒಪ್ಪುವುದಿಲ್ಲ. ತಾಯಿಯ ಸೋದರನು ತನ್ನೂರ ಒಡೆಯನೆಂದು ಹೇಳಲಾಗಿದೆ (೧-೪). ಮಗಳ ಒಪ್ಪಿಗೆ ಇಲ್ಲದಿದ್ದರೂ ಮನೆಯಲ್ಲಿ ಲಗ್ನದ ಸಾಹಿತ್ಯಕ್ಕೆ ಆರಂಭವಾಗು

ತ್ತದೆ. ಅದನ್ನೆಲ್ಲ ಅವಳು ತಿರಸ್ಕರಿಸುತ್ತಲೇ ಇರುತ್ತಾಳೆ(೫-೮). ಲಗ್ನದ ಸಂಭ್ರಮಕ್ಕೆಂದು ವರನ ಊರಿನಿಂದ ನಿಬ್ಬಣವು ಹೊರಡುತ್ತದೆ. ಇತ್ತ ತಾಯಿಯು ಉಬ್ಬಿನಿಂದ ಮಗಳನ್ನು ಶೃಂಗರಿಸಲೆಳಸುತ್ತಾಳೆ. ಅದಕ್ಕೆ ಅವ ಳೊಪ್ಪುವುದಿಲ್ಲ(೯-೧೮). ಕೊನೆಗೆ ವರನು ವೈಭವದಿಂದ ಮನೆಯ ಬಾಗಿ ಲಿಗೆ ಬಂದಾಗ ಕನ್ನೆಯು ಶಪಿಸುತ್ತಾಳೆ (೧೯-೨೨). ಅಂತೂ ಒತ್ತಾಯದಿಂದ ಅವಳ ಮದುವೆ ಮುಗಿಯುವುದೆಂದು ತೋರುತ್ತದೆ. ಹಾಡಿನಲ್ಲಿ ಈ ಮಾತಿನ ಬಗೆಗೆ ಏನೂ ಉಲ್ಲೇಖವಿಲ್ಲ. ನಂತರ ತಾಯಿಯ ತವರುಮನೆಯಿಂದ ಬಂದ ಬುತ್ತಿಯ ಊಟದ ಸಲುವಾಗಿ ತಾಯಿಮಕ್ಕಳಲ್ಲಿ ವಾಗ್ವಾದವಾಗುತ್ತದೆ. ಮಗಳನ್ನು ಗಂಡನ ಮನೆಗೆ ಕಳಿಸುವಾಗ ಬುತ್ತಿಗೆ ಬದಲು ಹಿಟ್ಟು, ಅಕ್ಕಿ ಮುಂತಾದ ಒಣ ಜೀನಸುಗಳನ್ನು ಕಟ್ಟಿಕೊಡುತ್ತಾರೆ. ಕನ್ನೆಯು ಆ ಸಾಹಿತ್ಯ ವನ್ನೆಲ್ಲ , ತೆಗೆದುಕೊಂಡು ಒಂದು ದೇವಾಲಯದಲ್ಲಿ ಹೋದವಳು ಅಲ್ಲಿಯೇ ಮಟ್ಟಮರೆಯಾಗಿಬಿಡುತ್ತಾಳೆ. ಇದರ ಮುಂದೆ ಅವಳ ಸಮಾಚಾರವೇ ಯಾರಿಗೂ ಗೊತ್ತಾಗುವುದಿಲ್ಲ (೨೩-೨೯).

ಛಂದಸ್ಸು:— ತ್ರಿಪದಿಗೆ ಸಮೀಪವಾಗಿದೆ.

ಶಬ್ದ ಪ್ರಯೋಗಗಳು:—ಅಂಕಬಂಕ=ಸೊಟ್ಟಪಟ್ಟ. ಡೊಂಕ=ವಕ್ರ. ಸೈದಾನ=ಸವಿಜೀನಸು. ಸತ್ತದಿನ=ಉತ್ತರಕ್ರಿಯೆ. ನಿಬ್ಬಣ=ಲಗ್ನಕ್ಕೆ ಬಂದ ಬೀಗರ ಗುಂಪು. ಬಣ್ಣದಲ್ಲಿ=ಒಪ್ಪಿನಿಂದ. ಖೋಡಿ=ಕೆಟ್ಟ (ಅವಲಕ್ಷಣ). ಛೆಜ್ಜಿ=ಸಜ್ಜೆಯ ಜೆಳೆ. ಛೆಲ್ಯಾಡು=ಹರಚೆಲ್ಲು. ಒತ್ತಾಡು=ತಾಕಲಾಡು. ಸೋಬಾನ=ಶೋಭನ. ಬಗಸುಳ್ಳ=ಬಲವುಳ್ಳ (ಗಟ್ಟಿಗನಾದ). ತಳವಾರ= ಅಗಸೆಯ ಕಾವಲುಗಾರ. ಕಾಲಮ್ಯಾಲಾಗಲಿ=ಸಾಯಲಿ.

ಬರದ ಹಾಡು

ಇಬ್ಬರು ಅಣ್ಣತಮ್ಮಂದಿರಿರುತ್ತಾರೆ. ಅಣ್ಣ ಶ್ರೀಮಂತ, ತಮ್ಮ ಬಡವ. ಅಣ್ಣನಿಗೆ ಮಕ್ಕಳಿಲ್ಲ, ತಮ್ಮನಿಗೆ ಬಹಳ ಮಕ್ಕಳು. ತಮ್ಮನು ಅಣ್ಣನಿಗೆ "ಒಂದು ಪಡಿಜೋಳವನ್ನು ಕಡವಾಗಿ ಕೊಡು, ನಿನ್ನ ಹೊಲದಲ್ಲಿ ಕೆಲಸವನ್ನು

ಮಾಡುವೆನು" ಎಂದನು. ಆ ಮಾತಿಗೆ ಅಣ್ಣನು ಒಪ್ಪಿ ಅದರಂತೆ ಮಾಡಿದನು. ತಮ್ಮನ ಹೆಂಡತಿಯು ಆ ಜೋಳವನ್ನು ತನ್ನ ಮನೆಯಲ್ಲಿ ಒಡೆಯುತ್ತಿದ್ದಾಗ ಭಾವನ ಹೆಂಡತಿಯು ಬಂದು ಅವು ತಮ್ಮ ಜೋಳವೆಂದು ಗುರುತಿಸಿ ಸುಚ್ಚಿನ ಗಡಿಗೆಯನ್ನು ಒಡೆದು ಇದ್ದ ಜೋಳವನ್ನು ತೆಗೆದುಕೊಂಡು ಹೋಗುತ್ತಾಳೆ. ಮೇಲೆ ಬಡವನ ಹೆಂಡತಿಯು ತನ್ನ ಎಂಟೂ ಮಕ್ಕಳನ್ನು ಕರೆದು ಕೊಂಡು ತವರುಮನೆಗೆ ಹೋಗುತ್ತಾಳೆ. ಅಲ್ಲಿ ತನ್ನ ಅಣ್ಣನ ಹೆಂಡತಿಗೆ ಒಂದು ಸೇರು ಜೋಳವನ್ನು ಕಡ ಬೇಡುತ್ತಾಳೆ. ಕೊಡದಿರಲು ಹುಡುಗರಿಗೆ ತುತ್ತು ರೊಟ್ಟಿಯಾದರೂ ಕೊಡೆಂದು ಕೇಳಿದಾಗ "ತುತ್ತುರೊಟ್ಟೀ ಬೇಡಲಿಕ್ಕೆ ಬಿಕ್ಕೆಗೆ ಬಂದಿದ್ದಿಯಾ?" ಎಂದು ಅತ್ತಿಗೆಯು ಎನ್ನುವಳು. ನಂತರ ಬಡವಿಯು ಅಂಗಡಿಗೆ ಹೋಗಿ ಕೊರಳಲ್ಲಿಯ ತಾಳಿಯನ್ನು ಕೊಟ್ಟು ವಿಷವನ್ನೂ ಅಕ್ಕಿಯನ್ನೂ ಕೊಂಡುತರುವಳು. ವಿಷಹಾಕಿ ಮಾಡಿದ ಬೋನವನ್ನು ಮಕ್ಕಳೊಡನೆ ಆ ಗಂಡಹೆಂಡರು ಉಣ್ಣುವರು. ಉಂಡು ಬರವನ್ನು ಶಪಿಸುತ್ತ ಬಾಗಿಲಿಕ್ಕಿಕೊಂಡು ಮಲಗಿಬಿಡುವರು. ಮಲ್ಲಾಡಕ್ಕೆ ಹೋದ ಆಕೆಯ ಅಣ್ಣನು ತಿರುಗಿಬಂದು ತಂಗಿಯ ಸುದ್ದಿಯನ್ನು ಕೇಳಿದಾಗ ಅವನ ತಾಯಿಯು ಎಲ್ಲವನ್ನೂ ಹೇಳುವಳು. ಅದನ್ನು ಕೇಳಿ, ಕೆಡಕೆನಿಸಿ ತಂಗಿಯ ಮನೆಗೆ ಬರುವರು ಬಂದು ನೋಡಿ ತನ್ನ ಜೀವವನ್ನು ಇಟ್ಟುಕೊಳ್ಳುವುದಕ್ಕೆ ಹೇಸಿ ತಾನೂ ಅವರೊಡನೆ ಸಾಯುತ್ತಾನೆ.

ಛಂದಸ್ಸು:—ಸಾಂಗತ್ಯಕ್ಕೆ ಸಮೀಪವಾಗಿದೆ.

ಶಬ್ದಪ್ರಯೋಗಗಳು:— ಸೊಲಗಿ=ಪಡಿ ಅಥವಾ ಸೇರು. ಗಾದಮೆತ್ತಿಗೆ=ಕಣಜದ ಬಾಯಿಯ ಮೆತ್ತಿಗೆ. ಹೆಣತಿ=ಹೆಂಡತಿ. ಇಸಾ=ವಿಷ. ಎಡಿ=ಅಗಲ. ಪೇಟಗಟಾರ ಮಾಡಿಕೊ=ಹೊಟ್ಟೆಯಲ್ಲಿ ಕಠಾರಿಯಿಂದ ಇರಿದುಕೊ. ಆಟ್ಟು=ಅಷ್ಟು. ತುತ್ತು=ತುಣುಕು. ಅಸೂ=ಅಷ್ಟು. ಬಾನಿನಾಗ=ಬೋನದಲ್ಲಿ.

ದ್ರೌಪದಿಯ ಹಾಡು

ಪಾಂಡವರು ಜೂಜಿನಲ್ಲಿ ದ್ರೌಪದಿಯನ್ನು ಸೋತಾಗ ಕೌರವರು ಅವಳ

ಸೀರೆಯನ್ನು ಸೆಳೆದ ಕತೆಯಿದು. ಇದರಲ್ಲಿ ಎಂಟನೆಯ ನುಡಿಯೊಂದನ್ನು ಬಿಟ್ಟರೆ ಉಳಿದೆಲ್ಲ ಹಾಡಿನ ಭಾವವು ಸಹಜವಾಗಿ ಲಕ್ಷ್ಯಕ್ಕೆ ಬರುವಂತಿದೆ. ಆದರೆ ಎಂಟನೆಯ ನುಡಿಯಲ್ಲಿ ಭೀಷ್ಮಾದಿಗಳನ್ನು ಕುರಿತು ದ್ರೌಪದಿಯು ಆಡಿದ ಮಾತು ಹೇಳಲ್ಪಟ್ಟಿದೆಯೋ ಏನೋ. ಹಾಗೆ ತಿಳಿದುಕೊಂಡರೆ ಅರ್ಥವು ಸುಲಭ ವಾಗುವುದು.

ಛಂದಸ್ಸು :—ಭೋಗಷಟ್ಪದಿ.

ಶಬ್ದ ಪ್ರಯೋಗಗಳು :—ಕರಿಯಪೂರ=ಹಸ್ತಿನಾವತಿ. ಫಾಶ=ಪಗಡಿ ಆಟದೊಳಗಿನ ಗಾಳುಗಳು. ಫಕೀರ=ಕಾಡುವ ಸನ್ಯಾಸಿ. ದಾರು ಮಾರು ಬದುಕು=ಸ್ಥಾವರಜಂಗಮ ಆಸ್ತಿ. ಕುಂದ್ಯಾನಾಡದಿರು=ಕುಂದಿಡಬೇಡ. ಸದರು=ಮುಖ್ಯ ಸ್ಥಳ. ರಗತ=ರಕ್ತ. ಉಡ್ಡ=ಚಬಕ. ಇಂಜಾನ=ಇಂಧನ. ಮಂಜಾನ=ಸುಂಬು (ಮಬ್ಬು)

" ದಂಡ ಬಂತವ್ವ ದಂಡ "

ಪಟ್ಟಣದ ದಾರಿಯ ಮೇಲಿರುವ ಒಂದು ಊರ ಬಳಿಯಲ್ಲಿ ದಂಡು ಬಂದಿಳಿದಾಗ ಒಬ್ಬ ಹೆಣ್ಣುಮಗಳು ನೋಡಲಿಕ್ಕೆಂದು ಹೋಗಿ ಡೇರೆಯ ಹತ್ತಿರ ನಿಂತಿದ್ದಳು. ಒಳಗೆ ಕುಳಿತ ಅಧಿಕಾರಿಯು ಅವಳ ರೂಪಕ್ಕೆ ಮರುಳಾಗಿ ಅವಳನ್ನು ಹಿಡಿದು ತರುವುದಕ್ಕೆ ಜವಾನರನ್ನು ಕಳಿಸುತ್ತಾನೆ (೧-೫). ಈ ಸುದ್ದಿಯನ್ನು ಕೇಳಿ ಅವಳ ತಾಯಿಯು ಓಡಿಬಂದು ದುಃಖಮಾಡುತ್ತಾಳೆ (೬-೮). ಆಗ ಮಗಳು ತಾಯಿಗೆ ತನ್ನ ಸುಖದುಃಖದ ಬಗ್ಗೆ ಕುರುಹುಗಳನ್ನು ಹೇಳುತ್ತಾಳೆ (೯-೧೦).

ಹೀಗೆ ಕುರುಹು ಹೇಳುವ ಪದ್ಧತಿಯು ಬಹುಪ್ರಾಚೀನ ಕಾಲದ್ದು. ಘಟೋತ್ಕಚನು ತಾನು ಸತ್ತರೆ ಮನೆಯ ಮುಂದಿನ ಸಪ್ತತಾಳ ವೃಕ್ಷಗಳು ನೆಲಕ್ಕುರುಳುವವೆಂದು ತನ್ನ ತಾಯಿಗೆ ಕುರುಹನ್ನು ಹೇಳಿ ಯುದ್ಧಕ್ಕೆ ಹೋದ ಸಂಗತಿ ಸುಪ್ರಸಿದ್ಧವಿದೆಯಲ್ಲವೇ ?

ಛಂದಸ್ಸು :—ತ್ರಿಪದಿಯ ಪೂರ್ವಾರ್ಧ.

ಶಬ್ದ ಪ್ರಯೋಗಗಳು :—ಢೇರೆ=ತಂಬೂ.

ಮದುವೆಯ ಹಾಡುಗಳು

ಈ ವಿಭಾಗವು ಹೆಣ್ಣುಮಕ್ಕಳ ಸಂಹಿತೆಯಿದ್ದಂತೆ. ಲಗ್ನದ ಬೇರೆಬೇರೆ ವಿಧಾನಗಳ ಪ್ರಸಂಗಗಳಲ್ಲಿ ಇವುಗಳನ್ನು ಹಾಡುವರು. ಈ ಹಾಡುಗಳು ಅವರ ಮಟ್ಟಿಗೆ ಯಜ್ಞಮಂತ್ರಗಳೇ ಸರಿ. ದಾಂಪತ್ಯವು ಜೀವನದ ಬಹುಮುಖ್ಯ ವಿಭಾಗವಾಗಿರುವುದರಿಂದ, ಅದು ಒಂದು ಮಹಾಪವಿತ್ರ ಯಜ್ಞದಂತೆ ಅವರಿಗೆ ತೋರಿದ್ದು ಆಶ್ಚರ್ಯವಲ್ಲ. ಇವು ಕೇವಲ ರಂಜನೆಯ ಹಾಡುಗಳಲ್ಲದ್ದರಿಂದ ಇವುಗಳನ್ನು ಬೇರೆ ದೃಷ್ಟಿಯಿಂದ ಓದಬೇಕು. ಆದರೆ ಇವುಗಳಲ್ಲಿ ರಸವಿಲ್ಲ ವೆಂತಲ್ಲ. ಒಂದೊಂದು ವಿಧಾನಕ್ಕೂ ಎಷ್ಟೆಷ್ಟೋ ಹಾಡುಗಳು ಸಿಕ್ಕಬಹುದಾದರೂ, ನಾವು ಒಂದೊಂದು ಹಾಡನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ.

ಭಾಟಗೀ ಹಾಡು

ಕನ್ಯಾಪಕ್ಷದವರೂ ವರಪಕ್ಷದವರೂ ಮೊದಲು ತಮ್ಮತಮ್ಮೊಳಗೆ ವಾಙ್ನಿಶ್ಚಯವನ್ನು ಮಾಡಿ ಕನ್ಯೆಗೆ ಕುಂಕುಮವನ್ನು ಹಚ್ಚುತ್ತಾರೆ. ಆ ಮೇಲೆ ಅವೇ ನಿಶ್ಚಯದ ಮಾತುಗಳನ್ನು ಸರ್ವಜನಸಾಕ್ಷಿಯಾಗಿ ಗಟ್ಟಿ ಮಾಡುತ್ತಾರೆ. ಆ ಕಾಲದ ನೈಮಿತ್ತಿಕ ಕಾರ್ಯಕ್ಕೆ ಭಾಟಗೆ ಅಥವಾ ಭಾಷ್ಟಿಗೆ ಹಾಕುವುದು ಎನ್ನುವರು. ಇದು ಆ ಪ್ರಸಂಗದ ಹಾಡು. ಇದರಲ್ಲಿ ಮೂರನೆಯ ನುಡಿಯ ಹೊರತು ಉಳಿದೆಲ್ಲ ಹಾಡು ಸಹಜವಾಗಿ ತಿಳಿಯು ವಂತಿದೆ. ಮೂರನೆಯ ನುಡಿಯಲ್ಲಿ ಹೇಳಿರುವುದೇನೆಂದರೆ, ಮೇಲುಪ್ಪರಿಗೆಯ ಮೇಲ್ಮನೆಯಲ್ಲಿ ಕುಳಿತು ಮದುವೆಯ ಮಾತನ್ನಾಡುತ್ತಿರುವಾಗ, ಆ ಮೇಲ ಟ್ಟಕ್ಕಿಂತ ತೀರ ಕೆಳಕ್ಕಿರುವ ಜೋಡು ಮಾವಿನ ಮರಗಳ ತುದಿಯ ಮೇಲೆ ಕುಳಿತ ಜೋಡೆರಡು ಹಕ್ಕಿಗಳು ಶುಭಶಕುನವನ್ನು ನುಡಿಯುತ್ತವೆ.

ಛಂದಸ್ಸು :—ತ್ರಿಪದಿ.

ಶಬ್ದಪ್ರಯೋಗಗಳು :— ಹ್ವಾದ್ರ=ಹೋದರೆ. ಉಮ್ಮಾಯದ=ಹರು

ಷದ. ಕುಸುಮಾಯದ=ಹೂವಿನಂಥ. ಗ್ವಾಡೀಯನೀ ತೆಳಗ=ಗೋಡೆಯನೆ ಈ ತೆಳಗೆ (ಗೋಡೆಯ ಕೆಳ ಬದಿಗೆ). ತಟ್ಟಂದರ ತೆಳಗ=ತಟ್ಟತಳಕ್ಕೆ. ಆಕಳ ಕರಸಾಕ್ಷಿ=ಗಾಯತ್ರಿಯ ಸಾಕ್ಷಿಯಿಂದ. (ಪ್ರತಿಜ್ಞಾಪೂರ್ವಕವಾಗಿ). ಶುಕ್ರ ವಾರ, ಮಂಗಳವಾರ ಇವು ಹೆಣ್ಣುಮಕ್ಕಳ ದೃಷ್ಟಿಯಲ್ಲಿ ಮಹತ್ವದ ದಿವಸ ಗಳು.

ಒಳಕಲ್ಲ ಪೂಜೀ ಹಾಡು

ಲಗ್ನಕ್ಕೆ ಬೇಕಾಗುವ ಹಿಟ್ಟಕ್ಕಿಯ ಸಾಹಿತ್ಯವನ್ನು ಸಿದ್ಧಮಾಡುವ ಕಾಲದಲ್ಲಿ ಮೊದಲಿಗೆ ಒರಳು, ಬೀಸುವಕಲ್ಲು ಮುಂತಾದವುಗಳ ಪೂಜೆ ಮಾಡಿ ಕೆಲಸವನ್ನು ಪ್ರಾರಂಭಿಸುತ್ತಾರೆ. ಆ ಪ್ರಸಂಗದ ಹಾಡಿದು.

ಛಂದಸ್ಸು:— ತ್ರಿಪದಿಯಾಗಿದೆ.

ಶಬ್ದಪ್ರಯೋಗಗಳು :— ವಳ್ಳ=ಒರಳು ಮಂಟಿಗಿ=ಕಾಲಲ್ಲಿ ಧರಿಸುವ ಒಂದು ಆಭರಣ.

ಅರಿಷಿಣ ಹಚ್ಚೊ ಹಾಡು

(೧)

ಅರಿಷಿಣ ಹಚ್ಚುವುದು ಲಗ್ನದ ಕಾಲದಲ್ಲಿ ಪ್ರಥಮದೀಕ್ಷೆಯಂತಿರುವುದು. ವರನಿಗೆ ಅರಿಷಿಣ ಹಚ್ಚುವಾಗ ಇದನ್ನು ಹಾಡುತ್ತಾರೆ. ಆಗ ಮುತ್ತೈದೆಯರು ನೆರೆದು ಹಾಡುತ್ತ, ವರನ ತಲೆಗೆ ವೀಳ್ಯದ ಎಲೆಯಿಂದ ಎಣ್ಣೆಯನ್ನು ಹಚ್ಚಿ, ಮೈಗೆ ಅರಿಷಿಣವನ್ನು ಬಳಿದು, ಸ್ನಾನ ಮಾಡಿಸುವರು.

ಛಂದಸ್ಸು:—ತ್ರಿಪದಿಯ ಪೂರ್ವಾರ್ಧ.

ಶಬ್ದಪ್ರಯೋಗಗಳು:— ನಮ ಶಿವಗ=ನಮ್ಮ ಮದುಮಗನಿಗೆ. ನೆಯ್ಯೆಣ್ಣೆ=ಸ್ನಿಗ್ಧವಾದ ಎಣ್ಣೆ. ಹಚ್ಚೊಟಿಗೆ=ಹಚ್ಚುವಪ್ಪರಲ್ಲಿ. ತ್ವಾಟ=ತೋಟ. ಎಲಿ=ವೀಳ್ಯದ ಎಲೆ. ನೀರ್ಸ್ಯಾಕನಾಗ್ಯಾವ=ನೀರೇಕೆ ಆಗಿವೆ.

ಅರಿಷಿಣ ಹಚ್ಚೋ ಹಾಡು

(೨)

ಕನ್ಯೆಗೆ ಅರಿಷಿಣ ಹಚ್ಚುವ ವಿಧಾನದ ಹಾಡಿದು.

ಛಂದಸ್ಸು:— ತ್ರಿಪದಿ.

ಶಬ್ದಪ್ರಯೋಗಗಳು:— ಕುರುಣಿ=ಮುಡಿಗೆ ಬಿಗಿಯುವ ಉಣ್ಣೆಯ ದಾರ. ಹಂಚಗೂಣಿ=ಹಚ್ಚಗಿನ ಕುರುಣಿ. ಬೆಂಚ (ಕೆಂಚ) ಗೂಣಿ-ಕೆಂಪು ಬಣ್ಣದ ಕುರುಣಿ. ನಾಗುರುಣಿ=ನಾಗರ ಹಾವಿನಂತೆ ಜೋಲುವ ಕುರುಣಿ (ಇದು ಒಂದು ಆಭರಣವಾಗಿರಲೂ ಬಹುದು). ಕುಸುವಲ್ಲಿ=ಹೂವಿನಂಥವಳು· ಭೂದೇವಿ=ಮದುಮಗಳು. ಚಿಲಕ=ತಿಲಕ. ಕೆಂಚ್ಯಾರು=ಕೆಂಪುಮೈಯವರು. ಲ್ಯಾವಳ=ಗೋಪು.

ಐರಾಣಿಯ ಹಾಡು

ಲಗ್ನ ಸಮಾರಂಭದ ಎರಡನೆಯ ದಿನದ ವಿಧಾನವಿದು. ಐದು ಮಂದಿ ಮುತ್ತೈದೆಯರು, ಕುಂಬಾರನ ಮನೆಯಿಂದ ಹೊಸ ಕೊಡಗಳನ್ನು ತಂದು ನೀರು ತುಂಬಿಕೊಂಡು ಬರುವರು. ಆಗಿನ ಹಾಡಿದು.

ಛಂದಸ್ಸು:— ತ್ರಿಪದಿ.

ಶಬ್ದಪ್ರಯೋಗಗಳು:— ಐರಾಣಿ=ಐದುಮಂದಿ ರಾಣಿಯರು ಹೊರುವ ಕೊಡ ಮತ್ತು ಮಗಿಗಳ ಸಮೂಹ.

ಸಂಡಿಗೆ ಕಡಿಯುವ ಹಾಡು

ಐರಾಣಿಯನ್ನು ತಂದ ಮೇಲೆ ಮುತ್ತೈದೆಯರು, ಒಂದು ಮಡಿಬಟ್ಟೆಯ ಮೇಲೆ ನಂದಿಯ ಮೂರ್ತಿಯೊಂದನ್ನು ಇಟ್ಟು, ಕಡಲೆಯ ಹಿಟ್ಟಿನ ಮುದ್ದೆಯನ್ನು ಕೈಯಲ್ಲಿ ಹಿಡಿದು, ದುಂಡುದುಂಡು ಗುಳಿಗೆಗಳನ್ನು ಮಾಡಿ ಆ ಮೂರ್ತಿಯ ಮೇಲೆ ಮಳೆಗರೆದಂತೆ ಎಸೆಯುವರು. ಆ ಕಾರಣದಿಂದಲೇ

ಈ ದಿನದ ವಿಧಾನಕ್ಕೆ "ನಂದಮಾಕ (ನಂದಿಮುಖ)"ದ ದಿವಸವೆನ್ನುವರು. ಈ ಸಂಬಂಧದ ಹಾಡು ಇದು.

ಶಬ್ದಪ್ರಯೋಗಗಳು:—ಒಡ್ಡಿ=ಒಡ್ಡುಳ್ಳ (ಐಸಿರಿಯ). ಪುರವಂತ ನಾಡು=ದೇವರ ಮುಂದೆ ವೀರಕುಣಿತವನ್ನು ಕುಣಿಯುವುದು. ಹಡದಿ=ಮಡಿ ಬಟ್ಟೆ. ಖನ್ನಿ=ಕನ್ಯೆ. ಅಬ್ಬರಣಿ=ಆರ್ಭಟ. ಬಿದುರಿನ ಮಳೆ=ಬಿರುಮಳೆ. ಸಮ ರಮ=ಸಂಭ್ರಮ.

ನೂಲು ಸುತ್ತುವ ಹಾಡು

ಲಗ್ನದಲ್ಲಿ ವಿಧಿಪೂರ್ವಕವಾಗಿ ಸ್ನಾನಮಾಡಿಸುವ ಪ್ರಸಂಗಗಳು ಎರಡು ಸಾರೆ ಬರುತ್ತವೆ. ಒಮ್ಮೆ ಅರಿಷಿಣ ಹಚ್ಚುವಾಗ; ಇನ್ನೊಮ್ಮೆ ಅಕ್ಷತೆಯ ಕಾಲಕ್ಕೆ. ಆಗ ನಾಲ್ಕು ಮೂಲೆಗೆ ನಾಲ್ಕು ತಂಬಿಗೆಗಳನ್ನಿಟ್ಟು, ಅವುಗಳ ಸುತ್ತುಮುತ್ತು ಮೇರೆಯಂತೆ ನೂಲು ಸುತ್ತಿ, ನಟ್ಟನಡುವೆ ಮಣೆಗಳನ್ನಿಟ್ಟು ಮದುಮಕ್ಕಳಿಗೆ ಎರೆಯುತ್ತಾರೆ. ಆಗಿನ ಕಾಲಕ್ಕೆ ನೂಲು ಸುತ್ತುವ ಹಾಡಿದು.

ಛಂದಸ್ಸು:— ತ್ರಿಪದಿ.

ಶಬ್ದಪ್ರಯೋಗಗಳು:—ಖಂಡಿಕಿ=ನೂಲಿನ ಕುಕ್ಕಡಿ. ಹಸನ=ಸ್ವಚ್ಛ. ಅಲ್ಲ ಮತ್ತು ಗಿಲ್ಲ=ನೀರಿನ ಸಪ್ಪಳ.

ಅಡಿಕೆ ಆಡುವ ಹಾಡು

ವಧುವರರಿಗೆ ಸರ್ವಜನರು ಕೂಡಿ ಅಕ್ಕೀಕಾಳು (ಅಕ್ಷತೆ) ಒಗೆದ ಮೇಲೆ ತುಸು ಹೊತ್ತಿನಲ್ಲಿ ಅವರಿಂದ ನಗೆಯಾಟವನ್ನು ಆಡಿಸುತ್ತಾರೆ. ಆಗ ಒಬ್ಬರು ಅಡಿಕೆಯನ್ನು ಗಟ್ಟಿಯಾಗಿ ಹಿಡಿಯಬೇಕು; ಇನ್ನೊಬ್ಬರು ಅದನ್ನು ಬಿಡಿಸಿಕೊಳ್ಳಬೇಕು. ಆಗ ಸುತ್ತಮುತ್ತಲಿನ ಹೆಣ್ಣುಮಕ್ಕಳು ಈ ಹಾಡನ್ನು ಹಾಡುವರು.

ಛಂದಸ್ಸು:—ತ್ರಿಪದಿ.

ಶಬ್ದಪ್ರಯೋಗಗಳು:—ಐದು ಅಕ್ಷರ=ಶಿವಪಾರ್ವತಿ ಎಂಬ ಐದು ಅಕ್ಷರಗಳಾಗಿರಬಹುದು. ಮಲ್ಲಿಗ್ಹೂವಿನ ಕ್ರಮದಿಂದ= (ಅಡಿಗಳು) ಮಲ್ಲಿಗೆಯಂತೆ ಮೃದುವಾಗಿವೆಯೆಂದು ಭಾವಿಸಿ. ಪಾದಲಿ=ಪಾದದಲ್ಲಿ. ಪದಮ= ಪದ್ಮಚಿಹ್ನ. ಬಲಬಂದು=ಬಲವು ಬರಲಿ. ಬಟ್ಟಲಿ=ಬೆರಳಲ್ಲಿ. ಒಂಕಿ=ತೋಳಿನ ಆಭರಣ. ಸರಗಿ=ಕೊರಳಿನ ಆಭರಣ. ಕಾಯಾಂಗ=ಕಾಯಿಯಂತೆ. ಭಾಗ=ಸ್ಥಳ.

ಭೂಮದ ಹಾಡು

"ಭೂಮ"ವೆಂಬ ಶಬ್ದಕ್ಕೆ ಸಂಸ್ಕೃತದಲ್ಲಿ "ಸರ್ವವನ್ನೊಳಗೊಂಡದ್ದು"ಎಂಬರ್ಥವಿದೆ. "ಭೂಮ" ಎಂದರೆ ಖಂಡರಹಿತವಾದದ್ದು. "ಖಂಡದಲ್ಲಿ ಸುಖವಿಲ್ಲ, ಅಖಂಡದಲ್ಲಿ ಸುಖವಿದೆ" ಎಂಬರ್ಥದ ಉಪನಿಷದ್ವಾಕ್ಯವೊಂದು ಸರ್ವಶ್ರುತವೇ ಇದೆ. "ಬಿಡಿಯಲ್ಲಿ ಸುಖವಿಲ್ಲ, ಇಡಿಯಲ್ಲ ಸುಖವಿದೆ" ಎಂದು ಅದರ ಅರ್ಥ.

ಅಕ್ಷತೆ ಬಿದ್ದಮೇಲೆ, ಮತ್ತು ಮೆರವಣಿಗೆ ಮುಗಿದ ಮೇಲೆ, ಹೀಗೆ ಎರಡು ಸಾರೆ ಈ "ಭೂಮದ" ವಿಧಾನವು ಜರುಗಿಸಲ್ಪಡುತ್ತದೆ. "ಭೂಮ"ವೆಂದರೆ ಒಂದು ರೀತಿಯಿಂದ ಲಗ್ನಶಾಂತಿಯ ಮಹಾನ್ಯೈವೇದ್ಯ (ಬಡಿವಾಣ) ವೆಂದು ಹೇಳಬಹುದು. ಸರ್ವವಿಧದ ಪಕ್ವಾನ್ನಗಳನ್ನು ಮದುಮಕ್ಕಳ ಮುಂದೆ ಹೊಸದುರುಡಿ(ಬಿದುರಿನ ಬುಟ್ಟಿ)ಯ ಕೆಳಗೆ ಮುಚ್ಚಿ ಇಟ್ಟು ಮುತ್ತೈದೆಯರು ಮತ್ತು ವಿವಾಹಿತ ಪುರುಷರು ಅದನ್ನು ತೆರೆದು ಉಣ್ಣುವರು. ಮೊದಲನೆಯ ಭೂಮ ಹೆಣ್ಣುಮಕ್ಕಳದು. ಎರಡನೆಯದು ಗಂಡಸರದು.

ಇದರಲ್ಲಿ ಸರ್ವಭೋಜನಪದಾರ್ಥಗಳ ಸಮಾವೇಶವಿರುವುದರ ಅರ್ಥವು ದಂಪತಿಗಳ ಸಾಂಸಾರಿಕ ಜೀವನದಲ್ಲಿ ಬರತಕ್ಕ ಸರ್ವವಿಧದ ಸಂಗತಿಗಳನ್ನು ಸೂಚಿಸುವುದು. ಜೀವನದ ಸರ್ವಾಂಗೀನ ಸ್ವರೂಪವನ್ನು ಮಹಾನ್ಯೈವೇದ್ಯದಂತೆ (ಈಶಪ್ರಸಾದವೆಂದು) ಸ್ವೀಕರಿಸುವುದಕ್ಕೆ ದಂಪತಿಗಳು ದೀಕ್ಷೆ ಹೊಂದಿದಂತೆಯೇ ಸರಿ.

ಛಂದಸ್ಸು :—ತ್ರಿಪದಿ.

ಶಬ್ದ ಪ್ರಯೋಗಗಳು:— ಹಂದವ್ರೂರದಾಗ=ಹಂದರದಲ್ಲಿ. ಪುಟ ಮಾಡು=ಹೊತ್ತಿಸು. ಮಾನಾರಿ=ಮಹಾನಾರಿ. ಮಾನಾರಿಗೆ ನಂದಿಯ ಸಂಬಂಧವೇನೋ ನಮಗ ತಿಳಿಯದು. ಛಳಿಕೊಟ್ಟು=ಸಿಂಪಡಿಸಿ. ಛೆಜ್ಜ ಕ= ಸಜ್ಜಿಗೆ. ಮಾಸ=ಒಂದು ಅಳತೆ. ಚಾಲಿ=ಮೆಳೆ? ಹಾಳಾಗ=ಹಾಳುನೆಲದಲ್ಲಿ. ಮಡ್ಡಿ=ಮೊರಡಿ ಭೂಮಿ. ಎರಿ=ಕರಿನೆಲ. ಎಸೆ=ವಾಸನೆ ಹಬ್ಬು. ಶಾಂವಿಗಿ, ಕುರುಡಿ=ಊಟದ ಪದಾರ್ಥಗಳು. ಕೊನೆಯ ನುಡಿಗಳಲ್ಲಿ ಬರುವ ಸೋಲು ಗೆಲವುಗಳು ಊಟಕ್ಕೆ ಸಂಬಂಧಿಸಿವೆ. ನೀರಮುಗಿ=ಕೈತೊಳೆದುಕೊ.

ಬೀಗರ ಹಾಡು

"ಹೊಳೆ ದಾಟದ ಮೇಲೆ ಅಂಬಿಗರ ಮಿಂಡ" ಎನ್ನುವಂತೆ, ಲಗ್ನದ ಮುಖ್ಯ ವಿಧಾನಗಳೆಲ್ಲ ಮುಗಿದ ಮೇಲೆ, ಮದುಮಕ್ಕಳ ಮೆರವಣಿಗೆ ಹೊರಟ ಕಾಲಕ್ಕೆ, ಬೀದಿಯಲ್ಲಿ ಎರಡೂ ಕಡೆಯ ಬೀಗರ ಪಕ್ಷದಿಂದ ಹೆಣ್ಣುಮಕ್ಕಳು ಎರಡು ತಂಡಗಳಾಗಿ ಒಬ್ಬರನ್ನೊಬ್ಬರು ಅಪಹಾಸ್ಯಮಾಡುತ್ತಾರೆ. ಅದರ ಮೂಲಕ ಆಗಿನ ಮಟ್ಟಿಗೆ ಕದನಗಳೂ ಆಗುತ್ತವೆ. ನಮಗೇನೋ ಇಂತಹ ಮಾತು ಅಸಹ್ಯಕರವಾಗಿ ಕಾಣುವುದು ಸಹಜ. ಆದರೆ ಜೀವನದ ಸರ್ವ ಅಂಗಗಳನ್ನೂ ಒಳಗೊಂಡ 'ಭೂಮಾ'ಪೂಜಕರಾದ ಪ್ರಾಚೀನರು ಈ ತರ ಹದ ನಗೆಚಾಟಿಕೆಗೂ ತಕ್ಕ ಸ್ಥಾನವನ್ನೇ ಕೊಟ್ಟಿದ್ದಾರೆಂದು ತೋರುತ್ತದೆ.

ಛಂದಸ್ಸು:— ತ್ರಿಪದಿ.

ಶಬ್ದ ಪ್ರಯೋಗಗಳು:— ಸರಕ್ಕ ಸರಿತಲ್ಲ=ಕಾರ್ಯವೆಲ್ಲ ಸರಕ್ಕನೆ ಮುಗಿಯಿತಲ್ಲ. ಸುರಪ್ಪ=ಸ್ವರೂಪ. ಭಣವಿ=ಮೇವಿನ ಒಟ್ಟಲು. ಬೋಳ್ಹೋರಿ= ಕೊಂಬು ಮುರಿದ ಹೋರಿ. ಹೊರಿಹುಲ್ಲು=ಬಾಚಿಕೊಳ್ಳದ ಮುಂಗುರುಳು. ಗುಳ್ಳ=ಮಂಗಲಸೂತ್ರ. ಕೈಪಾಳಿ= ಹಿಡಿಕೆಯ ಬಟ್ಟಲು. ಎಟ್ಹೊತ್ತಾಯ್ತು= ಎಷ್ಟೋ ಹೊತ್ತಾಯ್ತು. ಕೂಕಂ=ಕುಂಕುಮ.

ಕೂಸು ಒಪ್ಪಿಸುವ ಹಾಡು

ವರನ ತಾಯಿತಂದೆಗಳಿಗೆ ಸರ್ವಜನಸಾಕ್ಷಿಯಾಗಿ ವಧುವಿನ ತಾಯಿತಂದೆಗಳು ಮಗಳನ್ನು ಒಪ್ಪಿಸಿಕೊಡುವರು. ಮದುವೆಯ ವಿಧಾನಗಳಲ್ಲಿ ಇದು ಕೊನೆಯದು. ಆ ಸಮಯದಲ್ಲಿ ಹೆಣ್ಣುಮಕ್ಕಳು ಈ ಹಾಡನ್ನು ಹಾಡುತ್ತಿರುತ್ತಾರೆ. ಆಗ ಕಣ್ಣೀರು ಸುರಿಸದೆ ಒಬ್ಬರೂ ಉಳಿಯಲಾರರು. ಇದೊಂದು 'ಮಹಾ ಭಾವಗೀತ.' ಹುಟ್ಟಿದ ಮನೆಯಿಂದ ಹೆಣ್ಣುಮಕ್ಕಳನ್ನು ಹೊರಗೆ ನೂಕುವಂತಿರುವ ಈ ಲಗ್ನವೆಂಬುದರ ಸತ್ಯಸ್ವರೂಪವು ಆಗ ಒಡೆದು ಕಾಣುತ್ತಿರುತ್ತದೆ. ಈ ಹೆಣ್ಣು ಒಪ್ಪಿಸುವ ವಿಧಾನಕ್ಕೆ 'ನಾಗೋಲಿ ಚೌಗೋಲಿ' ಎಂದು ಹೆಸರಿದೆ. ಈ ವಿಧಾನ ಮುಗಿದ ಬಳಿಕ ಬೀಗರು ಮದುವೆಯ ಮನೆಯಲ್ಲಿ ನೀರು ಸಹ ಕುಡಿಯದೆ ತಮ್ಮ ಊರ ಹಾದಿಯನ್ನು ಹಿಡಿಯುತ್ತಾರೆ. ಆದ್ದರಿಂದ 'ನಾಗೋಲಿ ಚೌಗೋಲಿ' ಎಂಬುದರ ಅರ್ಥವು 'ನಾಗಾಲ ಚೌಗಾಲ' (ನಾಗಾಲೋಟ) ಎಂದು ಇರಬಹುದು. "'ನಾಗೋಲಿ ಚೌಗೋಲಿ' ಆದ ಬಳಿಕ ನಾಯಿ ಸಹ ನೀರು ಕುಡಿಯುವುದಿಲ್ಲ" ಎಂದು ಗಾದೆಯ ಮಾತಿದೆ.

ಛಂದಸ್ಸು:— ತ್ರಿಪದಿಯಾಗಿದೆ.

ಶಬ್ದಪ್ರಯೋಗಗಳು:— ಹರಿಯಾಗ=ಬೆಳಗಿಗೆ. ಹಾಲಾಬಾನ=ಹಾಲೂ ಅನ್ನ. ಬೆಳಗಾಕ=ಉಜ್ಜುವುದಕ್ಕೆ; ತೊಳೆಯುವುದಕ್ಕೆ. ನೇಬಿ=ನಂಬಿ. ಬಳಗಾದ=ಬಳಗವಿದೆ. ಮಾನ್ಯದ ಹೊಲ=ಉಂಬಳಿಯ ಹೊಲ. ಒಮ್ಮನ= ನಾಲ್ಕು ಸೇರು. ಹಂತೀಲಿ=ಹತ್ತರ. ಬಣ್ಣ=ಸೀರೆ. ತಳವಲ=ತಳಿರು ತೋರಣ. ಖಿಸಿ=ಕುಕ್ಕು.

ಸೋಬಾನದ ಹಾಡುಗಳು

ಮಾನವದೇಹದಲ್ಲಿ ಪೂರ್ಣಸೌಂದರ್ಯವು ಪ್ರಕಟವಾಗುವ ಕಾಲಗಳು ಎರಡು. ಒಮ್ಮೆ ಎಳಗೂಸಿದ್ದಾಗ, ಇನ್ನೊಮ್ಮೆ ಪ್ರಾಯವೇರುವಾಗ. ಯೌವನದ ಬೆಡಗು ಶೃಂಗಾರರಸಕ್ಕೆ ಉದ್ದೀಪಕ. ಹೆಣ್ಣಿನ ಶೃಂಗಾರವನ್ನು ಹೆಣ್ಣುಮಕ್ಕಳೇ ಬಣ್ಣಿಸಿದ್ದು ಸೋಬಾನದ ಹಾಡುಗಳಲ್ಲಿ ನೋಡಲಿಕ್ಕೆ ಸಿಗುವಂತಿದೆ. ಶೃಂಗಾರವನ್ನು ನೈಸರ್ಗಿಕವಾಗಿ ಲಜ್ಜಾಶೀಲರಾದ ನಾರಿಯರು ವರ್ಣಿಸಿದ ರೀತಿಗೂ ಸ್ವಚ್ಛಂದತೆಗಾಸ್ಪದವಿರುವ ಪುರುಷರು ವರ್ಣಿಸಿದ ರೀತಿಗೂ ಮಹದಂತರವಿರುತ್ತದೆ. ಲಾವಣಿಯೊಳಗಿನ ಶೃಂಗಾರಕ್ಕೂ ಸೋಬಾನದ ಹಾಡುಗಳೊಳಗಿನ ಶೃಂಗಾರಕ್ಕೂ ಸರಿಹಚ್ಚಿ ನೋಡಿದರೆ ನಮ್ಮ ಈ ಅಭಿಪ್ರಾಯವು ಸ್ಪಷ್ಟವಾಗುವುದು. ಕವಿಚರಿತ್ರೆಯಲ್ಲಿ ಬಂದ ಕುಮಾರವ್ಯಾಸನ ದ್ರೌಪದಿಯ ಚೆಲುವಿಕೆಯ ವರ್ಣನೆಗೂ ರಾಜಶೇಖರವಿಳಾಸ ಮುಂತಾದ ಕಾವ್ಯಗಳೊಳಗಿನ ವೇಶ್ಯೆಯರ ವರ್ಣನೆಗೂ ಇರುವ ವ್ಯತ್ಯಾಸವನ್ನು ಲಕ್ಷ್ಯಕ್ಕೆ ತಂದುಕೊಂಡರೆ ಮೇಲ್ಕಂಡ ನಮ್ಮ ಮಾತಿನ ಭಾವವು ಇನ್ನಿಷ್ಟು ಸ್ಫುಟವಾಗುವುದು.

ಹೆಣ್ಣುಮಕ್ಕಳು ವರ್ಣಿಸಿದ ಶೃಂಗಾರದಲ್ಲಿ ಒಂದು ಸಹಜವಾದ ಜೋಕೆಯಿದೆ. ಗಂಡಸರ ಹಾಡುಗಳಲ್ಲಿ ರೂಪವರ್ಣನೆಯು ಮೂರು ವಿಧದಲ್ಲಿ ಮಾಡಲ್ಪಟ್ಟಿದೆ. "ಮನಸ ಜೈನರ ಮಡದಿ" ಎಂಬ ಈ ಹಾಡಿನಲ್ಲಿ ಇಡೀ ಯೌವನಕ್ಕೆ ಸಂಬಂಧವಾಗುವ ಉಪಮೆಗಳಿವೆ. ಇದು ಒಂದು ವಿಧ. "ಹಿಂಬಳಿ ಮುಂಬಳಿ" ಮತ್ತು "ರನ್ನದುಡುಗುಣಿ" ಎಂಬೆರಡು ಹಾಡುಗಳಲ್ಲಿ ಮೈಮೇಲಿನ ಅಲಂಕಾರಗಳ ವರ್ಣನೆಯಿಂದ ಶೃಂಗಾರಕ್ಕೆ ಬಣ್ಣ ಕೊಡಲು ಯತ್ನಿಸಲಾಗಿದೆ. ಇದು ಎರಡನೆಯ ವಿಧ. ಇನ್ನು "ಹಸುಮಗಳು ನೀಲಮ್ಮ" ಮತ್ತು "ಹಣಿ ಎಂಬು ಭಾಂವಕ" ಎಂಬೆರಡು ಹಾಡುಗಳಲ್ಲಿ "ಅಕ್ಕ ಭಾವsಗ ವರನಂದ" "ನಾರೀಗಿ ತಮಗ ವರನಂದ" ಮುಂತಾದ ಮಾ

ಗಳಿಂದ ಪರ್ಯಾಯದಿಂದ ರೂಪವನ್ನು ವರ್ಣಿಸಿದಂತಿದೆ. ಇದು ಮೂರನೆಯ ವಿಧ.

"ಬಾಲಿ ತಾ ಮೈನೆರದು" ಎಂಬ ಹಾಡಿನ ಮೊದಲಿನ ನಾಲ್ಕು ನುಡಿಗಳಲ್ಲಿ ಋತುಸಮಯದ ತಾತ್ಕಾಲಿಕ ಮುಖಲಕ್ಷಣ ಮುಂತಾದವುಗಳ ಸೊಗಸಾದ ವರ್ಣನೆಯಿದೆ. ಇದು ನಾಲ್ಕನೆಯ ವಿಧವೆಂದು ಹೇಳಬಹುದು.

"ಮನಸ ಜೈನರ ಮಡದಿ"

ಈ ಹಾಡಿನಲ್ಲಿ ಮೊದಲಿನಿಂದ ಕೊನೆಯ ವರೆಗೆ ಒಂದೇ ಸಂದರ್ಭದ ವರ್ಣನೆಯಿರುವುದರಿಂದ ತಿಳಿದುಕೊಳ್ಳಲಿಕ್ಕೆ ನಡುವೆ ಎಲ್ಲಿಯೂ ತೊಂದರೆ ಬರುವಂತಿಲ್ಲ.

ಛಂದಸ್ಸು :—ಮಂದಾನಿಲರಗಳೆಗೆ ಸಮೀಪವಾಗಿದೆ.

ಶಬ್ದಪ್ರಯೋಗಗಳು :—ಮನಸ ಜೈನರು=ಹಿಂದಕ್ಕೆ ಬಹಳ ಘನವಂತಿಕೆಯಿದ್ದ ಒಂದು ಜಾತಿ. ಗಂಬಿರಳ=ಗಂಭೀರಳು. ಸೋಗಿನ=ಒಯ್ಯಾರದ. ಇಗತಿ=ಯುಕ್ತಿಯುಳ್ಳವಳು. ಜೂಜ=ಸ್ಪರ್ಧಗಾರ್ತಿ. ಹಸಿಯ ಜಗಲಿ=ಲಗ್ನ-ಫಲಶೋಭನಗಳ ಪೀಠ. ನಾಗೇಂದ್ರನ ಅರಗಲ್ಲ=ಹಾವಿನ ಹೆಡೆಯೊಳಗಿನ ಮಣಿ. ಅರಗಲ್ಲು=ಅರಸುಗಲ್ಲು (ರತ್ನ). ಕಲ್ಪ=ತಲ್ಪ (?) ಮಾಣಿಕದಾಗಿನ ಏಣ, ಭಂಗರದಾಗಿನ ಭರಣೆ=ಮಾಣಿಕದ ಏಣು, ಭಂಗಾರದ ಭರಣಿ.

"ಹಿಂಬಳಿ ಮುಂಬಳಿ"

ಈ ಹಾಡಿನಲ್ಲಿ ಮೊದಲಿನ ಎರಡು ನುಡಿಗಳಲ್ಲಿ ಕನ್ನೆಯ ಅಲಂಕಾರ ವರ್ಣನೆಯಿದೆ. ಮೂರನೆಯ ನುಡಿಯಲ್ಲಿ ವರನ ಘನವಂತಿಕೆಯನ್ನು ಹೇಳಿದೆ. ನಾಲ್ಕನೆಯ ಮತ್ತು ಐದನೆಯ ನುಡಿಗಳಲ್ಲಿ ಕನ್ನೆಯನ್ನು ಗೆಳತಿಯರು ಪ್ರಶ್ನಿಸುತ್ತಾರೆ.

ಛಂದಸ್ಸು :—ಮಂದಾನಿಲ ರಗಳೆ.

ಶಬ್ದಪ್ರಯೋಗಗಳು :—ಗಿರಾಕಿ=ಹರದಿ (ಸುಂದರಿ). ವಾನ್ಯಾಡು ತುರಬ=ಅಲೆದಾಡುವ ಮುಡಿ. ವನಪಿಲೆ=ಒಯ್ಯಾರದಿಂದ. ಖನ್ನಿ=ಕನ್ನೆ. ಚಿತ್ರ ಬಲ್ಲಬೊ=ಚಿತ್ರವಲ್ಲಭ (ಪ್ರಿಯ). ನಿಲಗುದರಿ=ನಿಲುವಿಕೆಯುಳ್ಳ ಕುದುರೆ. ಮದನಾರಿ=ಯೌವನೆ. ಸದರ=ಸರಿಗದ್ದುಗೆ. ಇಂಜನ ಮಳಿಯ ಗಂಧದ ಗೀರ= ಭೋರಮಳೆಯ ಹನಿಯ ಧಾರೆಗಳಂತೆ ಒಪ್ಪುವ ಗಂಧದ ಗೀರುಗಳು (ಕೈಗೆ).

"ರನ್ನ ದುಡುಗುಣಿ"

ಈ ಹಾಡಿನಲ್ಲಿ ವಸ್ತ್ರಾಭರಣಗಳ ವರ್ಣನೆಯಿದೆ.

ಛಂದಸ್ಸು :—ಮಂದಾನಿಲ ರಗಳೆ.

ಶಬ್ದಪ್ರಯೋಗಗಳು :—ಇಟ್ಟೆದಳ=ಇಟ್ಟಿದ್ದಾಳೆ. ಎಣಿಕಿನಿಲ್ಲದೆ= ಎಣಿಕೆ ಇಲ್ಲದೆ. ಹಸ್ಯಾ ಮಾಡಿ=ಹಾಸ್ಯ ಮಾಡಿ. ದಿಮಿದಿಮಿಗಾರಳ=ತುಂಬು ಮೈಯವಳು. ವಾರಳು=ಓರಣವುಳ್ಳವಳು. ಕಂಡುಸಿ=ಖಂಡಿತವಾಗಿ. ಧನೂರ ಬಣ್ಣ=ಧನ್ನೂರಿನ ಸೀರೆ.

"ಬಸವೇಸೂರನ ಮಡದಿ." ಇಲ್ಲಿ ವರನನ್ನು ಬಸವೇಶ್ವರನಿಗೆ ಹೋಲಿಸಿದೆ. ಹೀಗೆ ಇಂತಹ ಹಾಡುಗಳಲ್ಲಿ ಗಂಡಹೆಂಡಿರನ್ನು ಶಿವಪಾರ್ವತಿಯರಿಗೂ ಹರಿ ಲಕ್ಷ್ಮಿಯರಿಗೂ ಹೋಲಿಸುವುದುಂಟು.

"ಬಾಲಿ ತಾ ಮೈನೆರದು"

ಈ ಹಾಡಿನಲ್ಲಿ ಸೊಸೆಯ ಸಲುವಾಗಿ ಮಾವಯ್ಯನು ತೋರಿಸುವ ಅಕ್ಕ ರತೆಯು ವರ್ಣಿಸಲ್ಪಟ್ಟಿದೆ.

ಛಂದಸ್ಸು:—ತ್ರಿಪದಿ

ಶಬ್ದಪ್ರಯೋಗಗಳು:—ಮಕಬಾಡಿ=ಮುಖವು ಬಾಡಿ. ಬಡಿಗ್ಯಾರು=

ಬಡಗಿಗಳು. ಮೆಲಿ=ಮೀ (ಎರಕೊಳ್ಳು). ಮಡಿಗೋಳ=ಮಡಿಗಳನ್ನು. ದಸಿ ಮಕದ=ಒಳ್ಳೇ ದಶೆಯುಳ್ಳ ಮುಖಾಕೃತಿಯ.

" ಹಣೆಯೆಂಬೊ ಭಾಂವಕ "

ಈ ಹಾಡಿನಲ್ಲಿ ಸತಿಯ ವಿಷಯದಲ್ಲಿ ಪತಿಗಿರುವ ಅಕ್ಕರತೆ ವರ್ಣಿಸಲ್ಪಟ್ಟಿದೆ. ಹಣೆಗೆ ದಂಡೆಯನ್ನು ಕಟ್ಟಿ ನೋಡುತ್ತಾನೆ. ಕೈಗೆ ಕಡಗ, ದ್ವಾರೀ ಮುಂತಾದ ಆಭರಣಗಳನ್ನಿಡಿಸಿ ನೋಡುತ್ತಾನೆ. ಅಷ್ಟಕ್ಕೂ ಸಾಲದೆ ಬಾಸಿಗವನ್ನು ತನ್ನಿರೆನ್ನುತ್ತಾನೆ. ತಂದು ಕೊಟ್ಟವರಿಗೆ ಪಾರಿತೋಷಿಕವನ್ನು ಕೊಡುತ್ತಾನೆ.

ಛಂದಸ್ಸು:—ತ್ರಿಪದಿಯ ಪೂರ್ವಾರ್ಧದಂತಿದೆ.

ಶಬ್ದಪ್ರಯೋಗಗಳು:—ಭಾಂವಕ್ಕ=ಸ್ಥಾನಕ್ಕೆ. ಗೂನಿ=ಗೋಚಲು. ಕೊಡವಿ=ಹಸುಮಗಳು. ತಗತಾರ=ತೆಗೆದುಕೊಂಡು ಬಾರೆ. ನಂದಿಸೋಪಾನ=ಪೂರ್ವಕಾಲದಲ್ಲಿ ಪ್ರಚಾರದಲ್ಲಿದ್ದ ಮೆಟ್ಟಿಲುಗಳ ಸಾಲು. ನಸಲೀಗಿ=ನೊಸಲಿಗೆ (ಹಣೆಗೆ). ಗುಂಡುಗದ್ಯಾಣದ ಹೊಲ=ದುಂಡಗಿನ ಆಕಾರದ ಹೊನ್ನಿನ ನಾಣ್ಯಗಳನ್ನು ಕೊಟ್ಟು ಕೊಂಡ ಹೊಲ.

" ಹಸುಮಗಳS ನೀಲಮ್ಮ "

ಫಲಶೋಭನದ ಸಂಭ್ರಮವು ಇದರಲ್ಲಿ ವರ್ಣಿಸಲ್ಪಟ್ಟಿದೆ.

ಛಂದಸ್ಸು:—ತ್ರಿಪದಿ.

ಶಬ್ದಪ್ರಯೋಗಗಳು:—ನಸಲಿಮಾರಗ=ನೊಸಲಮಾರ್ಗ (?) ಅರವೊತ್ತಿನ ರಾಣ್ಯಾರ್ಯಾ=ದೊಡ್ಡ ಮನೆತನದ ಮೂಲಕ ಮನೆಗೆಲಸವು ಮುಗಿಯುವುದಕ್ಕೆ ತಡವಾಗುವುದರಿಂದ ಆರವೊತ್ತಿಗೆ ಸರವೊತ್ತಿಗೆ ಊಟ ಮಾಡುವರು. ಎಡ್ಡು=ಎರಡು. ಪಂಕನಲ್ಲಾಡಿ=ಪಕ್ಕಗಳನ್ನು ಅಲುಗಿಸಿ. ಕಂಗನಲ್ಲಾಡಿ=ಗರಿಗಳನ್ನು ಅದುರಿಸಿ. ವರ=ತಕ್ಕ. ಹಕ್ಕಿ ಹಸಿಗೊಯ್ಯ=ಹಕ್ಕಿಗಳಿರಾ ಸೇಸೆ ಎರೆಯಿರಿ. ಕತೀ ನಡಿಸು=ಕಾರ್ಯವನ್ನು ಸಾಗಿಸು.

ಇತರ ವಿಧಾನಗಳು

ಮದುವೆ ಶೋಭನಗಳ ನಂತರ ಬರುವ ವಿಧಾನದ ಹಾಡುಗಳನ್ನೆಲ್ಲ ಈ ವಿಭಾಗದಲ್ಲಿ ಕೂಡಿಸಬೇಕೆಂದು ನಮ್ಮ ಇಚ್ಛೆ. ಹೆಣ್ಣುಮಕ್ಕಳು ಚೊಚ್ಚಿಲು ಬಸಿರಾದಾಗ ಐದನೆಯ ಇಲ್ಲವೆ ಏಳನೆಯ ತಿಂಗಳಲ್ಲಿ ಒಂದು ವಿಧಾನವು ಜರುಗಿಸಲ್ಪಡುತ್ತದೆ. ಮತ್ತು ಹಡೆದಾಗ ಕೂಸಿಗೆ ನಾಮಕರಣ ಮಾಡುವ ಕಾಲಕ್ಕೆ ಇನ್ನೊಂದು ವಿಧಾನವು ಜರುಗಿಸಲ್ಪಡುತ್ತದೆ. ಬಹುಶಃ ಇಲ್ಲಿಗೆ ವಿಧಾನಗಳೆಲ್ಲ ಮುಗಿದಂತಾಗುವವು.

ಕುಬಸಾ ಮಾಡೂ ಹಾಡು

ಚೊಚ್ಚಿಲ ಬಸುರಿಗೆ ಐದನೆಯ ಇಲ್ಲವೆ ಏಳನೆಯ ತಿಂಗಳಲ್ಲಿ ಅಕ್ಕರತೆಯಿಂದ ಕುಪ್ಪಸದ ಉಡುಗೊರೆ ಮಾಡುತ್ತಾರೆ ಆಗ ಹೇಳುವ ಹಾಡಿದು. ಇದರಲ್ಲಿ ಬಸುರಿಗೆ ಉಂಟಾಗುವ ಬಗೆಬಗೆಯ ಬಯಕೆಗಳು ಬಣ್ಣಿಸಲ್ಪಟ್ಟಿವೆ.

ಛಂದಸ್ಸು:—ತ್ರಿಪದಿಯ ಪೂರ್ವಾರ್ಧ.

ಶಬ್ದಪ್ರಯೋಗಗಳು:—ನೆನೆದಂಡಿ=ಮೊಗ್ಗಿಗಳ ದಂಡೆ. ಆರಾಕು=ಆರಲಿಕ್ಕೆ ಹಾಕು. ಕಂಟಲಿ ಎತ್ತು=ಮುಟ್ಟುಹಾಕಿದ ಎತ್ತು.

ಶಬ್ದಪ್ರಯೋಗಗಳು:—ಇಸ=ವಿಷ. ದುಮ್ಮಸ ಮಾಡೆ=ಅದರಲ್ಲಿ ಅಡಿಗೆ ಮಾಡು. ಮಸರ=ಮೊಸರು. ಬಾನ=ಬೋನ. ತನುಗಾಳಿ=ತಂಪುಗಾಳಿ.

ಬಯಕೆಯ ಹಾಡು

ಒಬ್ಬ ಗರ್ಭಿಣಿಗೆ ಬಯಕೆಗಳು ಕಾಡುತ್ತವೆ. ಅವಳು ತಾಯಿಯಲ್ಲಿ ತನ್ನ ಬಯಕೆಗಳನ್ನೆಲ್ಲ ಬೇಡುತ್ತಾಳೆ. ಅವಳ ಸಲಿಗೆಯ ಮಾತು, ಹೇಳುವ ಬಗೆ ಎಷ್ಟು ಸೊಗಸಾಗಿವೆ: 'ಕಸಕಸಿ ಕೊಬ್ಬರಿ, ಹಸನುಳ್ಳ ಜಿಲಿಬಿಲಿ, ಬಿಳಿಯ

ಬೆಲ್ಲದ ಬಿಸಿಯ ಹೂರಣಗಡುಬು....ಇವನ್ನು ಮುಂದಿಟ್ಟರೆ ಇಸಮಾಡಿ ಒಂದು ತುತ್ತ ತಿಂದೇನು' ಎನ್ನುತ್ತಾಳೆ! ಇದರಂತೆಯೆ 'ಬಟ್ಟಿದ್ದಿ ಬಾಯಾಗ ಇಟ್ಟೇನು ತಾಯಿ' 'ತಾಳಲಾರೆನೆ ತಾಯಿ ತೋಳಾರೆ ತಾರ' --ಮೊದಲಾದುವು.

ಛಂದಸ್ಸು:—ಕುಸುಮಷಟ್ಪದಿಗೆ ಹೊಂದುತ್ತದೆ.

ಬೇನೆ ತಿನ್ನುವ ಹಾಡು

ಶಬ್ದಪ್ರಯೋಗಗಳು :—ಒಡಿಗಾಯಿ ಹಿಡಿಗಾಯಿ=ಹರಕೆ. ಓಕರಿಕೆ ಹುಟ್ಟಿಸುವುದಕ್ಕೆ ತುರುಬಿನ ಕೂದಲನ್ನು ಬಾಯೊಳಗೆ ಇಡುವರು.

ತೊಟ್ಟಿಲಲ್ಲಿ ಹಾಕುವ ಹಾಡು

ಹುಟ್ಟಿದ ಹನ್ನೆರಡನೆಯ ದಿನ ಕೂಸನ್ನು ತೊಟ್ಟಿಲಲ್ಲಿ ಹಾಕಿ ಹೆಸರಿಡುತ್ತಾರೆ. ಆಗ ಜೋಗುಳಹಾಡನ್ನು ಹಾಡುತ್ತಾರೆ. ಇಲ್ಲಿ ಕೊಟ್ಟಿರುವುದನ್ನು ಆ ಸಮಯದಲ್ಲಿ ಹಾಡುವರಾದರೂ ನಿತ್ಯಶಃ ಕೂಸನ್ನು ತೂಗುವಾಗ ಹೇಳಲಾಗುವಂತೆ ಇದರಲ್ಲಿಯ ವರ್ಣನೆಯ ವಿವರಗಳಿವೆ.

ಶಬ್ದಪ್ರಯೋಗಗಳು :—ಸಿಂದಿಗಿ=ಒಂದು ಊರು. ತಳ=ಸ್ಥಳ. ಸಾದ=ಕಪ್ಪು. ಬಿಂದೂಲಿ=ಮುಂಗೈಯ ಆಭರಣ. ನೆಳ=ನೆರಳು. ಅದರಂಗ=ಅದರಂತಹದನ್ನು.

ಅತ್ತೆಮನೆಯ ಕಾಟ

ಅತ್ತೆಯ ಮನೆಯಲ್ಲಿ ಸೊಸೆಗೆ ಅಲ್ಲಿಯ ಹೆಣ್ಣುಮಕ್ಕಳೆಂಬುವರಾರಿಂದಲೂ ಸುಖವಿರುವುದಿಲ್ಲ. ಅತ್ತೆ ಸೊಸೆಯರ ಕದನದ ವಿಷಯವಂತೂ ಸರ್ವಶ್ರುತವೇ ಇದೆ. ಅಲ್ಲದೆ ಗಂಡನ ಅಕ್ಕತಂಗಿಯರು ತಮ್ಮ ತಾಯಿಯ ಪಕ್ಷವನ್ನು ಹಿಡಿದು ಇವಳ ಕೂಡ ಕದನಮಾಡುತ್ತಾರೆ. ಅವಳಿಗೆ ಅಲ್ಲಿ ಆಸರೆಂದರೆ ಗಂಡ ಮತ್ತು ಮಾವ. ಮಾವನಿಗೆ ಸೊಸೆಯಂದಿರ ಮೇಲೆ ಬಲು ಅಕ್ಕರತೆ. ಏಕೆಂದರೆ ಅವರಿಂದ ತನ್ನ ವಂಶದ ಬಳ್ಳಿಯು ಬೆಳೆಯಲಿರುವುದು. ನಲ್ಲನ ಅನುರಾಗವೇನೋ ಸರಿಯೇ ಸರಿ. ಅಂತೂ ಗಂಡಸರ ಆಸರ; ಹೆಂಗಸರ ತ್ರಾಸ. ಆದರೆ ಗಂಡಸರು ಯಾವಾಗಲೂ ಮನೆಯಲ್ಲಿರುವವರಲ್ಲ. ಹೆಂಗಸರು ಮಾತ್ರ ಸದಾ ಬಳಿಯಲ್ಲಿದ್ದು ಕಿಟಿಕಿಟಿ ಮಾಡುವವರು. ಹೀಗಾಗಿ ಎಷ್ಟೋ ಸೊಸೆಯಂದಿರು ಕೆರೆಗಳ ಪಾಲಾಗುವುದುಂಟು. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಏನಾದರೂ ನಾಲ್ಕು ದಿನ ವಿಶ್ರಾಂತಿ ಸಿಕ್ಕಬೇಕಾದರೆ ಅದು ತವರುಮನೆಯಲ್ಲಿಯೆ. ಆದುದರಿಂದಲೇ ಹೆಣ್ಣುಮಕ್ಕಳಿಗೆ ತವರುಮನೆಯವರು ಹಬ್ಬಕ್ಕೆ ಕರೆಯಲು ಬಾರದಿದ್ದರೆ ಬಹಳ ದುಃಖವಾಗುತ್ತದೆ. ಈ ವಿಭಾಗದಲ್ಲಿ ಅತ್ತೆಯ ಮನೆಯ ತ್ರಾಸದ ಮತ್ತು ತವರುಮನೆಯ ಆಸೆಯ ಹಾಡುಗಳನ್ನು ಸಂಗ್ರಹಿಸಿದೆ.

ಅತ್ತೆ ಸೊಸೆಯರ ಜಗಳ

ಈ ಹಾಡಿನಲ್ಲಿ ಸೊಸೆಯೆಂಬವಳನ್ನು ಅತ್ತೆಯ ಮನೆಯಲ್ಲಿರುವವರು ಯಾವ ಯಾವ ಬಗೆಯಿಂದ ನೋಡುತ್ತಾರೆಂಬುದು ಸ್ಪಷ್ಟವಾಗಿ ಬಣ್ಣಿಸಲ್ಪಟ್ಟಿದೆ.

ಛಂದಸ್ಸು :—ತ್ರಿಪದಿ.

ಶಬ್ದಪ್ರಯೋಗಗಳು:—ಮಜ್ಜಿಗೆ ಮಾಡತ್ತೆವ್ವ=ಮಜ್ಜಿಗೆ ಮಾಡುವ ಅತ್ತೆವ್ವಾ. ಭಗ್ಗೆ=ಭಾಗ್ಯ. ಹಾಲೀ ಹರಕೊ=ತಾಳೀ ಹರಕೊ. ಜತ್ತೆ ನ್ಲೆ =

ಜೋಪಾನವಾಗಿ. ಮೇಲುಪ್ರಿ=ಮೇಲುಪ್ಪರಿಗೆ ಹಾದಿ ಸೋಬುತಿ=ಹಾದಿ ಪಾಲು.

"ಶಾಂವಕ್ಕಿ ಕುಟ್ಟೆಂದ್ರ"

ಈ ಹಾಡಿನಲ್ಲಿ ನಾದುನಿಯು (ಗಂಡನ ತಂಗಿ) ಸೊಗಸಿನ ಸಂಸಾರಕ್ಕೆ ಹೇಗೆ ಮುಳುವಾಗುವಳೆಂಬುದು ತೋರಿಸಲ್ಪಟ್ಟಿದೆ. "ನಡಿಯುವ ಹೆಣ್ಣಿಗೆ ನಾಮುನಿ ಮೂಲ" ಎಂಬ ಗಾದೆಯ ಮಾತಿಗೆ ಈ ಹಾಡು ತಕ್ಕ ದೃಷ್ಟಾಂತವಾಗಿದೆ. ಅವಳು ಅಣ್ಣನ ಅಂತಃಕರಣವನ್ನು ಹಿಂಡಿ ಹಿಪ್ಪಿಮಾಡಿ ಒಗೆತನ ಹರಿಸುವುದಕ್ಕೆ ಹೇಗೆ ಆಟ ಹೂಡುತ್ತಾಳೆಂಬುದನ್ನು ನಾವು ಇಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳುವೆವು ಈ ಹಾಡು ಒಂದು ಕಥೆಯಂತಿದೆ.

ಛಂದಸ್ಸು:— ತ್ರಿಪದಿಯ ಪೂರ್ವಾರ್ಧ

ಶಬ್ದಪ್ರಯೋಗಗಳು:—ಶಾಂವಕ್ಕಿ=ಶಾಂವಿ ಎಂಬ ಒಂದು ತರದ ಧಾನ್ಯ. ಧಸಿಸು=ಅಕ್ಕಿ ಕುಟ್ಟು ಟಿಓಟಿ=ಕರಕರೆ ಹೋಂತೂಟ್ಲೆ=ಹೊತ್ತಿರುವುದರೊಳಗಾಗಿ (ಹೊತ್ತುಂಟಲೆ) ಇಟ್ಟು=ಇಷ್ಟು

ಹಾಸ್ಯದ ಹಾಡುಗಳು

ಮದುವೆಯ ಕಾಲದಲ್ಲಿ ಉಪಯೋಗಿಸುವ ಬೀಗರ ಹಾಡುಗಳು **ಕೂಡ** ಹಾಸ್ಯದವೇ. ಆದರೆ ಅವುಗಳಲ್ಲಿರುವುದು ಅಪಹಾಸ್ಯ. ಈ ವಿಭಾಗದಲ್ಲಿರುವವು ಅಂತಹವಲ್ಲ. ಇವು ನಕ್ಕು ನಗಿಸುವಂತಹವು. ಎರಡನೆಯ ವಿಭಾಗದೊಳಗಿನ ಹಾಡುಗಳಲ್ಲಿಯೂ ಒಂದು ಬಗೆಯ ಹಾಸ್ಯವಿದ್ದದ್ದು ನಿಜ. ಆದರೆ ಅದೂ ಇಂತಹದಲ್ಲ. ಅದಕ್ಕೆ ಸರಸವೆಂದು ಹೇಳಬಹುದು. ಆ ಪರಿಹಾಸ-ಅಪಹಾಸಗಳಿಗಿಂತ ಭಿನ್ನವಾದ ಅಟ್ಟಹಾಸವು ಈ ವಿಭಾಗದಲ್ಲಿ ನಿರೂಪಿತವಾಗಿದೆ.

' ನೂಲೊಲ್ಯಾಕ ಚೆನ್ನೀ '

ಈ ಹಾಡಿನ ಭಾವ ಸರಳವಿದೆ.

ಶಬ್ದಪ್ರಯೋಗಗಳು:— ಚಿಲ್ಲ=ಕದರುಹಾಕುವ ಕಿವಿ (ಚರ್ರದ್ದು). ಹಮ್ಮಿಗಿ=ಚಕ್ರಕ್ಕೆ ಸುತ್ತುವ ದಾರ. ನಡುವಿನ=ಸೊಂಟದಲ್ಲಿರುವ. ಗುಗ್ಗರಿ=ತಿನ್ನುವುದಕ್ಕೆಂದು ಕುದಿಸಿದ ಕಾಳುಗಳು.

ಕಿವುಡರ ಹಾಡು

ಗಂಡ, ಹೆಂಡತಿ, ಅತ್ತೆ ಎಲ್ಲರೂ ಕಿವುಡರು. ಒಬ್ಬರು ಒಂದು ಕೇಳಿದರೆ ಇನ್ನೊಬ್ಬರು ಇನ್ನೊಂದು ಹೇಳುತ್ತಾರೆ. ಮೊದಲು ಸೊಸೆಗೆ ದಾರಿಕಾರನೊಬ್ಬನು ಹಾದಿಯನ್ನು ವಿಚಾರಿಸುವನು. ಇಲ್ಲಿಂದ ಮುಂದೆ ಒಬ್ಬೊಬ್ಬರ ಅಸಂಬದ್ಧ ಪ್ರಲಾಪಕ್ಕೆ ಆರಂಭ.

ಛಂದಸ್ಸು:—ತ್ರಿಪದಿಯ ಪೂರ್ವಾರ್ಧ.

ಶಬ್ದಪ್ರಯೋಗಗಳು:—ಭಾರಿಗೆ ಮತ್ತು ಮೂಳ=ಬೈಗುಳುಗಳು.

ಜೀನನ ಹಾಡು

ಇದೊಂದು ಯಕ್ಷಿಣಿಯ ಕಥೆ. ಜೀನನೊಬ್ಬನು ನೈವೇದ್ಯದ ಸಲುವಾಗಿ ಶೀರ ತುಸು ಅಡಿಗೆಯನ್ನು ಮಾಡಿಸಿಕೊಂಡು ಎಳ್ಳಾಮಾಸೀ ದಿನ ಹೊಲಕ್ಕೆ ಹೋದನು. ಆ ಇದ್ದಷ್ಟು ಅಡಿಗೆಯನ್ನು ಗುಬ್ಬಿಕಾಗೆಗಳು ತಿಂದುಬಿಡು ವವು. ಮೋರೆ ಒಣಗಿಸಿಕೊಂಡು ಕುಳಿತಿರುವ ಜೀನನ ಮುಂದೆ ಒಬ್ಬ ಯಕ್ಷಿ ಣಿಯು ಬಂದು 'ನನ್ನ ನೈವೇದ್ಯವನ್ನು ನನಗೆ ಕೊಡು' ಎಂದು ಕೇಳುವಳು. ಹಸಿದು ಹೊಟ್ಟೆ ಉರಿಯುತ್ತಿರುವ ಜೀನನು ಹಸಿದಂಟುಗಳಿಂದ ಆವಳನ್ನು ಚೆನ್ನಾಗಿ ಥಳಿಸಿದನು. ಅವಳು ತನ್ನ ಮಂಗಲದ್ರವ್ಯ (ಅರಿಷಿಣ, ಕುಂಕುಮ, ಕಾಡಿಗೆ, ಗಂಧ) ಗಳನ್ನು ಮಂತ್ರಿಸಿ ಅವನ ಬೆಳೆಗಳ ಮೇಲೆ ತೂರುವಳು. ಅದರಿಂದ ಆ ಬೆಳೆಗಳಿಗೆಲ್ಲ ಬಗೆಬಗೆಯ ರೋಗಗಳುಂಟಾಗಿ ಅವೆಲ್ಲವೂ ಕೆಟ್ಟುಹೋಗುತ್ತವೆ.

ಛಂದಸ್ಸು:—ಮಂದಾನಿಲ ರಗಳೆಗೆ ಸಮೀಪವಾಗಿದೆ.

ಶಬ್ದಪ್ರಯೋಗಗಳು:—ಅದ್ನಗಿದ್ನ=ಅರ್ಧ ಸೇರು, ಗಿರ್ಧ ಸೇರು. ಕುಳ್ಳ್ಯಾಗ=ಚಿಕ್ಕ ಮಡಿಕೆಯಲ್ಲಿ. ಛರಗ=ಅಡವಿಯ ನೈವೇದ್ಯ ಅಂಟಿ=ಮಂಚಿಕೆ. ಎಲ್ಲ=ಎಲ್ಲಮ್ಮ (ದೇವತೆ). ಬತ್ತಗಾಡಿಗೆ=ಜೋಳದ ತೆನೆಗಳಿಗೆ ಬೀಳುವ ಕಾಡಿಗೆರೋಗ. ಬಂಜಿ=ಹತ್ತಿಯ ಕಾಯಿಗಳಿಗೆ ಬೀಳುವ ರೋಗ. ಸೊಳ್ಳಿ ಹಾಯಿ=ಗೋದಿಯ ಬೆಳೆಯ ಮೇಲೆ ಇಟ್ಟಂಗಿಯಂತಹ ರೋಗ ಬೀಳುವುದ ರಿಂದ ಬೆಳೆಯೆಲ್ಲ ಸೊಳ್ಳಾಗುತ್ತದೆ. ಕೊಳ್ಳಿ=ಕಡಲೆಯಗಿಡಗಳನ್ನು ಒಣಗಿ ಸುವ ಕೆಂಪು ರೋಗ.

ಮಂಗ್ಯಾನ ಹಾಡು

ಕೋತಿಗಳಿರುವ ಊರಲ್ಲಿ ನಡೆಯುವ ವಿಚಿತ್ರವು ಈ ಹಾಡಿನಲ್ಲಿ ವರ್ಣಿಸ ಲ್ಪಟ್ಟಿದೆ.

ಛಂದಸ್ಸು:—ಮಂದಾನಿಲರಗಳೆ.

ಶಬ್ದ ಪ್ರಯೋಗಗಳು:— ಶಾರ=ಪಟ್ಟಣ. ಮಂಗ್ಯಾ=ಕೋತಿ. ಮಿಗ–ಮೃಗ ಕಾಳಕಡಿ=ದವಸಧಾನ್ಯ. ಬಂದೈತಿ=ಬಂದಿದೆ. ಆಣಿ=ಬೆಲ್ಲದ ಪಾಕ. ಕಟ್ಟಿಕೇರಿ=ಕಟ್ಟಿಬಿಟ್ಟು ಬೆಳಖಿಂಡಿ=ಬೆಳಕಿನ ಕಿಂಡಿ ಇದ್ದಾಸು=ಇದ್ದಷ್ಟು. ಹಾಸ=ಸೂಲು ತೋಡುವ ಕಟ್ಟಿಗೆ ಹುಂಜ=ನೂಲಿಸ ಲಡಿ. ಒಳಕು=ನೆನಪು ಮಾಡಿಕೊಂ (?) ಆಕಿ=ಆಕೆ. ಯಾಳಿ=ವೇಳೆ. ನೆಪ್ಪು=ನೆನಪು. ಕೊನೆಯ ಸುಡಿಯು ಮುದ್ರಿಕೆಯಂತೆ ಇದೆ